FINANCIAL BUSINESS

Presentation of Supplementary Estimates 1981-82.

SRI M. VEERAPPA MOILY (Minister for Finance and Tourism).—Sir, I wish to present the Supplementary Estimates for the year 1981-82 as required under Article 205 (1) of the Constitution of India.

MR. SPEAKER.—Supplementary Estimates are presented.

General Discussion on Budget

† SRI MICHAEL B. FERNADEZ (Bharathinagar).—Mr. Speaker, the other day we heard hon, member Sri Basavalingappa, who was a Minister for quite some time and was also the aspirant for the Chief Minister's gaadi. He propounded a very dangerous theory of minister rial irresponsibility of the mismanagement of all the public affairs. With one sweep of the brush, he said that the corruption that is going on in this great land of ours, which Mahathma Gandhi wanted to convert into Rama Rajya flowing with milk and honey, is because of the officers. I do believe that there are officers who are corrupt. I believe that the Government also can have officers that it wants. If the Government wants good officers, it can have only good, honest and efficient officers but if the Government wants corrupt officers, it can have them and even encourage them. We do know that whenever we complain against a corrupt officer, that officer gets promotion and becomes blue eyed boy of the Minister because the Minister can spot out the corrupt officer who can help tho Minister make money I do not know whether this efficiency which Sri Basavalingappa propounded the other doy, is going to give any hope to the people of this State. There is a reference in the budget speech to the clean and efficient administration. The hon. Finance Minister says in the 6th page:

> "I am happy to inform you that our efforts in providing a clean and efficient administration have been recognised."

The only thing that I can say is, at the entrance of the Vidhana Soudh there is an engraving that "Government's works is God's work". I, that makes everything clean and efficient inside the Vidhana Soudha then all glory to Sri Veerappa Moily. If we are going to leave all our efficient work and clean administration to God, I am quite sure that this building might be struck by lightning because God is not going to tolerate that are going on around here. There is no clean and efficient administration during the past one year excepting a few

† Indicates that remarks or speeches have not been revised by the member concerned.

minor cases of corruption being exposed by the Opposition and here and there someone being caught in the net by the CBI and so on. Having said this, I would like to deal with a few features of this budget speech in the first place. It makes several pompous claims of various achievements. I will not even take the trouble of givine examples because it is replete with these claims all over the speech It also makes a few pious hopes. Here, I would like to give an example of atleast one such hope. At page 35, the Minister says in regard to Vijayanagar Steel Plant. He has been saying ever since he became Finance Minister and ever since Sri Gundu Rao became the Chief Minister. There has been mere expression in the budget speech at least. Orissa has got a significant shore-based Steel Plant for itself this time and necessary money has been sanctioned. Foundation was laid to Vijayanagar Steel 11 years ago and one day it is bound to crumble before the second Steel Plant is got ready for Orissa. The Finance Minister says :

> "The Project Report for the Vijayanagar Steel Plant which has been cleared by the Steel Authority of India Ltd., is under consideration of the Government of India for studying the transport and the raw material linkages. We hope a favourable decision will be taken by the Government of India regarding the establishment of this Plant."

The foundation was laidb y none other than the Prime Minister of this county and most powerful Smt. Indira Gandhi. Again in respect of Central Government, the Finance Minister says :

> We also expect a larger share of Central Taxes."

This is another pious hope. This hope is given in a one-line paragraph. In addition to these pious hopes, it also holds out umpteen populist promises. I do not know whether this is an indication of the mid-term poll because there are a lot of promises for the people. So, I have to give just one example in respect of the Government servants about whom the Chief Minister the other day put up a good defence. He said that we should not demoralise the Police. There is also a promise by the Finance Minister. He says,

> "A comprehensive housing scheme for the constabulary of our State to provide houses to all the constables within a period of four years at a rate of 5,000 houses per annum from 1982-83, with loan assistance is being posed to HUDCO and LIC in order to fulfil the long pending demand of constables to provide suitable accommodation to them."

20,000 houses in four years ! If we take it as ordinary houses, it would cost something like Rs. 60 crores at current rates of cons-

truction and material and labour cost. It is anybody's guess that by 1987 what sort of impact the Government would have to face This is one of these promises which the Government is never tir edof holding out.

3-00 P.M.

As a result, I think they may succeed once again like in the past by getting some votes. But, I do not know if the policemen will get their houses and by the end of the elections whether it is mid-term poll or at the end of the regular duration will be over. Now, besides this, in the budget there are a few sops to the common people.

SRI R. GUNDU RAO.—Why do you worry about election ?

SRI MICHAEL B. FERNANDES.—Everyday the paper is full. I like Sri Murthy's cartoon in Deccan Herald about a week ago where it shows you in front of a mirror looking at your own mirror image and saying "strictly between us is there going to be a mid-term poll", What is to be done ? Even you do not know whether you are going to have. That is the kind of demorcracy that we have here. Not the people, not the elected representatives forget the Opposition, not even the ruling party, forget the ruling party MLAs, not even the cabinet, the council of Ministers, forget that, not even the Chief Minister can decide whether there is to be a poll. In America once in 4 years there is a Presidential election in November and in January the person who wins the election is installed as the President In England, which is the mother-Parliament which we should copy if there is to be a mid-term poll it is discussed thoroughly and everyone knows that it is coming. Everyone knows about it. Here it is a secret thing. It is some sort of a family affairs. No-one knows till you take it out. That is a sort of thing. That is our democracy which has been reduced. Thanks to your party and party leader.

SRI R. GUNDU RAO.—Why do you worry about the poll ?

SRI MICHAEL B FERNANDES.—I won't mind even if there is to be a poll to-morrow.

ಶ್ರೀ ಆರ್. ಗುಂಡೂರಾವ್.—ವಿರೋಧಪಕ್ಷದ ಸದಸ್ಯರೆಲ್ಲರೂ ಇನ್ನೂ ಆರ್ಧದಾರಿಯಲ್ಲಿಯೇ ಇದ್ದಾರೆ. ನೀವೆಲ್ಲ ಒಂದಾದ ಮೇಲೆ ನಾವು ಅನೌನ್ಸ್ ಮಾಡೋಣ ಎಂದು ಈಗ ಸುಮ್ಮನೆ ಇದ್ದೇವೆ. At least I must compliment Sri Gangadharan.

SRI MICHAHEL B. FERNANDES.—Anyway, the Opposition will face its own problems. I am sure it is prepared to face the people also. As I said in the budget there are a few sops. What he gives with right hand he takes back with left hand. What he gives with right hand many times more he is taking back with the left hand. It is

stated in respect of a very honest, straight-forward charitable person that what the right hand gives, the left hand should not know i.e., the left hand should not know what the right hand gives. But, Sri Moily does not do that. In Sri Moily's case the right hand and the left hand consult each other. He gives with the left hand. He does not say how much he is giving. It has not been quantified. A few concessions that have been shown to the people have not been quantified. Our people are kept guessing. Though with the left hand he gives, it has consulted the right hand already. He takes back Rs. 25 crores in the form of taxes, that too far the first time retrospective taxes. I never knew that there is such a thing of retrospective taxes and retrospective for the duration of 12 years. That kind of a tax can only cause inflamation of inflation, because that much of money sucked out from the people by the Government, from those in trade will be taken away from the people and it will have a chain effect and it will make a permanent impression on the price situation. So, here the Minister has to rob one. It is not even robbing Peter to pay Paul. He is robbing both Peter and Paul here, but refusing to give a little to either Peter or Paul, I do not know. It amounts to something like a day-light robbery, Inspired probably by the chain of dacoities that are going on, our Minister also has resorted to a day-light robbery in a thoroughfare. Unlike those people who come in the night, here it is in the main thoroughfares of our State. Now, even while giving these sops the benefit as I said is very marginal. But, here is a concrete case where benefits could have been given. There is a Profession tax-much hated and much disliked profession tax which is charged above Rs. 600. Now, with the meteoric raise of consumer price index even a sweeper in a factory today gets more than Rs. 600. He is required to pay this tax. His salary is high, not because of the increase in the improvement of the standard of living. He has not been given more money for that purpose. The salary is high, because of the high cost of living and DA has gone up. By your own admission Rs. 36 crores were given to your own Government servants in 4 instalments. Now, these workers could deserve this tax relief. In fact, this tax should be abolished. More workers are getting now into this net of the professional tax. This kind of concession he has not thought of giving. What sort of tax concessions are these ? You have the withdrawal of surcharge on drugs and medicines It is the withdrawal of surcharges, not the sales tax itself. It is a minute part of the bill. This is a sop. As I said his left hand is robbing manifold and he has charged a 25% increase on all chemicals. Now, as you know all medicines need chemicals. So, the cast of medicines

will go up. You take away Rs. 10 from the needy consumer and give him a concession may be of Rs. 0.50. So, one is made to think that there is a concession that surcharge has been removed. Another example is of the shoes and chappals. But, on leather there is an additional tax which is the basic raw material for shoes and chappals. Here, you take away this tax perhaps surcharge. In the first place. you will hardly get chappals and shoes for Rs. 30. Even if you want to throw chappals at the Ministers in the public meeting you cannot afford them to-day. You cannot buy chappals because they are more than Rs. 30. This kind of concessions are not countervailing-more than countervailing they are the impositions on the people. I think there is retrospective effect for the turnover tax on agents. They are bound to pass it on to the consumers. That will be passed on to the consumers. Even on soft drinks there is an increase of 33% on the taxes. Increase on taxes is of the order of 25% to 33% on soft drinks, and then on cement and steel 2% additional tax is there. You can see the effect of the cost of it and the cost of construction will go up. Consumer price index will go up. DA will have to be given. What Sri Moily has achieved this time as in the previous years is the highest dose of taxation which will cause, I am sure, much more misery for the people. I am inclined to think that Sri Basavalingappa is right, Some IAS Officers, who are brainy officers, I think sometimes they use their brains deliberately in the wrong direction. I would like to say one such point or on such instance. In very strict characters it has been printed here.

> "It is estimated that the wholesale prices in Karnataka during the year have risen by a mere 3.8 per cent from April to December, 1981...'

All these in bold characters and in plain characters ;

> "...compared to the massive increase of 24 per cent which took place during 1980-81"

The 1980-81. Duration is of 12 Months from March 1980 to March 1981 12 months' 24% is compared with the following year's 9 months 3.8%. As you know, the index has a seasonal fluctuation. Index goes up and comes down. What you took at the extrimity of a giving period, is not necessarily the picture dbring the year.

Now, if you take 9 months 3.8% and compare with 24% in the first place you must know of that increase in the following year. The increase cannot be over that. It is impossible. Generally it never happens but because of big dose of inflation in the following year there is little increase as compared to the previous year and as

percentage it can be lower. But here the comparison as between 2 incomparable things 12 months from March to March with 9 months from April to December this just not statistics and honest arithmetical approach. Actually if we take 9 months period it comes to 11% only. So it is not 24% and further this 11% has come down to about 4%. May be it has come down because of better crops. So, there is nothing to prove about in this manner and in a manner that the Government mislead the public and the danger of this is that merchant class will take note of it and will think that the Government feels that what we have raised is not higher and the result is the merchant class will rise the prices further. This will give immoral boost, immoral fillip to the merchants to raise prices further.

Then, you have given four D. A. increases to the workers *i.e.*, worth of Rs. 30 crores. Who has taken this money? It has not gone to the workers. This money you have allowed the market to extract from the workers from the peoples purse first and later on marginally you have compensated the workers. It is not full utilization. So, to give an impression that you are for the workers and you have given them Rs. 30 crores is I think again misleading the public. Then, you have impounded Rs. 11 crores of D.A. You have done this when the workers want it. You are not curbing the market, you are not curbing the merchants class and you do not want to curb big businessmen but you have tried to curb poor consumers who have to work for you efficiently. It is a very unfortunate thing. Then, you have increased little wage increase and so on. On this there was hope among the working class that they get some increase in their wages. But the very next day a news item appeared in the papers that the Union Finance Minister Sri Pranab Mukherjee has said that no State Government must announce wage increase without the clearance from the Centre as much as mid-term poll will have to be cleared by the Central Government, Even for a small wage revision the State Government has got to await directions from the Centre. And then you have not been able to solve the retirement age question. It is one of the major demands of the employees. You are not agreeing to raise the retirement age to 58. I don't think by not making 58 you will bring down unemployment. If at all for a period of 3 years there will be little disruption. Thereafter the same cycle will go on. If you retire them at 55 they remain unemployed from the age of 55. So unemployment in the labour market doesn't alter because your own economic survey takes people upto the age of 59, Therefore,

SRI R. GUNDU RAO.—What is your suggestion?

SRI MICHAEL B. FERNANDES.--My suggestion is you must raise to 58. The retirement age must be 58. If the I A S people can go upto the 58, if the Central Government can go upto 58, why not your State Government Servants? As I pointed once atleast some of them would tend to be less corrupt if they can go upto 58 and would help them because some of their daughters to be "still settled".

Having said this I would like to say a word about unemployment problem You have the apprenticeship training scheme. This you cannot speak of trying to implement in full vigour because when you are doing or you wanting to do Smt. Indira Gandhi has knocked out of our 20 point programme. I have never beleived this 20 point programme and more particularly implementing programmes of this kind. In your apprenticeship scheme unemployed youth come and work as trainees every year and then go home without any permanent jobs. It is like the earlier subject that was discussed here giving permanent jobs to the people employed temporarily for more than 3 years and so on. It is same in this Apprenticeship Training also. You never give them proper training. You just give them Rs. 130 and for 2-3 years they work and they are replaced by other workers. So, permanent jobs are never created and the result they are removed from jobs after 2—3 years. This time this subject has been removed from your 20 point pogramme. By this the number of Industrial Training Institute holders and Certificate holders who remain unemployed hasgone up by 98% over the previous years. This is bound to happen when jobs are not created after their training.

Now, I would like to say something about minimum wages. You talk about the welfare of downtrodden and the works. Of course, by and large majority of the workers generally are downtrodden people. Here I want to say something about the minimum wages now because we may not be able have a debates on the labour demand — I think after this brief sessions we may have to pack up. I am talking in terms of this Assembly. Some of us may come back. I do not know how many of you will come back. Anyway now I just want to make one point. Now lot of unhappiness among the workers about the minimum wages finally announced. In this announcement lot of waterdown has taken place. I do not know this has taken place how. Here again I must say about the corruption and favouritism. One former M.L.A who is also the INTUC General Secretary said adressing in a seminar he said, Dont you think you of giving bribe and reducing minimum wages, to be announced in the priliminary notification. Whom could he bribe? He could not bribe the opposition Members. He could not bribe the workers. Then whom should he bribe? He could bribe only the Government people to bring

them lower and I don't know how the corruption is to be removed. Now you say Government work is God's work. So, if you won't take action against the corrupt officials and if God does not strike down I think people will have to punish them. You must allow people to deal with them. Let us form Anti-corruption Squads not your police squad it must be people squad-you allow people to form such squads and give them guns, give them knives. Let those people kill those people, finish those people who take bribes, who indulge in corrupt practices. Now, coming to the minimum wages, I should say you have watered down D.A. pattern. D.A. is hardly a D.A. But you have given a comprhensive term for this Dearness Allowance. The wholeworld will laugh at your definition of formula you have given to the D.A. pattern. Naturally the private employer will copy it when Goverment itself says like that. Further they can do so beacuse the private employers and the companies do not come under the purview of the provisions of the minimum wages Act. So, they will copy the dirty pattern of yours. Then, it is said that the Hoteliers have gone to the court. The Cinema Theatre Owners have gone to the court. Sir, you know the effect of the court action. It takes long years to settle the disputes.

Now, how do we set it right; I can only say that the Minimum Wages Act and the Notifications under the Act should be brought under the 9th schedule so that these notifications are not challenged. You must approach the Prime Minister of the country; she has got vast majority in both the Houses of Parliament. Even capitalists will have to support; that much of weightage could be given because capitalist production will not be bought by the people. Even minimum wages will not be paid by hoteliers and cinema theatre owners; minimum wages has become maximum wages for them. I suggest that you use all your intelligence and political power to bring some how these notifications under the 9th schedule so that these workers get the minimum wages.

(At this stage some of the visitors in the public gallery shouted slogans saying, ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಧಿಕ್ಕಾರ, ಶ್ರೀ ಎ. ಕೆ. ಸುಬ್ಬಯ್ಯ ಜಿಂದಾಬಾದ್...)

Now, you need to mop up resources. One does not see how this Budget speech really shows ways of mopping up resources. But I would like to give a suggestion which will help you create more resources or make use of the available resources. It will also solve the unemployment problem to a certain extent. The Hon'ble Chief Minister has a burden of 14,000 stipendary graduates on his shoulders. One point with regard to recruitment of graduates. In Accountant General's office, they recruit only graduates. Before the year 1966,

the audit was 100%, after 1966, it has come down to 66.50%, in the year 1971 it came to 25% and from May 1980 onwards it is 8½%. Eversince the present Prime Minister came to office, the audit has come down progressively. The Governmental expenditure is going up every year. This year, you will be spending about Rs. 1,600 crores in terms of revenue expenditure and capital expenditure. Even if we take 2% mismanagement in a year, it comes to about Rs. 28 crores. Therefore, I suggest, restore 100% audit, and provide employment to all the unemployed gradnates. All graduates can be accomodated as auditors. To provide employment to all these 14,000 graduates, it may not cost you more than Rs. 2 crores. If you spend Rs. 2 crores on these recruitments, you can save mismanagement of Rs. 28 crores for your developmental works. Today, all these monies are going into the pockets of corrupt contractors, officials and even legislators also. My suggestion is, you withdraw taxes and restore 100% audit so that we can save our scarce financial resources of the State and also provide employment particularly to the stipendary graduates. I am sure, if this is done, you will certainly be keeping up the promise of giving clean and efficient administration on the one hand and trying to reduce the financial difficulties of the people of this State. I thank you for the timeallowed to me and hope to look forward for the continuation of this Session when one can speak at length on labour problems and the like. Thank you.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದ ಅರ್ಥ ಸಚಿವರು ಮಂಡಿಸಿರತಕ್ಕ ಆಯವ್ಯಯಕ್ಕೆ ಸಂಪೂರ್ಣವಾದ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತಾ ನಾನು ಕೆಲವು ವಿಚಾರಗಳನ್ನು ಈ ಸದನದ ಮುಂದೆ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅರ್ಥ ಮಂತ್ರಿಗಳವರು ೮೫ ಕೋಟಿ ರೂಪಾಯಿಗಳ ಅಧಿಕ ಉತ್ಪಾದನೆಯನ್ನು ಕಂಡು ಹಿಡಿದು ಚರಿತ್ರೆಯನ್ನೇ ನಿರ್ಮಾಣ ಮಾಡಿದ್ದಾರೆ. ಅದರಲ್ಲೂ ಶಿವಮೊಗ್ಗ ನಗರದಲ್ಲಿ ನಡೆದಂಥ ಸಚಿವ ಸಂಪುಟದ ಸಭೆಯಂಲ್ಲಿ ನೂರಾರು ವರ್ಷಗಳ ಕಾಲ, ಸಹಸ್ರಾರು ವರ್ಷಗಳ ಕಾಲ ಅಲ್ಲಿಯ ಜನತೆ ನೆನಪು ಇಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನ ಮಾಡಿ ಭದ್ರಾವತಿ ಸಕ್ಕರೆ ಕಾರ್ಖಾನೆಯನ್ನು ಮಂಜೂರು ಮಾಡಿಕೊಟ್ಟಿದ್ದಾರೆ, ಶಿವಮೊಗ್ಗಕ್ಕೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಬಗ್ಗೆ ಹೇಳಿದ್ದಾರೆ, ಮತ್ತೆ ಶಿವಮೊಗ್ಗ ಭದ್ರಾವತಿ ಸೇರಿ ಒಂದು ಕಾರ್ಪೊರೇಷನ್ ಮಾಡುವುದಾಗಿ ತಿಳಿಸಿದ್ದಾರೆ. ಇದಿಷ್ಟೂ ಕೂಡ ಒಂದು ಚರಿತ್ರೆಯನ್ನೇ ನಿರ್ಮಾಣ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ನನ್ನ ಸಂಪೂರ್ಣವಾದ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಇಷ್ಟು ಹೇಳಿ ಬೇರೆ ವಿಷಯಗಳ ಬಗ್ಗೆ ಕೆಲವು ಮಾತುಗಳನ್ನು ಹೇಳದೇ ಗತ್ಯಂತರವಿಲ್ಲವಾದುದರಿಂದ ಹೇಳುವುದಕ್ಕೆ ಬಯಸುತ್ತಿದ್ದೇನೆ. ಸ್ವಾಮಿ ರಾಜ್ಯದ ಅಂದಾಜು ಸಮಿತಿಯ ಅಧ್ಯಕ್ಷನಾಗಿ ಎರಡು ವಿಚಾರಗಳನ್ನು ನಾನು ಈ ಸದನದ ಮುಂದೆ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ನಮ್ಮ ಮೇಲೆ ಗಧಾ ಪ್ರಹಾರವನ್ನು ಮಾಡಿರತಕ್ಕ ವಿಚಾರ. ಅವರು ತಮ್ಮ ಮಿತಿಯನ್ನು ಮೀರಿ ನಮ್ಮ ಸಮಿತಿಯವರು ಮಾಡಬೇಕಾಗಿದ್ದ ಕೆಲಸದಲ್ಲಿ ಕೈ ಹಾಕಿ ಮಾಡಿದ್ದಾರೆ ಆದುದರಿಂದ ಅದರ ಬಗ್ಗೆ ಪ್ರಿವಿಲೇಜ್ ಮೋಷನ್ ಹಾಕಬಹುದೇ ಬಿಡಬಹುದೇ ಎನ್ನುವ ಬಗ್ಗೆ ನಾಳೆ ಯೋಚನೆ ಮಾಡುತ್ತೇನೆ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರ ಕೆಲಸವೇನು? ಅಕೌಂಟ್ಸ್ ಡಿಪಾರ್ಟ್‌ಮೆಂಟಿನವರು ಮಂಡಿಸಿರತಕ್ಕ ಲೆಕ್ಕ ಪತ್ರವನ್ನು ವಿಚಾರ ಮಾಡುವುದೇ ಅವರ ಕೆಲಸ ಹೊರತು ದೈನಂದಿನ ಆಡಳಿತ ವ್ಯವಸ್ಥೆಯನ್ನು ಕುರಿತು ಚರ್ಚೆ ಮಾಡುವುದು ಅವರ ಕೆಲಸವಲ್ಲ. ಅದು ನಮ್ಮ

ಸಮಿತಿಗೆ ಸೇರಿರತಕ್ಕಂಥ ಕೆಲಸ. ಆದುದರಿಂದ ಅಂದಾಜು ಸಮಿತಿಯವರ ಕೆಲಸವನ್ನು ಅವರು ಇವತ್ತು ಮಾಡಿದ್ದಾರೆ. ಆದುದರಿಂದ ಇದನ್ನು ನಾನು ಕಟುವಾಗಿ ವಿರೋಧಿಸುತ್ತಿದ್ದೇನೆ. ಇದರ ಬಗ್ಗೆ ಇನ್ನೊಮ್ಮೆ ಅವಕಾಶ ಸಿಕ್ಕಾಗ ಅದರ ಬಗ್ಗೆ ಮಾತನಾಡುತ್ತೇನೆ. ಎರಡನೆಯದಾಗಿ ಅಂದಾಜು ಸಮಿತಿಯವರ ಕೆಲಸಕಾರ್ಯಗಳು ಏನು ಅವರು ಏನು ಮಾಡಬೇಕು ಎನ್ನುವ ಬಗ್ಗೆ ತಮ್ಮ ಗಮನಕ್ಕೆ ತರಬಯಸುತ್ತೇನೆ.

"a) to report what economies, improvements in orgainsation, efficiency or administrative reform, consistent with the policy underlying the estimates, may be effected;

(b) to suggest alternative policies in order to bring about efficiency and economy in administration;

(c) to examine whether the money is well laid out within the limits of the policy implied in the estimates; and

(d) to suggest the form in which the estimates shall be presented to the Legislature".

These are the function of the Estimates Committee. ಸಂಪೂರ್ಣವಾಗಿ ಈ ನಿಯಮವನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಕಡೆಗಣಿಸಿದ್ದಾರೆ. ಪಿ.ಎ.ಸಿಯವರ ಜೊತೆಯಲ್ಲಿ ಪೈನಾನ್ಸ್ ಡಿಪಾರ್ಟ್‌ಮೆಂಟಿನವರು ಚರ್ಚೆ ನಡೆಸಬೇಕು ಆದರೆ ಅದರ ಬಗ್ಗೆ ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎಂದು ಬಹಳ ದುಃಖದಿಂದ ಈ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹೇಗೆ ಕಡೆಗಣಿಸಿದ್ದಾರೆ ಎಂದರೆ ರೂಲ್ ೧೬೧ ಕ್ಲಾಸ್ (೩)ರಲ್ಲಿ ಏನು ಹೇಳುತ್ತದೆ ಎಂದರೆ...

"Subject to these rules the Budget shall be presented in such form as the Government may in consultation with the Estimates Committee, settle".

The words 'in consultation with the Estimates Committee', does not mean that the Budget should be revealed before the Committee. Budget is a secret document, I know it, but, they have to to discuss the norms and other things before presending the Budget. ಸನ್ಮಾನ್ಯ ಅಧ್ಯಕ್ಷರೇ, ಸುಮಾರು ೧೭ನೇ ತಾರೀಖಿನ ದಿವಸ ಬಡ್ಜೆಟ್‌ನ್ನು ಮಂಡನೆಯಾಗಿರುವುದು. ನಾನು ಅಂದಾಜು ಸಮಿತಿಯ ಅಧ್ಯಕ್ಷನಾಗಿ ಸುಮಾರು ೧೫ ದಿವಸಗಳ ಮುಂಚಿತವಾಗಿಯೇ ನಿಮ್ಮ ಆರ್ಥಿಕ ಇಲಾಖೆಯವರು ನಮ್ಮ ಮುಂದೆ ಹಾಜರಾಗಬೇಕು ಎಂದು ನೋಟೀಸ್ ಕೊಟ್ಟಿದ್ದೆವು. ೧೭ನೇ ತಾರೀಖು ಬೆಳಿಗ್ಗೆ ೧೦ ಗಂಟೆಗೆ ನಮ್ಮ ಮುಂದೆ ಹಾಜರಾಗಿ ಆಯವ್ಯಯದ ರೂಪರೇಶೆಗಳ ಬಗ್ಗೆ ನಮ್ಮ ಮುಂದೆ ಚರ್ಚೆ ಮಾಡಬೇಗೆಂದು ತಿಳಿಸಿದ್ದೇವೆ. ಅದು ಸಂವಿಧಾನಭದ್ಧವಾಗಿ, ಕಾನೂನಿನ ಚೌಕಟ್ಟಿನಲ್ಲಿರತಕ್ಕದರ ಬಗ್ಗೆ ಹೇಳಿದ್ದೇವೆ. ಅವರು ಒಪ್ಪಿಕೊಂಡಿದ್ದರು. ಅದರೆ...

೩–೩೦ ಪಿ.ಎಂ.

ಶ್ರೀ ಜೆ. ಹೆಚ್. ಪಟೇಲ್.—ನಾನು ಕ್ರಿಯಾಲೋಪ ಎತ್ತುತ್ತೇನೆ. ಕಾನೂನು ಹಾಗೆ ಇದೆಯೆ? ವಿತ್ತ ಮಂತ್ರಿಗಳಾದವರು ಸಂಪುಟಕ್ಕೂ ಕೂಡ ಕೊನೇ ಗಳಿಗೆಯಲ್ಲಿ ಹೇಳಬೇಕೆಂದು ಕಾನೂನಿನಲ್ಲಿದೆ.

SRI M. VEERAPPA MOILY.—The hon. Member expect to present the Budget before the Estimates Committee first and then place it on the floor of the House.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ಬಡ್ಜೆಟ್ಟನ್ನು ನಮ್ಮ ಮುಂದೆ ಮೊದಲೇ ಹೇಳಬೇಕೆಂದು ಅಲ್ಲ. ನಾನು ಕೂಡ ರೂಲ್ಸನ್ನು ಓದಿದ್ದೇವೆ. ಬಡ್ಜೆಟ್ಟಿನ ರೂಪರೇಷಗಳನ್ನು ಚರ್ಚೆ ಮಾಡಿದರೆ ಏನಾದರೂ ಬದಲಾವಣೆಗಳಿದ್ದರೆ ಹೇಳುವುದಕ್ಕೆ ಅವಕಾಶವಾಗುತ್ತದೆ. ರಹಸ್ಯವನ್ನು ಬಯಲು ಮಾಡಬೇಕೆಂದು ನಾನು ಕೇಳುವುದಿಲ್ಲ. ಆಯುವ್ಯಯದಲ್ಲಿ ನಮೂದಾದ ಅನೇಕ ಐಟಂಗಳು ೩-೪ ವರ್ಷಗಳ ಕಾಲ ಇದ್ದು ಕೊನೆಗೆ ಒಮ್ಮೆಲೇ ಮಾಯವಾಗುತ್ತವೆ. ಏತಕ್ಕೆ ಈ ರೀತಿ ಆಗುತ್ತದೆ ಎಂದರೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಇಲ್ಲದೆ ಬಡ್ಜೆಟ್ಟಿನಲ್ಲಿ ನಮೂದಿಸಿರುತ್ತಾರೆ, ಹೀಗಾಗಿ ಅವು ಬರೀ ಸರಸ್ವತೀ ಪ್ರಸನ್ನವಾಗಿರುತ್ತವೆ. ಈ ವರ್ಷ ನಮೂದಿಸಿದ ಕೆಲಸ ಮುಂದಿನ ವರ್ಷವೂ ಕಾಣುತ್ತಿರುತ್ತದೆ. ಕೊನೆಗೆ ೪ನೇ ವರ್ಷದಲ್ಲಿ ಅದು ಇರುವುದೇ ಇಲ್ಲ. ಈ ಒಂದು ದ್ವಂದ್ವ ಪ್ರತಿ ವರ್ಷವೂ ಆಗುತ್ತಿರುತ್ತದೆ. ಆ ಕಾರಣದಿಂದ, ಇದನ್ನು ಸರಿಪಡಿಸಬೇಕೆಂದು ನಾನು ಅಂದಾಜು ಸಮಿತಿಯ ಅಧ್ಯಕ್ಷನಾಗಿ ಈ ವಿಚಾರವನ್ನು ಪ್ರಸ್ತಾಪಿಸಿದ್ದೆ. ಅದಕ್ಕೆ ಅವರು ಏನು ಹೇಳಿದರೆಂದರೆ, ಇದು ತಮ್ಮ ತಪ್ಪಲ್ಲ, ಲೋಕೋಪಯೋಗಿ ಇಲಾಖೆಯವರ ತಪ್ಪು ಎಂದು. ಲೋಕೋಪಯೋಗಿ ಇಲಾಖೆಯವರು ಸಂಪೂರ್ಣವಾಗಿ ನಮ್ಮ ಮುಂದೆ ರೂಪರೇಷಗಳನ್ನು ಇಡುವುದಿಲ್ಲವೆಂದರು. ಪ್ರತಿ ವರ್ಷ ಆಯುವ್ಯಯವನ್ನು ತಯಾರಿಸತಕ್ಕ ಗಡಿಬಿಡಿಯಲ್ಲಿ ಆಡಳಿತಾತ್ಮಕ ಮಂಜೂರಾತಿ ಇಲ್ಲದೆ ಆಯುವ್ಯಯವನ್ನು ನಮೂದಿಸಬೇಕಾಗುತ್ತದೆ. ಹೀಗೆ ನಮೂದಿಸುವಾಗ ಕೆಲವು ಸಾರಿ ಈ ರೀತಿಯಾಗುತ್ತದೆಂದರು. ೧೭ರಂದು ಬೆಳಿಗ್ಗೆ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಇದನ್ನೆಲ್ಲ ಪ್ರಸ್ತಾಪ ಮಾಡುವ ಮೊದಲು ರೂಲ್ ೨೫೬ನ್ನು ಓದಿದರೆ ಎಲ್ಲ ಸರಿ ಹೋಗುತ್ತದೆ. The functions of the Committee on Estimates have been given under Rule 256. It is clearly defined under sub-cause (d) thus:

> "To suggest the form in which the estimates shall be presented to the Legislature."

Beyond that, the Committee is not expected to function. The Committee cannot assume the powers of the whole House. The Committee has been formed by the Legislature and its functions have been clearly defined. The Committee can function to that extent only. They cannot assume the entire powers of the Legislature. If they do so, they are taking away the right of the Assembly. I request the Hon. Member to go through the functions of the Committee before switching over to some other rule. The hon. Member has got every right to speak, but it should not be an enercise in futility. He is raising an issue which has not been perhaps raised in the entire world. If the Estimates Committee, a Committee which is constituted by the Legislature expects to consult a Budgatary form before presenting it to the House, it will be a nullity as for as the entire budgetary conventions or rules which have been prescribed by the Gonstitution are concerned. I am not coming in his way of making submission on this. But, my only submission to the House is, the hon. Member is taking shelter under rule 161 which is in respect of Demands for Grants. It does not speak anything about the functions of the Committee. The functions of the Committee no Estimates have been clearly defined under rule 253.

ಶ್ರೀ ಜಿ. ರಾಮೇಗೌಡ.—ಅವರು ಅಸಾಧ್ಯ ಅಧ್ಯಕ್ಷರು, ಸ್ಥೂಲ ಆದವರು. ಮೇಲಾಗಿ, ಅವರು ವಕೀಲರಾಗಿದ್ದಾರೆ. ಅದರಲ್ಲೂ ಸಕ್ಸಸ್‌ಫುಲ್ ಲಾಯರ್. ಅವರು, ಹಣಕಾಸಿನ ಸಚಿವರನ್ನು ಕೇಳಿ

ಮಾತನಾಡುತ್ತಿದ್ದೇನೆಂದು ಹೇಳುತ್ತಿದ್ದಾರೆ. ನಿಮ್ಮನ್ನು ಕೇಳಿದಾಗ ನೀವು ಈ ವಿಚಾರವನ್ನು ಎತ್ತಿರಿ ಎಂದು ಹೇಳಿದ್ದಿರೆ?

SRI M. VEERAPPA MOILY.—The hon. Member was agitated over this matter even on the day of presentation of Budget. The hon. Member has no jurisdiction at all as far as the Estimates Committee is concerned. The rules are very specific on the issues. ನಾನು ಹೇಳಿದೆ. ಇದು ಎಲ್ಲೂ ಎತ್ತತಕ್ಕ ವಿಚಾರ ಅಲ್ಲ ಆಯವ್ಯಯವನ್ನು ಮಂಡಿಸುವಾಗ ಏತಕ್ಕೆ ಕೇಳುತ್ತೀರೆಂದೆ. ಮತ್ತು ಅಂಥದ್ದು ಏನಾದರೂ ಇದ್ದರೆ ಪ್ರತ್ಯೇಕವಾಗಿ ಮಾತನಾಡೋಣ ಎಂದು ಹೇಳಿದೆ, ಅಂಥದಕ್ಕೆ ನಾವು ಏಕೆ ಅವಕಾಶ ಕೊಡಬೇಕು?

ಶ್ರೀ ಜಿ. ರಾಮೇಗೌಡ.—ತಾವು, ಅವರು ಹೇಳಿದ್ದನ್ನು ನಿಗಾ ಮಾಡಿದರೋ ಇಲ್ಲವೋ ಗೊತ್ತಿಲ್ಲ. ಅವರು ಮಾತನಾಡುವುದನ್ನು ನಾನು ಕಿವಿಗೊಟ್ಟು ಕೇಳುತ್ತೇನೆ. ತಮ್ಮ ಅಪ್ಪಣೆ ಪಡೆದು ಚರ್ಚೆ ಮಾಡಿ ಹೇಳುತ್ತಿದ್ದೇನೆಂದು ಹೇಳಿದರು.

ಶ್ರೀ ವೀರಪ್ಪ ಮೊಯ್ಲಿ.—ಇಲ್ಲ. ಚರ್ಚೆ ಮಾಡಿಲ್ಲ.

SRI S. M. SHETALY CHANDRASHKAR.—Rule 253 must be read along with Rule 161 clause-3. ಈ ರಾಜಕಾರಣದಲ್ಲಿ ಪಕ್ಷದ ಸಿದ್ಧಾಂತಕ್ಕೆ ಮತ್ತು ಕಟ್ಟುಪಾಡುಗಳಿಗೆ ಒಳಪಡಬೇಕಾಗುತ್ತದೆ. ನಾಯಕರು ಹೇಳಿದ್ದನ್ನು ಕೇಳಬೇಕಾಗುತ್ತದೆ. ಇದು ನಮ್ಮ ಕರ್ತವ್ಯ.

SRI M. VEERAPPA MOILY.—The word 'may' is there. Afterall, the Party will not come into the picture here. It is not a Party matter at all.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ತಾವು ಉತ್ತರ ಕೊಡುವಾಗ ವಿವರವಾಗಿ ಹೇಳಬಹುದು. ನಾನು ಮೂಲಭೂತ ಪ್ರಶ್ನೆಯನ್ನು ಎತ್ತಿದ್ದೇನೆ. ತಾವು ಇದಕ್ಕೆ ಉತ್ತರವನ್ನು ಆ ಮೇಲೆ ತಮ್ಮ ಉತ್ತರದಲ್ಲಿ ಹೇಳಿ. ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಕೆಲಸಗಳು ಈ ವರ್ಷದ ಆಯವ್ಯಯದಲ್ಲಿ ನಮೂದಾಗಿದ್ದರೆ ಅದೇ ರೀತಿ ಮುಂದಿನ ವರ್ಷದ ಆಯವ್ಯಯದಲ್ಲಿ ನಮೂಗಿರುತ್ತವೆ. ನಂತರ ೪ನೇ ವರ್ಷಕ್ಕೆ ಮಂಗಳಮಾಯವಾಗಿರುತ್ತವೆ. ಏತಕ್ಕೆ ಈ ರೀತಿ ಆಗುತ್ತದೆಂದರೆ, ಕೆಲಸಗಳನ್ನೇನೋ ನಮೂದು ಮಾಡಿರುತ್ತಾರೆ ಆದರೆ ಅವಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರುವುದಿಲ್ಲ. ಹೀಗಾಗಿ ಕೆಲಸಗಳು ಆಗುವುದಿಲ್ಲ. ಇದಕ್ಕೆ ನಾನು ಏನು ಹೇಳಿದೆನೆಂದರೆ, ಅರ್ಥ ಇಲಾಖೆಯವರು ಲೋಕೋಪಯೋಗಿ ಇಲಾಖೆಯವರೊಡನೆ ಚರ್ಚೆ ಮಾಡಿ ಹೇಗಾದರೂ ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕು. ಕೆಲಸಗಳನ್ನು ಕೈಗೊಳ್ಳಬೇಕು ಎಂದು. ಆಯವ್ಯಯವನ್ನು ಮಂಡನೆ ಮಾಡುವುದಕ್ಕೆ ಮೊದಲು ಯಾವ ಯಾವ ಕೆಲಸಗಳನ್ನು ತೆಗೆದುಕೊಂಡು ಪೂರೈಸಲು ಸಾಧ್ಯ ಎಂಬುದನ್ನು ತೀರ್ಮಾನ ಮಾಡಿ ಅವನ್ನು ಮಾತ್ರ ನಮೂದು ಮಾಡಬೇಕು. ನಮೂದು ಮಾಡಿದ ಮೇಲೆ ಆ ಕೆಲಸ ಆಗಬೇಕು. ಆ ರೀತಿಯಾಗಿ ಮಾಡಿ ಎಂದು ನಾನು ಸಲಹೆ ಕೊಟ್ಟಿದ್ದೇನೆ. ಆ ದೃಷ್ಟಿಯಿಂದ ೧೭ರಂದು ಆಯವ್ಯಯವನ್ನು ಮಂಡಿಸುವುದಕ್ಕೆ ಪೂರ್ವದಲ್ಲಿ ಅರ್ಥ ಇಲಾಖೆಯವರು, ಲೋಕೋಪಯೋಗಿ ಇಲಾಖೆಯವರು ಮತ್ತು ನಾವು ಕುಳಿತು ಮಾತನಾಡಬೇಕೆಂದು ನಿರ್ಣಯ ಮಾಡಿದ್ದೆವು. ಆದರೆ ದುರಾದೃಷ್ಟವಶಾತ್ ಈಗ ಬಿಡುವು ಇಲ್ಲ. ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಎಂದರು. ನಮ್ಮ ಅರ್ಥ ಮಂತ್ರಿಗಳು. ನಾನು ವಿರೋಧ ಪಕ್ಷದಲ್ಲಿದ್ದರೆ ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಬಹುದಾಗಿತ್ತು.

SRI M. VEERAPPA MOILY.—Sir, even the rule 161 which the hon. Member wants to invoke here pertains to the Demand for Grants. If the Auditor General wants to change the Head of Account, this way or that way, he can make an exercise on this ohange of Budget form. There is no such suggestion from the Auditor General to change the Head of Account or change in any other procedure which

are to be done in consonance with the suggestion by the Auditor General. There is no such report or suggestion or opinion expressed or placed before the Estimates Committee or before the Government. This question may come up only when there is some suggestion from the Auditor General.

The cause of action is not there. You have just read the rule. What is the background ? It is clearly said. It comes under the procedure in financial matters. In such matters like demands for grants for allocating grants or change of heads, if the Accountant General makes a suggestion then the Estimate Committee can look into as to whether such a change as suggested by Accountant General is necessary or not.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಅದಕ್ಕೋಸ್ಕರವೇ ಕ್ರಿಯಾಲೋಪ ಎತ್ತೋಣ ಎಂದು ಅವತ್ತು ಅಂದುಕೊಂಡೆ. ಆದಕ್ಕೆ ಒಪ್ಪಿಗೆ ಸಿಗಲಿಲ್ಲ. ಕ್ರಿಯಾಲೋಪ ಎತ್ತಿದ್ದರೆ ಅದಕ್ಕೆ ರೂಲಿಂಗಾದರೂ ಸಿಗುತ್ತಿತ್ತು. ಆದರೆ ಭಾಷಣದಲ್ಲಿ ಹೇಳಿದರೆ ರೂಲಿಂಗ್ ಕೊಡುವುದಿಲ್ಲ. ಆದ್ದರಿಂದಲೇ ನಾನು ಕ್ರಿಯಾಲೋಪ ಎತ್ತುವ ಪ್ರಯತ್ನ ಮಾಡಿದರೂ ಅದಕ್ಕೆ ಅವಕಾಶ ಆಗಲಿಲ್ಲ. ಪಕ್ಷದ ರಾಜಕಾರಣದಲ್ಲಿ ಇದೆಲ್ಲಾ ನಡೆಯುತ್ತದೆ. ಆ ವಿಷಯ ಇಷ್ಟಕ್ಕೇ ಬಿಡುತ್ತೇನೆ. ಹೋದಸಾರಿ ಮಾನ್ಯ ಬಸವಲಿಂಗಪ್ಪನವರು ಕಂದಾಯ ಸಚಿವರಾಗಿದ್ದಾಗ ಕಾಂಪೆನ್‌ಸೇಷನ್ ಬಗ್ಗೆ ಭೂ ಸುಧಾರಣಾ ಕಾಯಿದೆಗೆ ಸದನದ ಮುಂದೆ ತಿದ್ದುಪಡಿ ಬಂತು. ಆಗ ಅವರಿಗೆ ಯಾರೋ ಅರ್ಜಿ ಕೊಟ್ಟು, ಏನು ಸ್ವಾಮಿ ಶಿವಮೊಗ್ಗಾದಲ್ಲಿ ನಾಲಾ ಕೆಳಗಿರತಕ್ಕ ಜಮೀನಿಗೆ ವಾಟರ್ ಟ್ಯಾಕ್ಸ್ ಸೇರಿಸಿಬಿಡುತ್ತಾರೆ, ಇದರಿಂದ ವಿಪರೀತ ಪರಿಹಾರ ಕೊಡಬೇಕಾಗುತ್ತದೆ, ಹೀಗಾದರೆ ಬಹಳ ಅನ್ಯಾಯವಾಗುತ್ತದೆ ಎಂದು ಹೇಳಿದರು. ಅದನ್ನು ಕೇಳಿಕೊಂಡು ಇವರು ತೆಗೆದೇಬಿಟ್ಟರು. ಅದರ ಪರಿಣಾಮವಾಗಿ ಶಿವಮೊಗ್ಗ ತಾಲ್ಲೂಕಿನಲ್ಲಿ, ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನಲ್ಲಿ ಖುಷ್ಕಿ ಐನು ಕಂದಾಯ ೭ ರೂಪಾಯಿ ಆದರೆ ತರಿ ಕಂದಾಯ ೧೦ ರೂಪಾಯಿ ಆಯಿತು, ಅದಕ್ಕೆ ೧೦X೧೫೦ ಆಯಿತು. ಇದಕ್ಕೆ ೭X೧೫೦ ಆಯಿತು. ನಾಲಾ ತರಿ ಜಮೀನಿಗೆ ಕೇವಲ ೩೦೦ ರೂಪಾಯಿ ಕಾಂಪೆನ್‌ಸೇಷನ್ ಕೊಟ್ಟರು ಮಳೆ ತರಿ ಜಮೀನಿಗೆ ಒಂದೂವರೆ ಸಾವಿರ ರೂಪಾಯಿ ಕಾಂಪೆನ್‌ಸೇಷನ್ ಕೊಡಬೇಕಾಗಿ ಬಂತು. ನಾನು ಅವತ್ತು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ಈ ವಿಷಯ ತಂದು ನಾವು ಕುಳಿತು ಈ ಬಗ್ಗೆ ಮಾತನಾಡೋಣ ಎಂದು ಹೇಳಿದ್ದೆ. ಕೆಲವು ವೇಳೆ ಹರೀಬರೀನಲ್ಲಿ ಅಧಿಕಾರಿಗಳು ಹೇಳಿದಹಾಗೆ ಕಾನೂನುಗಳನ್ನು ತರುತ್ತಾರೆ, ಅದು ಇಲ್ಲಿ ಪಾಸ್ ಆಗಿಬಿಡುತ್ತದೆ. ಆದರೆ ಜನ ಬಂದು ನಮ್ಮ ಹತ್ತಿರ ನೀವೇನು ಮಾಡುತ್ತಿದ್ದೀರಿ, ಕತ್ತೆ ಕಾಯುತ್ತಿದ್ದಿರಾ ಎಂದು ಕೇಳುತ್ತಾರೆ. ಆದರೆ ಇದರಲ್ಲಿ ನಮ್ಮ ಪಾರ್ಟಿಸಿಪೇಷನ್ನೇ ಇರುವುದಿಲ್ಲ. ಆದ್ದರಿಂದ ನನಗಾದರೂ ಅನ್ನಿಸುತ್ತದೆ, ಈ ಮಸೂದೆಗಳನ್ನು ಫಾರಂ ಮಾಡುವಾಗ, ಅದರ ಬಗ್ಗೆ ಚರ್ಚೆ ಮಾಡುವಾಗ ಕೆಲವಾರು ಜನ ಶಾಸಕರನ್ನು ಕರೆಸಿ ಚರ್ಚೆ ಮಾಡದೇ ಹೋದರೆ ನಾವು ಜನರಿಗೆ ಹೇಗೆ ಜವಾಬ್ದಾರಿಯಾದಂತಾಗುತ್ತದೆ? ಶಾಸಕರನ್ನು ಕರಿಸಿ ಚರ್ಚೆ ಮಾಡದೇ ಅಧಿಕಾರಿಗಳ ಮಟ್ಟದಲ್ಲೇ ಎಲ್ಲಾ ತೀರ್ಮಾನವಾಗಿಬಿಡುತ್ತದೆ. ಇದು party system of democracy ಯಲ್ಲಿ ಇರತಕ್ಕ ಲೋಪದೋಷ. ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ ಅತ್ಯುನ್ನತ ಮಟ್ಟದಲ್ಲಿದ್ದರೂ ಕೂಡ ಕಾರ್ಯಾಂಗದ ಅಧೀನದಲ್ಲಿ ಶಾಸಕಾಂಗ ಇರಬೇಕಾಗುತ್ತದೆ. ಏತಕ್ಕೆಂದರೆ ಕಾರ್ಯಾಂಗದ ನಾಯಕರು ಮತ್ತು ಶಾಸಕಾಂಗದ ನಾಯಕರು ಒಬ್ಬರೇ ಆಗಿರುತ್ತಾರೆ. ಕಾರ್ಯಾಂಗ ನಮ್ಮನ್ನು ಹತೋಟಿಗೆ ತರುತ್ತದೆ. ಇದನ್ನು ಯಾವ ರೀತಿ ಸರಿಪಡಿಸಬೇಕು ಎಂಬ ಬಗ್ಗೆ ಎಲ್ಲರೂ ಯೋಚನೆ ಮಾಡಬೇಕು. ನಾನಾದರೂ ಇವತ್ತು ಅರ್ಥ ಮಂತ್ರಿಗಳನ್ನು ಮತ್ತು ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ, because I abide by the party rules, & discipline. ಶಾಸಕಾಂಗದ ಹಿನ್ನೆಲೆಯಲ್ಲಿ ಕಾರ್ಯಾಂಗ ಇದ್ದರೂ ಕೂಡ ultimately the Legislature is controlled by the Executive.

SRI M. VEERAPPA MOILY.—I am sorry. The Hon'ble Member is unnecessarily dragging the party into the picture. The party does

not come into the picture at all. It is not a correct opproach at all to say that ultimately we are controlled by the Executive. I am not coming in the way of the right of the Hon'ble Member. He has every right to speak. But we have a very limited time. I am making it clear to the Hon'ble Member that we are not restricting him from speaking.

ಶ್ರೀ ಶೀರ್ನಾಳಿ ಚಂದ್ರಶೇಖರ್.—ನಾನು ವೈಯಕ್ತಿಕವಾಗಿ ಯಾರ ಮೇಲೂ ಆಪಾದನೆ ಮಾಡುತ್ತಿಲ್ಲ. ಸಾಮಾನ್ಯವಾಗಿ ನಡೆಯುತಕ್ಕದ್ದನ್ನು ಹೇಳಿದೆ. ಈ ವಿಷಯವನ್ನು ಇಲ್ಲಿಗೇ ಬಿಡುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಭಾಸ್ಕರ ಶೆಟ್ಟರು ಬಂದರು ಎಂದು ಹೆದರಿಕೊಂಡಿರಾ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರು ಹೇಳುವುದನ್ನು ಮಾನ್ಯ ವಿತ್ತ ಮಂತ್ರಿಗಳು ಒಪ್ಪುತಾರೋ ಬಿಡುತ್ತಾರೋ ಗೊತ್ತಿಲ್ಲ. ಆದರೆ ಒಬ್ಬ ಸದಸ್ಯರು ಮೂಲಭೂತ ವಿಷಯಗಳ ಬಗ್ಗೆ ಹೇಳುತ್ತಿರುವಾಗ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಹೀಗೆ ಅವರನ್ನು ಹೆದರಿಸಿ ಕೂಡಿಸುವುದು ಸರಿಯಲ್ಲ. ಸರ್ಕಾರಿ ಮುಖ್ಯ ಸಚೇತಕರು ಸದಸ್ಯರ ಮಗ್ಗುಲಲ್ಲಿ ಕೂಡಬಾರದು. ದಯಮಾಡಿಟ್ಟು ಅವರು ಎದ್ದು ಅವರ ಸ್ಥಳಕ್ಕೆ ಹೋಗಬೇಕು. ಶ್ರೀ ಶೀರ್ನಾಳಿ ಚಂದ್ರಶೇಖರ್ ಅವರು ಹೇಳುತ್ತಿರುವುದು ಸರಿಯಾಗಿದೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ನಾನು ಯಾರಿಗೂ ಹೆದರುವುದಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರು ಮಾತನಾಡುವಾಗ, ಜನರು ನಮ್ಮನ್ನು ಕತ್ತೆ ಕಾಯುತ್ತಿದ್ದೀರಾ ಎಂದು ಕೇಳುತ್ತಾರೆಂದು ಹೇಳಿದರು. ಆ ರೀತಿ ಕತ್ತೆಗೆ ಹೋಲಿಸಿ ಕತ್ತೆಗೆ ಅವಮಾನ ಮಾಡುವುದು ಸರಿಯಲ್ಲ.

ಉಪಾಧ್ಯಕ್ಷರು.—ಮಾನ್ಯ ಚಂದ್ರಶೇಖರ್ ಅವರೆ, ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಭಾಸ್ಕರಶೆಟ್ಟರನ್ನು ಸ್ವಲ್ಪ ಹತೋಟಿಗೆ ತರಬೇಕು. ಬಹಳ ಉದ್ದವಾಯಿತು ಅವರದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇನ್ನು ಹತೋಟಿ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಜಾಸ್ತಿ ಉದ್ದ ಬೆಳೆದುಬಿಟ್ಟಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಏನಾದರೂ ಮಾಡಿ ಕಡಿಮೆ ಮಾಡಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ.—ಏನಾದರೂ ಮಾಡಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಉಪಾಧ್ಯಕ್ಷರೇ, ಈ ವರ್ಷ ಉತ್ಪಾದನಾ ವರ್ಷ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಶೀರ್ನಾಳಿ ಚಂದ್ರಶೇಖರ್ ಅವರ ಸ್ಪಿರಿಟ್ಟೇ ಹೋಯಿತು, ಭಾಸ್ಕರ ಶೆಟ್ಟರು ಹತ್ತಿರ ಹೋಗಿ ಕುಳಿತಮೇಲೆ.

SRI SHEERNALY CHANDRASHEKAR.—100 Bhasker Shetty will not convince me.

SRI K. H. SRINIVAS.—The influence is very apparent. In this House, what was the tone in which he was speaking? I was wondering whether the same Sheernali Chandrashekhar is speaking. I was about to compliment him. But when I made up my mind you lost the spirit.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಪ್ರಾಸ್ತಾವಿಕವಾಗಿ ನಾನು ಆ ವಿಷಯ ಹೇಳುತ್ತಿದ್ದೆ. ಅಲ್ಲಿಗೆ ಅದನ್ನು ಬಿಟ್ಟುಬಿಡುತ್ತೇನೆ. ಈ ವರ್ಷದ ಆಯವ್ಯಯದಲ್ಲಿ ಈ ವರ್ಷ ಉತ್ಪಾದನಾ ವರ್ಷ ಎಂಬುದನ್ನು ನಮ್ಮ ನಾಯಕರು ಘೋಷಣೆ ಮಾಡಿದ್ದಾರೆ. ಈ ಒಂದು ಹಂತದಲ್ಲಿ ಸೀಮಿತವಾಗಿರುವ

ಬಜೆಟ್ಟನ್ನು ಮಂಡನೆ ಮಾಡಿದ್ದಾರೆ. ನಾನು ಅದಕ್ಕಾಗಿ ಅವರನ್ನು ತುಂಬಾ ಶ್ಲಾಘನೆ ಮಾಡುತ್ತೇನೆ. ಈ ವರ್ಷ ಚುನಾವಣೆ ಇದೆಯೋ ಇಲ್ಲವೋ ಗೊತ್ತಿಲ್ಲ ಆದರೂ ಇದು ಚುನಾವಣಾ ವರ್ಷ. ಜನರಿಗೆ ಏನಾದರೂ ಮಾಡಿ ತೋರಿಸಬೇಕಾದ ವರ್ಷ. ಆ ದೃಷ್ಟಿಯಿಂದ ಚುನಾವಣೆ ಇದೆ ಎಂದು ಒಪ್ಪಿಕೊಳ್ಳೋಣ. ಆದ್ದರಿಂದ ಯಾವ ವರ್ಷವೂ ಇಲ್ಲದಷ್ಟು ಕೆಲಸ ಕಾರ್ಯಗಳನ್ನು, ಕಾಮಗಾರಿಗಳನ್ನು ಅರ್ಥ ಮಂತ್ರಿಗಳು ಆಯವ್ಯಯದಲ್ಲಿ ತೋರಿಸಿದ್ದಾರೆ. ಅದಕ್ಕಾಗಿ ಅವರನ್ನು ತುಂಬಾ ಶ್ಲಾಘಿಸುತ್ತೇನೆ ಕಣ್ಣಿಗೆ ಕಾಣತಕ್ಕ ಕೆಲಸವನ್ನು ಮಾಡಿದರೆ ತಾನೇ ಜನರು ನಮ್ಮನ್ನು ಮೆಚ್ಚುವುದು? "ಆಡದೆಲೆ ಮಾಡುವವನು ರೂಡಿಯೊಳಗುತ್ತಮನು, ಆಡಿ ಮಾಡುವವ ಮಧ್ಯಮ, ಆಡಿಯೂ ಮಾಡದವ ಅಧಮ" ಎಂಬ ಮಾತಿದೆ. ನಾವು ಆಡಿಯಾದ ಮೇಲೆ ಮಾಡಿ ತೋರಿಸಬೇಕಲ್ಲ ? ರಾಜಕೀಯದಲ್ಲಿ ಆಡದೇ ಇರುವುದಕ್ಕಾಗುವುದಿಲ್ಲ. ಆಡಬೇಕಾಗುತ್ತದೆ. ಆಡಿದ ಮೇಲೆ ಮಾಡಿ ತೋರಿಸಿ ಮಧ್ಯಮದವರಾಗಿಯಾದರೂ ಇರಬೇಕಾಗುತ್ತದೆ, ಹಾಗೆ ಮಧ್ಯಮರಾಗಿ ಇರುವ ಪ್ರಯತ್ನವನ್ನು ಮಾನ್ಯ ಅರ್ಥ ಮಂತ್ರಿಗಳು ಮಾಡಿದ್ದಾರೆ. ಕೊಟ್ಟಂಥ ಆಶ್ವಾಸನೆಗೆ ತಾವು (ಅರ್ಥ ಮಂತ್ರಿಗಳು) ಸೀಮಿತರಾಗಿದ್ದೀರಿ. ಅಗತ್ಯ ವಸ್ತುಗಳ ಮೇಲೆ ಇರತಕ್ಕ ಎಲ್ಲ ತೆರಿಗೆಯನ್ನೂ ತೆಗೆದಿದ್ದಾರೆ. ಆದ್ದರಿಂದ ಅವರಿಗೆ ಶಹಭಾಸ್‌ಗಿರಿ ಕೊಡತಕ್ಕ ಕೆಲಸ ಮಾಡಬೇಕಾಗಿದೆ. ಜನಬಳಕೆ ವಸ್ತುಗಳ ಮೇಲಿನ ತೆರಿಗೆಯನ್ನು ತೆಗೆದು ಲಗ್ಜುರಿ ವಸ್ತುಗಳ ಮೇಲೆ ತೆರಿಗೆ ಹಾಕಿ ಉತ್ಪಾದನಾ ಮೂಲಗಳನ್ನು ಅವರು ಹೆಚ್ಚಿಸಿದ್ದಾರೆ. ಉತ್ಪಾದನಾ ವರ್ಷ ಎಂದು ಹೇಳಿದ್ದಕ್ಕಾದರೂ ಉತ್ಪಾದನಾ ಮೂಲಗಳನ್ನು ತೋರಿಸುವ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ಶ್ಲಾಘಿಸಬೇಕಾಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಾವು ಹೋದ ವರ್ಷದ ಬಜೆಟ್ ಬಗ್ಗೆ ಮಾತನಾಡುತ್ತಿದ್ದಿರೋ ಈ ವರ್ಷದ ಬಜೆಟ್ ಬಗ್ಗೆ ಮಾತನಾಡುತ್ತಿದ್ದೀರೋ?

ಶ್ರೀ ಶೀರ್‍ನಾಳಿ ಚಂದ್ರಶೇಖರ್.—ಆಚೆ ವರ್ಷದ್ದು. ೧೯೭೮ನೇ ಇಸವಿಯದು. ನೆನಪಾಗುತ್ತದಲ್ಲ !

ಶ್ರೀ ಕೆ. ಹೆಚ್. ಶ್ರೀನಿವಾಸ್. —ನಿಮ್ಮ ಜೊತೆ ಇದ್ದಾಗ......

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್.— ನಿಮ್ಮ ಜೊತೆ ಜಾತಿ ಕೆಟ್ಟಾಗ. ಮಾನ್ಯ ಉಪಾಧ್ಯಕ್ಷರೆ, ತಾವು ದಯವಿಟ್ಟು ಮಾನ್ಯ ಸದಸ್ಯರನ್ನು ಕಂಟ್ರೋಲ್ ಮಾಡಬೇಕು. ತಾಲ್ಲೂಕು ಮಟ್ಟದಲ್ಲಿ ೨೦ ಅಂಶಗಳ ಕಾರ್ಯಕ್ರಮಗಳ ಸಮಿತಿಯನ್ನು ತಾವು ಮಾಡಿದ್ದೀರಿ. ಸಂಬಂಧಪಟ್ಟ ಶಾಸಕರ ಅಧ್ಯಕ್ಷತೆಯಲ್ಲಿ ಆ ಸಮಿತಿಯನ್ನು ರಚಿಸಿದ್ದೀರಿ. ಪ್ರತಿ ತಿಂಗಳೂ ಸಭೆಯನ್ನು ಕರೆಯುತ್ತಾರೆ. ಈ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮದ ಸಭೆಗಳು ನಡೆದ ನಂತರ ನಾವು ಏನೇನು ನಿಲುವಳಿಗಳನ್ನು ತೆಗೆದುಕೊಳ್ಳುತ್ತೇವೆ ಅವುಗಳ ಫಾಲೋ ಅಪ್ ಆಕ್ಷನ್ ಆಗುತ್ತದೆಯೋ ಎಂದು ನಾನು ಕೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಏನು ೨೦ ಅಂಶಗಳ ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟದಲ್ಲಿ ತಂದಿದ್ದಾರೆ ಅದು ಶ್ಲಾಘನೀಯವಾದ ಕೆಲಸವೆಂದು ನಾನು ಹೇಳುತ್ತೇನೆ. ಸಂಬಂಧಪಟ್ಟ ಶಾಸಕರು ಈ ಬಗ್ಗೆ ತಾಲ್ಲೂಕುಗಳಲ್ಲಿನ ಆಗು ಹೋಗುಗಳ ಬಗ್ಗೆ ವಿಚಾರ ಮಾಡುವ ಬಗ್ಗೆ ಏರ್ಪಾಡು ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ಅವರಿಗೆ ಕಿರೀಟವನ್ನು ತೊಡಿಸಬೇಕಾಗುತ್ತದೆ. ಈ ಬಗ್ಗೆ ನಾವು ಕೂಡಾ ಕುಳಿತು ಅಧಿಕಾರಿಗಳ ಹತ್ತಿರ ವರದಿಗಳನ್ನು ತರಿಸಿ ಯಾವ ಯಾವ ಕೆಲಸ ಎಷ್ಟೆಷ್ಟು ಆಗಿದೆಯೆಂದು ತಿಳಿದುಕೊಂಡು, ಮುಂದೆ ಎಷ್ಟು ಕೆಲಸ ಆಗಬೇಕು ಎಂಬುದರ ಬಗ್ಗೆ ನೋಡದ ಹೊರತು ಇಂತಹ ಸಮಿತಿಗಳನ್ನು ರಚಿಸಿ ಏನೂ ಉಪಯೋಗವಾಗುವುದಿಲ್ಲ. ಜೊತೆಗೆ ನಾವು ಅಲ್ಲಿ ಕುಳಿತು ಇಷ್ಟು ಕೆಲಸಗಳು ಆಗಿವೆ, ಹಾಗೂ ಇಷ್ಟು ಕೆಲಸಗಳು ಮುಂದಿನ ಇಷ್ಟು ದಿವಸಗಳೊಳಗೆ ಆಗಬೇಕೆಂದು ರೆಸಲ್ಯೂಷನ್ ಮಾಡಿರುತ್ತೇವೆ. ಇವು ಫಾಲೋ ಅಪ್ ಆಗಬೇಕಾಗುತ್ತದೆ. ಅದು ಆಗಿರುವುದಿಲ್ಲ. ಈ ಬಗ್ಗೆ ಕಡ್ಡಾಯವಾಗಿ ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಯಾವುದೇ ಕಾರ್ಯಕ್ರಮಗಳಾಗಲೀ ಮುಂದಿನ ಸಭೆ ಸೇರುವುದರೊಳಗೆ ಆಗಲೇಬೇಕು. ಇಂತಹ ಕೆಲವು ನಿಯಮಗಳನ್ನು ಸೇರಿಸಿ ಕಳುಹಿಸಿದರೆ ಅದಷ್ಟೂ ಕೆಲಸಗಳು ತ್ವರಿತವಾಗಿ ಆಗುತ್ತವೆಂದು ನಾನು ಹೇಳುತ್ತೇನೆ. ಇನ್ನು ಕಡ್ಡಾಯವಾಗಿ ಅಧಿಕಾರಿಗಳು ಆ ಸಭೆಗಳಿಗೆ ಭಾಗವಹಿಸುವಂತೆ ಆದೇಶವನ್ನು ಕೊಡಬೇಕು. ಕೆಲವು ಕಡೆ ೩ ಮೀಟಿಂಗ್, ೪ ಮೀಟಿಂಗ್, ೫ ಮೀಟಿಂಗ್‌ಗಳಾದರೂ ಅಧಿಕಾರಿಗಳು ಬಾರದೇ ಮಾನ್ಯ ಮಂತ್ರಿಗಳಿಗೆ ಬರೆದು ತಿಳಿಸಿರತಕ್ಕ ಪ್ರಸಂಗಗಳು ಇವೆ. ಸಂಬಂಧಪಟ್ಟ ಅಧಿಕಾರಿಗಳು ತಾಲ್ಲೂಕು

ಕನ್‌ಸಲ್‌ಟೆಟಿವ್ ಕಮಿಟಿಗಳ ಮೀಟಿಂಗ್‌ಗಳಿಗೆ ಭಾಗವಹಿಸದಿದ್ದರೆ ಏನೂ ಕೆಲಸವನ್ನು ಮಾಡುವುದಕ್ಕಾಗಂವುದಿಲ್ಲ. ಆದುದರಿಂದ ಅವರು ಕಡ್ಡಾಯವಾಗಿ ಸಭೆಗಳಿಗೆ ಭಾಗವಹಿಸಬೇಕೆಂದು ಕಾನೂನು ಮಾಡಬೇಕು.

ಉಪಾಧ್ಯಕ್ಷರು.—ತಮ್ಮ ವೇಳೆ ಆಯಿತು. ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಶೀರ್‍ನಾಳಿ ಚಂದ್ರಶೇಖರ್.—ಬೇರೆ ಸದಸ್ಯರು ಮಧ್ಯೆ ಮಧ್ಯೆ ಮಾತನಾಡಲಾಗಿ ನನಗೆ ಇನ್ನೂ ವೇಳೆ ಕೊಡಿ. ಇನ್ನು ೧೦ ನಿಮಿಷಗಳಲ್ಲಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. ಸ್ವಾಮಿ, ೨೦ ಅಂಶಗಳ ಕಾರ್ಯಕ್ರಮಗಳ ಬಗ್ಗೆ ನಾವು ಅನೇಕ ವರದಿಗಳನ್ನು ಕೇಳಿದ್ದೇವೆ. ಸೈಟ್‌ಗಳ ವಿಚಾರವಾಗಿ ಜನತಾ ಗೃಹಗಳು ಎಷ್ಟು ಇವೆ, ಯಾವ ಯಾವ ಕಾರ್ಯಕ್ರಮಗಳು ಎಷ್ಟೆಷ್ಟು ಆಗಿವೆ ಎನ್ನುವುದರ ಬಗ್ಗೆ ಕೇಳಿದ್ದೇವೆ. ಇವುಗಳಿಗೆ ಸರ್ಕಾರದಿಂದ ಹಣ ಬಂದಿರುವುದರಿಂದ ಮಾರ್ಚಿ ೩೧ರೊಳಗೆ ಎಲ್ಲವನ್ನೂ ಮಾಡಬೇಕೆಂದು ಹೇಳಿದ್ದೇವೆ. ಇಲ್ಲದಿದ್ದರೆ ಹಣ ಲ್ಯಾಪ್ಸ್ ಆಗುತ್ತದೆ. ಈ ಕೆಲಸಗಳು ಆಗದಿದ್ದರೆ ಸಮಿತಿಗಳಲ್ಲಿ ಅಧ್ಯಕ್ಷರಾಗಿ ಕುಳಿತುಕೊಂಡು ಮಾಡುವುದಾದರೂ ಏನು? ಕಡ್ಡಾಯವಾಗಿ ಅಧಿಕಾರಿಗಳು ಸಭೆಗೆ ಬರುವಂತೆ ತ್ವರಿತವಾಗಿ ಆದೇಶವನ್ನು ಕೊಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಸ್ವಾಮಿ ಭೂ ಸುಧಾರಣಾ ಕಾನೂನಿನಲ್ಲಿ ತಾವು ಇವತ್ತು ಸುಮಾರು ಭೂ ಮಾಲೀಕರು ಜಮೀನನ್ನು ಕಳೆದುಕೊಂಡಿದ್ದಾರೆ. ನಾನು ಈ ಬಗ್ಗೆ ಪದೇ ಪದೇ ಹೇಳುತ್ತಿದ್ದೇನೆ. ಇವತ್ತು ೪೦ ಕೋಟಿ ಪರಿಹಾರವನ್ನು ಕೊಡಬೇಕಾಗಿದೆ. ಈ ಬಗ್ಗೆ ಕೇಂದ್ರದಿಂದ ಅನುದಾನದ ರೂಪವಾಗಿ ಈ ಹಣವನ್ನು ತಂದು ಪರಿಹಾರವನ್ನು ಒದಗಿಸಿದರೆ ಎಷ್ಟೋ ಜನರ ಕಷ್ಟ ತಪ್ಪುತ್ತದೆ. ಅವರಿಗೆ ಅನುಕೂಲವಾಗುತ್ತದೆ. ಏನೋ ಗುಮಾಸ್ತಗಿರಿ ಮಾಡಿ, ಸಂಬಳವನ್ನು ಕೂಡಿಹಾಕಿ ಅದನ್ನು ವಿನಿಯೋಗಿಸಿ ಸಾಗುವಳಿ ಮಾಡುತ್ತಿದ್ದವರು ಈ ಶಾಸನದನ್ವಯ ಎಲ್ಲವನ್ನೂ ಕಳೆದುಕೊಂಡಿರುವಂತಹ ನಿದರ್ಶನಗಳು ಇವೆ. ಇಂತಹ ಕುಟುಂಬಗಳನ್ನು ಗುರುತಿಸಿ ಪರಿಹಾರವನ್ನು ಕೊಡುವುದರಿಂದ ಉಭಯತ್ರರಿಗೂ ಕೂಡಾ ಸಹಾಯಕವಾಗುತ್ತದೆಂದು ನಾನು ಹೇಳುತ್ತೇನೆ. ಭೂ ಮಾಲೀಕ ಹಾಗೂ ಗೇಣಿದಾರರಿಬ್ಬರಿಗೂ ಸಹಾಯವಾದಂತಾಗುತ್ತದೆ. ಆ ಹಣವನ್ನು ಗ್ರಾಂಟ್ ರೂಪದಲ್ಲಾದರೂ ಕೊಟ್ಟು ಭೂ ಮಾಲೀಕರಿಂದ ಗೇಣೀದಾರರ ವಿಮೋಚನೆ ಮಾಡಿ ೪೦ ಕೋಟಿ ರೂಪಾಯಿಗಳನ್ನು ಕೊಡುವುದು ತಮಗೇನು ಕಷ್ಟದ ವಿಚಾರವಾಗಲಾರದು.

ಇನ್ನು ಅರಣ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಜನತಾ ಸರ್ಕಾರ ಇದ್ದಾಗ ಅರಣ್ಯ ಇಲಾಖೆಯನ್ನು ಕೇಂದ್ರ ಸರ್ಕಾರ ವಹಿಸಿಕೊಂಡಿತು. ಇವತ್ತು ಮಲೆನಾಡಿನ ತಾಲ್ಲೂಕುಗಳಲ್ಲಿ ೧೦–೧೫ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ಅನೇಕ ಭೂ ರಹಿತ ಕಾರ್ಮಿಕರು, ಅನೇಕ ಗೇಣಿದಾರರು ಇದ್ದಾರೆ. ಇವರು ಆ ಜಾಗಗಳನ್ನು ಬಿಡಬೇಕೆಂದು ಆದೇಶ ಬಂದಿದೆ. ಈ ಸಮಸ್ಯೆಯನ್ನು ಆದಷ್ಟು ಬೇಗ ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ಬಗೆಹರಿಸಬೇಕಾಗಿದೆ. ಮಲೆನಾಡು ಪ್ರದೇಶ ಅಂತಹ ದೊಡ್ಡ ಅರಣ್ಯ ಪ್ರದೇಶವೂ ಅಲ್ಲ. ಇಲ್ಲಿನ ಜನ ಅಲ್ಲಿನ ಗೋಮಾಳ ಜಮೀನನ್ನು ಮಾಡಿಕೊಂಡು ಬಂದಿದ್ದಾರೆ. ಇದನ್ನು ಅರಣ್ಯ ಇಲಾಖೆಯವರು ವಹಿಸಿಕೊಂಡಿದ್ದಾರೆ. ಅನೇಕ ಜನ ರೈತರು ಇಲ್ಲಿ ತಮ್ಮ ಬೇಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಇದು ಬಿಟ್ಟರೆ ಅವರಿಗೆ ಬೇರೆ ಯಾವ ಕಸುಬೂ ಇಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಹೋರಾಟ ಮಾಡಿ ಬಗೆಹರಿಸಬೇಕೆಂದು ನಾನು ಕಳಕಳಿಯಿಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕಟ್ಟಿಗೆ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಮಲೆನಾಡಿನಲ್ಲಿ ಡಿಪೋಗಳನ್ನು ತೆರೆಯುವ ಹವ್ಯಾಸವನ್ನು ಮಾಡಬೇಡಿ. ಶೀರ್‍ನಾಳಿ ಪುನಃ ಅಲ್ಲಿಂದ ಆಯ್ಕೆಯಾಗಿ ಸದನದ ಸದಸ್ಯನಾಗಿ ಬರಬೇಕೆಂದರೆ ದಯಮಾಡಿ ಡಿಪೋಗಳನ್ನು ಅಲ್ಲಿ ತೆಗೆಯಬೇಡಿ. ನೀವು ಡಿಪೋಗಳನ್ನು ಅಲ್ಲಿ ಮಾಡಿದರೆ ಈ ಜನ ಬರುವ ನಿಮ್ಮನ್ನು ಚುನಾವಣೆಯಲ್ಲಿ ಮುಗಿಸಿಬಿಡುತ್ತಾರೆ. ಅದು ಆಗಬೇಕೆಂದರೆ ನೀವು ಬೇಕಾದರೆ ಡಿಪೋಗಳನ್ನು ತೆಗೆಯಿರಿ. ಇಲ್ಲದಿದ್ದರೆ ಒಂದೊಂದು ಕುಟುಂಬಕ್ಕೆ ಎಷ್ಟು ಸೌದೆ ಅವಶ್ಯಕ ಎಂದು ನೋಡಿ ಅಷ್ಟಕ್ಕೆ ಲೈಸೆನ್ಸ್ ಕೊಡುವ ವ್ಯವಸ್ಥೆಯನ್ನು ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಜಿಲ್ಲೆಯಲ್ಲಿ ಅಡಿಗೆಗೆ ಉಪಯೋಗಿಸುವ ಸೌದೆಯ ಬೆಲೆಏನು?

ಶ್ರೀ ಶೀರ್‍ನಾಳಿ ಚಂದ್ರಶೇಖರ್.—ನಾವು ಬೆಲೆ ಕೊಟ್ಟು ಕೊಂಡೇ ಇಲ್ಲ ಸ್ವಾಮಿ, ನಮಗೆ ಅದರ ಬೆಲೆ ಹೇಗೆ ಗೊತ್ತಾಗಬೇಕು?

ಶ್ರೀ ಎ. ಲಕ್ಷ್ಮೀಸಾಗರ್.—ಮರಗಳನ್ನು ಕಡಿದುಹಾಕುತ್ತೀರಾ ಅಲ್ಲವೇ?

ಉಪಾಧ್ಯಕ್ಷರು.—ತಮ್ಮ ವೇಳೆ ಆಯಿತು. ತಮ್ಮ ಭಾಷಣವನ್ನು ಮುಕ್ತಾಯ ಮಾಡಿ ಸ್ವಾಮಿ.

SRI SM SHENALY CHANDRA SEKHAR —Sir, You are a very good friend of mine. ತಾವು ಭಾಷಣ ಮುಗಿಸಿದ ಮೇಲೆ ನಾನು ಮುಗಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಸನ್ಮಾನ್ಯ ಉಪಾಧ್ಯಕ್ಷರೆ, ತಾವು ಇಷ್ಟೇ ನಿಮಿಷ ಮಾತನಾಡಬೇಕೆಂದು ನನಗೆ ಹೇಳದಿದ್ದುದಕ್ಕೆ ನಾನು ತಮ್ಮನ್ನು ವಂದಿಸುತ್ತೇನೆ. ನಮ್ಮ ಹಣಕಾಸಿನ ಮಂತ್ರಿಗಳು ನನ್ನಿಂದ ವಂದನೆಗಳನ್ನು ಸ್ವೀಕರಿಸತಕ್ಕಂತಹ ಮಹತ್ವದ ಕಾರ್ಯವನ್ನು ಈ ಆಯವ್ಯಯ ಪತ್ರದಲ್ಲಿ ಏನೂ ಮಾಡಿಲ್ಲ. ಅದಕ್ಕಾಗಿ ನಾನು ತುಂಬಾ ವಿಷಾದ ಪಡುತ್ತೇನೆ. ಅವರು ತಮ್ಮ ಭಾಷಣದಲ್ಲಿ ಎಲ್ಲರನ್ನೂ ನೆನೆಸಿ ಕೊಂಡಿದ್ದಾರೆ, ಫಿಷರ್‌ಮನ್‌ಗಳನ್ನು ನೆನೆಸಿಕೊಂಡಿದ್ದಾರೆ, ಟ್ಯಾಪರ್‌ಸ್ ನೆನೆಸಿಕೊಂಡಿದ್ದಾರೆ. ನಡತೆಗೆಟ್ಟ ಹೆಣ್ಣು ಮಕ್ಕಳನ್ನು ನೆನೆಸಿಕೊಂಡಿದ್ದಾರೆ. ನಿರುದ್ಯೋಗಿಗಳನ್ನು ನೆನೆಸಿ ಕೊಂಡಿದ್ದಾರೆ. ಆದರೆ ಬಡ ರೈತರನ್ನು ಮರೆತಿದ್ದಾರೆ. ಅದರ ಬಗ್ಗೆ ಏನು ಮಾಡಿದ್ದಾರೆ? ಅದೇನೋ ತಜ್ಞರು ಕಂಡುಹಿಡಿದಿದ್ದನ್ನು ಅವರ ಮನೆಯ ಹತ್ತಿರ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಿ ದ್ದಾರೆ. ಅದನ್ನು ತೆಗೆದುಕೊಂಡು ಇವರು ಹುಳಿ ಮಾಡಬೇಕೋ, ಅನ್ನ ಮಾಡಬೇಕೋ ಗೊತ್ತಾಗ ಲಿಲ್ಲ. ಒಣ ಬೇಸಾಯಕ್ಕೆ ಏನೋ ಮಾಡುತ್ತೇವೆಂದು ಹೇಳಿದ್ದಾರೆ. ಏನು ಮಾಡಿದ್ದೀರಿ ನೀರನ್ನು ಕೊಟ್ಟರೆ ಅವರು ಏನು ಬೇಕಾದರೂ ಮಾಡುತ್ತಾರೆ.

ಶ್ರೀಮತಿ ಅನುಸೂಯಾ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅದೇನೋ ನಡತೆಗೆಟ್ಟ ಹೆಣ್ಣುಮಕ್ಕಳು ಎಂದು ಹೇಳಿದರು. ಅದರ ಅರ್ಥ ಏನು?

ಶ್ರೀ ಜಿ. ರಾಮೇಗೌಡ.—ಗಂಡಸಾದ ನಾನು ಅದನ್ನು ಅಷ್ಟು ಒತ್ತಿ ಹೇಳುವುದು ಸರಿಯಲ್ಲ.

೪–೦೦ ಪಿ.ಎಂ.

ದಯವಿಟ್ಟು ತಮಗೆ ಅವಕಾಶ ಬಂದಾಗ ಅದರಮೇಲೆ ಮಾತನಾಡಿ. ತಮಗೆ ತಿಳಿದಿದೆಯೋ ಏನೋ ನನಗೆ ಗೊತ್ತಿಲ್ಲ. ಏನೇನು ಯೋಜನೆ ಹಾಕಿದ್ದೀರಿ ನಿಮ್ಮ ಕಡೆ ಶಾಸಕರನ್ನೇ ಸೇರಿಸಿಕೊಂಡು ಒಂದು ಕಮಿಟಿ ಮಾಡಿ, ಯಾರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ? ಹೆಣ್ಣು ಮಕ್ಕಳನ್ನು ಮಾಡಿದ್ದೀರೋ ಗಂಡಸರನ್ನು ಮಾಡಿದ್ದೀರೋ ಗಂಡಸರಾದರೆ ಶೀನ್ನಾಳಿ ಚಂದ್ರಶೇಖರ್ ಅವರನ್ನೇ ಮಾಡಿ ಯಾರು ಯಾರಿಗೆ ಎಷ್ಟೆಷ್ಟು ಜವಾಬ್ದಾರಿ ವಹಿಸಿದ್ದೀರಿ ಇದನ್ನೆಲ್ಲಾ ಇದರಲ್ಲಿ ಬರೆದಿಲ್ಲ, ತಾವು ಇದರ ಬಗ್ಗೆ ಹೇಳಿ ದರೆ ನನಗೆ ಬಹಳ ಸಂತೋಷ. ಸುಕುಟುಂಬ ಪರಿವಾರವನ್ನು ಏರ್ಪಾಡು ಮಾಡುವುದಕ್ಕೆ ಸುಬದ್ರ ಕುಟುಂಬವನ್ನು ಮಾಡುವುದಕ್ಕೆ ಎಂದು ಹೇಳಿದ್ದೀರಿ ನಡತೆ ಗೆಟ್ಟ ಹೆಣ್ಣು ಮಕ್ಕಳಿಗೆ ಸುಬದ್ರ ಕುಟುಂಬ ಹೇಗೆ ಕೊಡುತ್ತೀರಿ? ವಿಧವೆಯರಿಗೆ ಸುಬದ್ರ ಕುಟುಂಬ ಹೇಗೆ ಕೊಡುತ್ತೀರಿ ತಿರುಪತಿ ವೆಂಕಟೇಶ್ವರನ ಮಹಾತ್ಮೆ ಏನಿದೆಯೋ ನನಗೆ ಗೊತ್ತಿಲ್ಲ. ಆದರೆ, ತಾವು ಒಂದು ಮಾತನ್ನು ಬಡ ರೈತರ ಮೇಲೆ ಹೇಳಿ ದ್ದರೆ, ನನಗೆ ಆದಷ್ಟು ಸಂತೋಷ ಇನ್ನು ಯಾರಿಗೂ ಆಗುತ್ತಿರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮ್ಮ ದೃಷ್ಟಿಯಲ್ಲಿ ಬಡ ರೈತರು ಅಂದರೆ ಯಾರು?

ಶ್ರೀ ಜಿ. ರಾಮೇಗೌಡ.—೧೫ ಎಕರೆ ಭೂಮಿ ಇದ್ದು ನೀರಾವರಿ ಇಲ್ಲದವನು ಬಡ ರೈತ ೫ಎಕರೆ ನೀರಾವರಿ ಜಮೀನು ಇದ್ದು ಎರಡು ಹೊತ್ತು ಊಟ ಮಾಡಿ, ಮಕ್ಕಳನ್ನು ಸಾಕುವವನು ರೈತ ಸ್ವಾಮಿ, ೧೫ ಎಕರೆ ಭೂಮಿ ಇದ್ದು ಕಾಲಕ್ಕೆ ಸರಿಯಾಗಿ ಮಳೆರಾಯ ಬರದಿದ್ದರೆ ನಾವು ನೀವು ಏನು ಮಾಡ ಬೇಕು. ೧೯೭೮–೭೯ರಲ್ಲಿ ಬರಗಾಲ ಏರಿಯಾ ಎಂದು ಘೋಷಣೆ ಮಾಡಿದಿರಿ, ಹಕ್ಕಿ ಕುಡಿಯುವುದಕ್ಕೂ ನೀರು ಇರಲಿಲ್ಲ. ಕೆರೆಯಲ್ಲಿ ಕುಡಿಯುವ ನೀರಿಗಾಗಿ ಗುಂಡಿ ತೋಡಿಸಿದರು. ೩೦೦ ಬೋರ್‌ವೆಲ್‌ಗಳನ್ನು ಹಾಕಿಸಿಕೊಟ್ಟಿರಿ. ಆದರೆ, ಇವತ್ತು ಕಂದಾಯವನ್ನು ಒದ್ದು ವಸೂಲು ಮಾಡುತ್ತಿದ್ದಾರೆ. ಇದು ಯಾವ ಧರ್ಮ? ೭೮–೭೯ರಲ್ಲಿ ಬರಗಾಲ ಎಂದು ಹೇಳಿದ ಮೇಲೆ ಕಂದಾಯ ಮಾಫಿ ಮಾಡಿದ್ದರೆ ನನಗಾ ದಷ್ಟು ಪರಮಾನಂದ ಯಾರಿಗೂ ಆಗುತ್ತಿರಲಿಲ್ಲ. ಅಧಿಕಾರಿಗಳು ಬಂದು ತಗಾದೆ ಮಾಡುತ್ತಿದ್ದಾರೆ, ಜಾಗ್ರತೆ ರೆಮಿಷನ್ ಮಾಡಿಸಿ ೨೫ ಆಣೆಗಿಂತ ಕಡಿಮೆ ಬೆಳೆಯಾದರೆ ಬರಗಾಲ ಎಂದು ಘೋಷಣೆ ಮಾಡದೇ

ಇರುವುದು ಮಹಾಪರಾದ, ರೈತರಿಗೆ ಮಾಡಿರತಕ್ಕಂಥ ದೊಡ್ಡ ಅಪರಾದ ದಯಮಾಡಿ ಇದರ ಬಗ್ಗೆ ಆಲೋಚನೆ ಮಾಡಿ ಎಂದು ಹೇಳುತ್ತೇನೆ.

ಇನ್ನು ೨೦ ಅಂಶಗಳ ಆರ್ಥಿಕ ಕಾರ್ಯಕ್ರಮದ ಬಗ್ಗೆ ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರು ಸಾಕಷ್ಟು ಹೇಳಿದ್ದಾರೆ. ನಮ್ಮನ್ನು ಏತಕ್ಕಾಗಿ ಛೇರ್ಮನ್ ಮಾಡಿದಿರೋ ಗೊತ್ತಿಲ್ಲ. ತಾವು ಹಣಕಾಸಿನ ಮಂತ್ರಿಗಳಾಗಿ ಬಂದಮೇಲೆ ನಮಗೆಲ್ಲಾ ಒಂದೊಂದು ಸ್ಥಾನದಲ್ಲಿ ಕೂಡಿಸಿದಿರಿ. ಜನಗಳಿಗೆ ಹತ್ತಿರದಲ್ಲಿ ರುವವರು ಇವರೇ ಜನಗಳ ಕೈಯಲ್ಲಿ ಉಗಳಿಸಿಕೊಳ್ಳಲಿ ಎಂದು ನಿರ್ಣಯ ಮಾಡಿದರೇನೋ ಗೊತ್ತಿಲ್ಲ ನಿಮ್ಮ ಪಕ್ಷದ ಸದಸ್ಯರೇ ಬಹಳ ಜನ ಅಧಿಕಾರಿಗಳು ಮೀಟಿಂಗಿಗೆ ಬರುವುದಿಲ್ಲವೆಂದು ಹೇಳಿದ್ದಾರೆ. ಮಂತ್ರಿಗಳು ಕಾಗದ ಬರೆದರೂ ಬರುವುದಿಲ್ಲವೆಂದರೆ ನಿಮ್ಮ ಆಡಳಿತ ಚುರುಕಾಗಿ ನಡೆಯುತ್ತದೆಯೆ? ೨೦ ಅಂಶಗಳ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಆಸಕ್ತಿಯಿಂದ ಮೀಟಿಂಗ್‌ಗಳನ್ನು ಸೇರಿಸಿ ತೀರ್ಮಾನಗಳನ್ನು ಕೈಗೊಳ್ಳಬೇಕೆಂದಿರುವಾಗ ಅಧಿಕಾರಿಗಳೇ ಬರದಿದ್ದರೆ ಹೇಗೆ ಕಳೆದ ೧೫ನೇ ತಾರೀಖು ಮೀಟಿಂಗ್ ಇತ್ತು. ಅಧಿಕಾರಿಗಳು ಇಲ್ಲದೇ ಇದ್ದುದರಿಂದ ಸಭೆಯನ್ನು ಮುಂದಕ್ಕೆ ಹಾಕಲಾಯಿತು, ನಿಮ್ಮ ೨೦ ಅಂಶಗಳ ಕಾರ್ಯಕ್ರಮ ಎಷ್ಟು ಚೆನ್ನಾಗಿದೆ ನೋಡಿ. ತಮ್ಮ ಭಾಷಣದ ಒಂದು ಪುಟದ ತುಂಬ ಬರೆದು, ೨೦ ಅಂಶಗಳ ಆರ್ಥಿಕ ಕಾರ್ಯಕ್ರಮಗಳನ್ನು ಸುಗಮವಾಗಿ ನಡೆಸಿಕೊಂಡು ಬಂದಿದ್ದೇವೆಂದು ಹೇಳಿದ್ದೀರಿ. ಈ ವರ್ಷ ಪರಿಷ್ಕೃತ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕಾಗಿ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಂಡಿದೆಯೆಂದು ಹೇಳಿದ್ದೀರಿ ಏನು ಕೈಗೊಂಡಿದ್ದೀರಿ ಸಭೆಗಳಿಗೆ ಅಧಿಕಾರಿಗಳೇ ಬರುವುದಿಲ್ಲವೆಂದರೆ, ಏನು ಕ್ರಮಗಳನ್ನು ಕೈಗೊಂಡಿದ್ದೀರಿ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರಗಳನ್ನು ಬರೆದರೂ ಉತ್ತರ ಬರುವುದಿಲ್ಲ ಪತ್ರ ತಲುಪಿದಕ್ಕೆ ಅಕ್‌ನಾಲ್ಡ್‌ಜ್‌ಮೆಂಟ್ ಕೂಡ ಇಲ್ಲ ಅಂದರೆ ಹೇಗೆ ಸ್ವಾಮಿ ಸ್ವಾಮಿ ನಾನು ಕೆಲವು ಕಾಲ ಮಂತ್ರಿಯಾಗಿ ಕೆಲಸ ಮಾಡಿದ ಅನುಭವ ಇದೆ ಬಡ ರೈತರಿಂದ ಬಂದಂತ ಪತ್ರಗಳಿಗೆ ನಿಮ್ಮ ಪತ್ರ ತಲುಪಿದೆ. ಪರಿಶೀಲನೆ ಮಾಡಿ ಏನು ಮಾಡಬೇಕೋ ಅದನ್ನು ಮಾಡುತ್ತೇವೆಂದು ತಿಳಿಸುತ್ತಿದ್ದೆವು. ಅದೂ ಇಲ್ಲವಲ್ಲ ಸ್ವಾಮಿ.

ಇನ್ನು ಬಡತನ ನಿವಾರಣೆಗಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ ವಿಶೇಷ ಘಟಕ ಯೋಜನೆ, ಸಾರ್ವಜನಿಕ ವಿತರಣೆ ವ್ಯವಸ್ಥೆ ಜನತಾ ಗೃಹಗಳ ನಿರ್ಮಾಣ ಈ ಎಲ್ಲಾ ಕಾರ್ಯಗಳನ್ನು ಕ್ರಮಬದ್ಧವಾಗಿ ಕೈಗೊಳ್ಳಲಾಗಿದೆಯೆಂದು ಹೇಳಿದ್ದೀರಿ ಇದರಲ್ಲಿ ಸತ್ಯವಾದ ಮಾತು ಒಂದು ಇದೆಯೆ? ನಾನು ಕಳೆದ ೧೧ ತಿಂಗಳಿಂದ ಅಧ್ಯಕ್ಷನಾಗಿ ಕೂತುಕೊಂಡಿದ್ದೇನೆ. ಪ್ರತಿಯೊಂದು ಹೋಬಳಿಗೂ ಹೋಗಿ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಜನಗಳ ಹತ್ತಿರ ಮಾತನಾಡುವುದಕ್ಕೆ ಮೈಚಿವರುತ್ತದೆ. ಯಾರೂ ರಿಪೋರ್ಟ್ ಮಾಡದಿದ್ದರೆ ಅಧಿಕಾರಿಗಳು ಬರದಿದ್ದರೆ ಏನು ಮಾಡುವುದು ೨೦ ಅಂಶಗಳ ಕಾರ್ಯಕ್ರಮ ಅದೋಗತಿಯಾಗಿದೆ ಎಂದರೆ ತಪ್ಪಾಗಲಾರದು. ಇನ್ನು ೮೦ ಲಕ್ಷ ಟನ್ ಕಾಳು ಉತ್ಪಾದನೆ ಮಾಡುತ್ತೇವೆಂದು ಹೇಳಿದ್ದೀರಿ ಬಹುಶಃ ಇದು ಮುದ್ರಣದ ತಪ್ಪು ಇರಬಹುದು. ಧವಸ ದಾನ್ಯಗಳು ೮೦ಲಕ್ಷ ಟನ್ ಇರಬೇಕೆಂದು ಕಾಣುತ್ತದೆ ಅದಕ್ಕೆ ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರು ನನ್ನನ್ನು ಕನ್‌ಸಲ್ಟ್ ಮಾಡಬೇಕಾಗಿತ್ತೆಂದು ಹೇಳುತ್ತಿದ್ದರು. ೮ಲಕ್ಷ ಟನ್ ಬೇಳೆ ಉತ್ಪಾದನೆಯನ್ನು ಕಾರ್ಯತಃ ತಂದರೆ ನಾನು ತುಂಬಾ ಅಬಾರಿಯಾಗಿರುತ್ತೇನೆ. ಬೇಳೆಕಾಳುಗಳ ಅಭಾವ ಬಹಳ ತೀವ್ರವಾಗಿದೆ. ಈ ಕೆಲಸವನ್ನು ತಾವು ಮಾಡುತ್ತೀರೆಂದು ನಂಬಿದ್ದೇನೆ.

ನಾನು ೨೨ ತಿಂಗಳ ಕಾಲ ಕ್ಯಾಬಿನೆಟ್‌ನಲ್ಲಿದ್ದೆ, ಒಳಗೆ ಹೋಗುವುದು ಈಚೆಗೆ ಬರುವುದನ್ನು ನೋಡಿದ್ದೀರಿ. ಸರ್ಕಾರದ ಇತಿಹಾಸದಲ್ಲಿಯೇ ಮೊದಲಬಾರಿಗೆ ಸಚಿವ ಸಂಪುಟದ ಸಭೆಯಲ್ಲಿ ಸ್ವತಃ ಸಂಪನ್ಮೂಲವನ್ನು ರೂಡಿಸುವ ಬಗ್ಗೆ ಚರ್ಚಿಸಿತು. ಎಂದು ಹೇಳಿದ್ದೀರಿ. ಸಂಪನ್ಮೂಲಗಳನ್ನು ನೀವು ಒಬ್ಬರೇ ನೋಡುವಂತ ಹಕ್ಕು ನಿಮಗೆ ಎಲ್ಲಿದೆ ನಾವು ಕೂಡ ನೋಡಿದ್ದೇವೆ. ಪ್ರತಿಯೊಬ್ಬ ಕ್ಯಾಬಿನೆಟ್ ಮಂತ್ರಿಯೂ ನೋಡುತ್ತಾನೆ. ಸಂಪನ್ಮೂಲಗಳನ್ನು ಹೇಗೆ ರೂಡಿಸಬೇಕೆಂಬುದನ್ನು ಪ್ರತಿಯೊಬ್ಬರೂ ಆಲೋಚನೆ ಮಾಡುತ್ತಾರೆ, ನೀವೊಬ್ಬರೇ ಮಾಡಿದ್ದೇವೆಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಬಹುಶ: ತಾವು ಓದಿ ಹೇಳುತ್ತಿದ್ದೀರೋ ಇಲ್ಲವೋ ಗೊತ್ತಿಲ್ಲ. ನಮ್ಮ ಕನ್ನಡ ತಪ್ಪೋ ನಿಮ್ಮ ಕನ್ನಡ ತಪ್ಪೋ ಗೊತ್ತಿಲ್ಲ. ಸಂಪನ್ಮೂಲದ ಬಗ್ಗೆ ಸೀಮಿತವಾದಂತ

ಕ್ಯಾಬಿನೆಟ್ ಸಭೆ ಸೇರಿ, ಈ ಬಗ್ಗೆ ತೀವ್ರವಾದಂತ ಚರ್ಚೆ ಮಾಡಿ ನಿರ್ಣಯ ತೆಗೆದುಕೊಂಡಿದೆ. ಇಂಥ ಸಭೆ ಯಾವುದು ಆಗಿರಲಿಲ್ಲ ಎಂದು ಹೇಳಿದೆ. ಸಂಪನ್ಮೂಲವನ್ನು ಒದಗಿಸುವ ವಿಚಾರವನ್ನು ಅವರವರೇ ಮಾಡುತ್ತಾರೆ. ನಾನು ಮಾಡುತ್ತೇನೆ. ತಾವು ತಮಾಷೆಯಾಗಿ ಹೇಳಿದ್ದೀರೋ, ಗಂಭೀರವಾಗಿ ಹೇಳಿದ್ದೀರೋ ಗೊತ್ತಿಲ್ಲ. ಕ್ಯಾಬಿನೆಟ್ ಮುಂದೆ ಯಾವ ವಿಷಯವನ್ನು ಇಡದೇ. ಸಂಪನ್ಮೂಲದ ಬಗ್ಗೆ ವಿಶೇಷವಾದ ಚರ್ಚೆ ಮಾಡಿ, ನಿರ್ಣಯಮಾಡಿ ಅನುಷ್ಠಾನಕ್ಕೆ ತರುವುದಕ್ಕೆ ದೃಢ ಸಂಕಲ್ಪವನ್ನು ಸಚಿವ ಸಂಪುಟದ ಸಭೆಯಲ್ಲಿ ಮಾಡಲಾಯಿತು. ಇದರಲ್ಲಿ ತಪ್ಪು ಇದ್ದರೆ ಹಿರಿಯರಾದ ತಾವು ಕ್ಷಮಿಸಿ.

ಶ್ರೀ ಜಿ. ರಾಮೇಗೌಡ.—ಸರ್ಕಾರದವರು ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸುವ ಸಲುವಾಗಿ ನಿರಂತರ ಪ್ರಯತ್ನ ನಡೆಸಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಮೊದಲು ಬಾರಿಗೆ ಸಚಿವ ಸಂಪುಟವು ಸ್ವತ: ಈ ವಿಷಯವನ್ನು ಕುರಿತು ಚರ್ಚೆ ನಡೆಸಿದೆ ಮತ್ತು ಅಸಂಬಂಧವಾಗಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಅವನ್ನೇ ನಾವು ಹೇಳಿದ್ದು ಅದನ್ನು ಇಲ್ಲಿ ಏತಕ್ಕೆ ಬರೆಯಬೇಕು ನಾವೆಲ್ಲಾ ಮಾಡಿರುವುದೆ ನೀವು ಮಾಡಿರುವುದು.

ಶ್ರೀ ಎಂ. ವೀರಪ್ಪಮೊಯಿಲಿ.—ಯಾರು ಹೆಚ್ಚಿಗೆ ಮಾಡಿದ್ದಾರೆ ಅದೆಲ್ಲಾ ದಾಖಲೆಯಲ್ಲಿದೆ. ಅದರ ಪರಿಣಾಮ ಏನಾಗಿದೆ ಎನ್ನುವುದನ್ನು ನಾನು ಉತ್ತರ ಕೊಡುವಾಗ ಹೇಳುತ್ತೇನೆ.

ಶ್ರೀ ಜಿ. ರಾಮೇಗೌಡ.—ನಾನು ತಪ್ಪು ಹೇಳಿದ್ದರೆ ತಿದ್ದಿಕೊಳ್ಳುತ್ತೇನೆ ನೀವು ಹೇಳುವುದರಲ್ಲಿ ಇದ್ದರೆ ತಪ್ಪು ಇದ್ದರೆ ತಿದ್ದಿಕೊಳ್ಳಿ. ನೀವು ಹೇಳದೇ ಇದ್ದರೂ ಪರವಾಯಿಲ್ಲ ದಯವಿಟ್ಟು ನಿಮ್ಮ ಆತ್ಮಕ್ಕೆ ಹೇಳಿಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ಸಚಿವ ಸಂಪುಟದ ಸಭೆ ೫ ಗಂಟೆಗಳ ಕಾಲ ಸತತವಾಗಿ ಈ ಬಗ್ಗೆ ಚರ್ಚೆ ಮಾಡಿದೆ. ಇದರಿಂದ ನಮ್ಮ ರಾಜ್ಯಕ್ಕೆ ಪ್ರಯೋಜನವಾಗಿದೆ ಎಂದು ನಾವು ಹೇಳಿದ್ದೇವೆ ಇಲ್ಲಿಯವರೆಗೆ ಮಾಡದೇ ಇದ್ದಂತಹದ್ದನ್ನು ನಾವು ಮಾಡಿದ್ದೇವೆಂದು ಹೇಳಿದ್ದೇವೆ. ತಾವು ಮಾಡದೇ ಇರುವುದನ್ನು ನಾವು ಮಾಡಿದ್ದೇವೆ ಅಂದಮೇಲೆ ತಾವು ಹಿರಿಯರು ಶಹಭಾಸ್‌ಗಿರಿ ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು, ಅದನ್ನು ಬಿಟ್ಟು ಮೊಸರಿನಲ್ಲಿ ಕಲ್ಲು ಹುಡುಕಲಿಕ್ಕೆ ಹೋದರೆ ನಾವು ಏನು ಮಾಡಲಿಕ್ಕೆ ಆಗುತ್ತದೆ.

ಶ್ರೀ ಜಿ. ರಾಮೇಗೌಡ.—ನಾವು ಮಾಡಿದ್ದನ್ನೇ ನೀವು ಮಾಡಿದ್ದೀರಿಯೇ ಹೊರತು ನಾವು ಮಾಡದೇ ಇರತಕ್ಕ ವಿಶೇಷದಂಥಾದ್ದು ಏನೂ ನೀವು ಮಾಡಿಲ್ಲ ಎಂದು ಹೇಳಿದ್ದೇನೆ.

SRI M. VEERAPPA MOILY.—I can speak on the record that at no timesuch an exclusive meeting on the mobilisation of resources was conducted either by you or in earlier times. This, I can go on record.

ಶ್ರೀ ಜಿ. ರಾಮೇಗೌಡ.—ತಾವು ಸ್ಪೆಷಲ್ ಮೀಟಿಂಗ್ ಎಂದು ಏನೂ ಬರೆದಿಲ್ಲ. ಅದು ಒಂದು ಪದ ತಾವು ಸೇರಿಸಿಬಿಟ್ಟಿದ್ದರೆ ನಾನು ಮಾತನಾಡುತ್ತಲೇ ಇರಲಿಲ್ಲ. ತಮಗೆ ಎಷ್ಟೊಂದು ಶ್ರಮ ಕೊಟ್ಟೆವು, ತಮ್ಮ ಮನಸ್ಸು ಏನಾದರೂ ನೊಂದಿದ್ದರೆ ದಯವಿಟ್ಟು ಕ್ಷಮಿಸಿ. ನೀವು ಅಲ್ಲಾಡುವುದನ್ನು ನೋಡಿದರೆ ಏನೋ ತೊಂದರೆಯಾಗಿದೆ ಅಂತ ಕಾಣುತ್ತದೆ. ಅಂತಾದ್ದು ಯಾವುದು ಏನೂ ತಪ್ಪು ಅಭಿಪ್ರಾಯ ಹೇಳಲಿಲ್ಲ.

ಶ್ರೀ ಎಂ. ವೀರಪ ಮೊಯಿಲಿ.—ಮಾನ್ಯ ಸದಸ್ಯರು ಬಹಳ ಹಿರಿಯರು. ನಮ್ಮದು ತಪ್ಪು ಇದ್ದರೆ ಹೇಳಲಿ. ನಾವು ಎಲ್ಲಿ ತಪ್ಪು ಮಾಡಿದ್ದೇವೆ ಎನ್ನುವುದನ್ನು ತೋರಿಸಬೇಕು. ಪ್ರತ್ಯೇಕವಾಗಿ ಮಾಡಿದ್ದರೆ ತಪ್ಪು ಎಂದು ಹೇಳಿ ಆಗ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ಪ್ರತ್ಯೇಕವಾಗಿ, ಸ್ಪೆಷಲ್ ಮೀಟಿಂಗ್ ಎಂದು ಬರೆದಿದ್ದರೆ ಉಸಿರು ಎತ್ತುತ್ತಿರಲಿಲ್ಲ. ಅದರ ಮೇಲೆ ಏನೂ ತರುವಂತಾದ್ದು ಇಲ್ಲ. ಟ್ಯಾಕ್ಸ್‌ನಲ್ಲಿ ಪ್ಲಸ್ ಆಗಲಿ, ಮೈನಸ್ ಆಗಲಿ, ಯಾವುದು ಇಲ್ಲ. ಅದಕ್ಕೆ ಏತಕ್ಕೆ ತಾವು ಶ್ರಮ ಪಟ್ಟುಕೊಳ್ಳುತ್ತೀರಾ? ಇನ್ನು ಹೊಸದಾಗಿ ಒಂದು ಪದ ಹೇಳಿದ್ದಾರೆ. ಶ್ರಮ್‌ಏವ ಜಯತೆ, ಬಡತನ ನಿವಾರಣೆ, ಗರೀಬಿ ಹಠವೋ. ಈ ವರ್ಷದ ಭಾಷಣದಲ್ಲಿ ಗರೀಬಿ ಹಠವೋ ಪದ ಇಲ್ಲ ಬಹಳ ಸಂತೋಷ. ''ಶ್ರಮ್‌ಏವ ಜಯತೆ'' ಉಳುವರೋ ನಮ್ಮ ಮಕ್ಕಳ ಎಂದು ಹೇಳಿದ್ದೀರಿ. ಉಳುತ್ತಾರೆ, ಮಣ್ಣು ತಲೆಮೇಲೆ ಹೊರುತ್ತಾರೆ, ಅಕ್ಕಿ

ಸಿಕ್ಕಿದ್ದರೆ ತಿನ್ನುತ್ತಾರೆ, ಇಲ್ಲದಿದ್ದರೆ ಮಣ್ಣು ಸುರಿದುಕೊಂಡು ಮಲಗಿಕೊಳ್ಳುತ್ತಾರೆ. ಶ್ರಮೇವ ಜಯತೆ ಅಂದುಬಿಟ್ಟರೆ ಮುಗಿದುಹೋಯಿತು ನಮ್ಮ ಕತೆ. ಇನ್ನು ನೇಗಿಲ ಭಾಗ್ಯ ಎಂಬ ಒಂದು ಯೋಜನೆಯನ್ನು ರೂಪಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಮೊನ್ನೇ ಕ್ಲಸ್ಟರ್ ವಿಲೇಜ್ ಎಂದು ಸೆಲೆಕ್ಟ್ ಮಾಡಿದ ಸಂದರ್ಭದಲ್ಲಿ ನಾನು ನಮ್ಮ ತಾಲ್ಲೂಕಿನಲ್ಲಿರತಕ್ಕ ಒಂದು ಹಳ್ಳಿಗೆ ಫಂಕ್ಷನ್‌ಗೆ ಹೋಗಿದ್ದೆ. ನಮ್ಮ ತಾಲೂಕಿನಲ್ಲಿ ೩೦ ಸಹಸ್ರ ಹರಿಜನರು ಇದ್ದಾರೆ. ಒಂದು ಊರಿನಲ್ಲಿ ೯೬ ಮನೆಗಳು ಇವೆ, ಅಲ್ಲಿ ೧೯ ಜೊತೆ ಎತ್ತುಗಳನ್ನು ಕೊಟ್ಟಿದ್ದಾರೆ. ಅವರವರಲ್ಲಿಯೇ ಎಷ್ಟೋ ವ್ಯಾಜ್ಯಗಳು ನಡೆಯುತ್ತಿದ್ದವು. ಒಬ್ಬರಿಗೊಬ್ಬರು ಗುದ್ದಾಟ ಮಾಡಿಕೊಂಡು ನಿಮಗೆ ಏನು ಇದೆ ಎತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಎಂದು ವ್ಯಾಜ್ಯ ನಡೆಯುತ್ತಿತ್ತು. ಏನೋ ಬದುಕಿಕೊಳ್ಳಲಿ ಎಂದು ಸರ್ಕಾರ ಕೊಟ್ಟಿದೆ ನೀವು ಅದನ್ನು ತೆಗೆದುಕೊಂಡು ಉಪಯೋಗಿಸಿಕೊಳ್ಳಿ ಎಂದು ಹೇಳಿದ್ದೇನೆ. ಇನ್ನು ಮಿಕ್ಕವರಿಗೆಲ್ಲಾ ಒಂದು ಸನಿಕೆ, ಒಂದು ಗಡಾರಿ, ಒಂದು ಗುದ್ದಲಿ ಕೊಟ್ಟಿದ್ದಾರಲ್ಲ ಏತಕ್ಕೋಸ್ಕರ ಕೊಟ್ಟಿದ್ದಾರೆ. ಸತ್ತವರನ್ನು ಏನಾದರೂ ಹೂಳಲಿಕ್ಕೆ ಅನುಕೂಲವಾಗಲಿ ಎಂದು ಕೊಟ್ಟಿದ್ದಾರಾ? ನೀವು ಇದನ್ನು ತೆಗೆದು ಕೊಳ್ಳಿ ಎಂದು ಕೊಟ್ಟಿದ್ದಾರೆ, ಅವರು ಅದನ್ನು ತೆಗೆದುಕೊಂಡು ಹೋಗಿದ್ದಾರೆ. ಇನ್ನು ೮ ದಿವಸಕ್ಕೆ ಬರುತ್ತೇವೆಂದು ಹೇಳಿದ್ದಾರೆ. ಆ ೮ ದಿವಸ ಇಟ್ಟುಕೊಂಡು ೯ನೇ ದಿವಸಕ್ಕೆ ಆ ಸನಿಕೆ ತೆಗೆದುಕೊಂಡು ಹೋಗಿ ಯಾವುದಾದರೂ ಒಂದು ಅಂಗಡಿಗೆ ಕೊಟ್ಟುಬಿಡುತ್ತಾರೆ ನೀವು ಯಾವ ಐಡಿಯಾ ಮೇಲೆ ಇದನ್ನು ಕೊಟ್ಟಿದ್ದೀರಾ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಇವೊತ್ತು ಅವರು ಕೂಲಿಗೆ ಏನಾದರೂ ಹೋದರೆ ಅದನ್ನು ಅವರು ತೆಗೆದುಕೊಂಡು ಹೋಗಬೇಕಾದ್ದೇನು ಇಲ್ಲ. ಕೂಲಿ ಮಾಡಿಸಿಕೊಳ್ಳುವವರೇ ಕೊಡತಕ್ಕಂತಾದ್ದು ಇದೆ. ನೀವು ಏತಕ್ಕೋಸ್ಕರ ಕೊಟ್ಟಿದ್ದೀರಾ ಎನ್ನುವುದು ಗೊತ್ತಾಗಲಿಲ್ಲ. ಇನ್ನು ಹರಿಜನರಿಗೆ ಸ್ಪ್ರೇಯರ್ಸ್ ಕೊಟ್ಟಿದೀರಿ, ೪೦೦ ರೂಪಾಯಿ ಬೆಲೆ ಬಾಳುವ ಸ್ಪ್ರೇಯರ್ಸ್ ಏನು ಮಾಡಲಿ ಅಂತ ಕೊಟ್ಟಿದ್ದೀರೋ ಅದು ನನಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ಈ ಸ್ಪ್ರೇಯರ್ಸ್ ಏನು ಮಾಡಬೇಕು ಎಂಬುದನ್ನು ನಿಮ್ಮ ವ್ಯವಸಾಯ ಇಲಾಖೆಯವರನ್ನು ಕೇಳಿ. ಅವರು ಏನಾದರೂ ಹೈಬ್ರಿಡ್ ಸೀಡ್ ಹಾಕಿ ಏನಾದರೂ ಬೆಳೆ ಬೆಳೆಯಲಿಕ್ಕೆ ಕೊಟ್ಟಿದ್ದೀರೋ, ಎತ್ತು ನೇಗಿಲು, ಕೊಟ್ಟಿರುವವರಿಗೆಲ್ಲಾ ಬಾವಿ ಇರತಕ್ಕವರಿಗೆಲ್ಲಾ ಕೊಟ್ಟಿದ್ದೀರೋ, ಇದರಲ್ಲಿ ಯಾವುದು ನಮೂದು ಮಾಡಿಲ್ಲ ನಾಲ್ಕು ಸ್ಪ್ರೇಯರ್ಸ್ ಕೊಟ್ಟಿದ್ದಾರೆ. ಎತ್ತುಗಳನ್ನು ಕೊಟ್ಟಿದ್ದಾರೆ, ಇನ್ನು ಕೃಷಿ ಉತ್ಪಾದನೆ ಹೇಳಿದ್ದಾರೆ. ಅದರಲ್ಲಿ ಏನು ಮಾಡಬೇಕಾಗಿತ್ತು ಎಂದರೆ ಅಗ್ರಿಕಲ್ಚರ್ ಡೆವಲಪ್‌ಮೆಂಟ್ ಇನ್ ಡ್ರೈ ಏರಿಯಾ ಅಂತ ಹಿಂದೆ ಸೆಂಟ್ರಲ್ ಸ್ಕೀಮ್ ಬಂದಿದೆ, ಮಳೆ ನೀರನ್ನು ನಿಲ್ಲಿಸಿ ಉಪಯೋಗಿಸುವ ಕ್ರಮ ಇತ್ತು ಅದು ನಿಮ್ಮಲ್ಲಿ ಇಲ್ಲ, ಸ್ಪ್ರಿಂಕಲರ್ಸ್ ಕೊಡುವ ಕ್ರಮ ಇತ್ತು. ಅದನ್ನು ಏನೂ ಮಾಡಲಿಲ್ಲ. ಒಡ್ಡು ಹಾಕುವುದು, ಅದನ್ನು ನೀವು ಹಾಕಿಸುವುದಿಲ್ಲ, ಏಕೆಂದರೆ ಎಲ್ಲಾ ಟ್ಯಾಕ್ಸ್ ಹಾಕುವಾಗ, ಬದು ಹಾಕುವಾಗ ಕೂಲಿ ಹೆಚ್ಚಿಸಿ ಎಂದು ಹೇಳುತ್ತೇವೆ. ಈಗ ಎಂಟಾಣೆ ಹೆಚ್ಚಿಸಿದ್ದಾರೆಂದು ಅಧಿಕಾರಿಗಳು ಹೇಳುತ್ತಿದ್ದರು. ಪಿ.ಡಬ್ಲ್ಯು.ಡಿ.ನಲ್ಲಿ ಮಣ್ಣು ಕೆಲಸಕ್ಕೆ ಏನು ರೇಟು ಕೊಡುತ್ತಾರೆ ಆ ರೇಟು ಕೊಟ್ಟು ಬದು ಹಾಕಿಸಿ. ಟ್ಯಾಕ್ಸ್ ಹೆಚ್ಚಿಗೆ ಬಂದರೆ ಅವನೇ ಕಟ್ಟಿಕೊಳ್ಳುತ್ತಾನೆ. ಈಗ ಅವನು ಹೊತ್ತು, ಹೊತ್ತು ಕುಸಿದು ಬೀಳುವುದಾದರೂ ತಪ್ಪುತ್ತದೆ. ಬದುಗಳನ್ನು ಹಾಕಿದರೆ, ನೀರು ನಿಲ್ಲುತ್ತದೆ, ಸಾರ ಹೊರಗೆ ಹೋಗದಂತೆ ನಿಲ್ಲುತ್ತದೆ. ದಯವಿಟ್ಟು ಅದನ್ನು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರಾಜ್ಯದಲ್ಲಿರುವ ಪ್ರತಿಯೊಂದು ಸಂತೆ ನಡೆಯುವ ಸ್ಥಳವನ್ನು ಒಂದು ಪ್ರಾಥಮಿಕ ಮಾರುಕಟ್ಟೆಯನ್ನಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ಹೇಳಿದ್ದೀರಿ. ಇದು ಬೆಸ್ಟ್ ಐಡಿಯಾ. ಇದನ್ನು ನೀವು ಮಾಡಿಬಿಟ್ಟರೆ ನಾನೇ ನಿಮಗೆ ಒಂದು ಕಿರೀಟ ಮಾಡಿಸಿಕೊಡುತ್ತೇನೆ. ಪ್ರತಿಯೊಂದು ಸಂತೆಯನ್ನು ರೆಗ್ಯುಲೇಟೆಡ್ ಮಾರ್ಕೆಟ್ ಮಾಡಿದರೆ ನಮಗೆ ಅಪಾರ ಅನುಕೂಲವಾಗುತ್ತದೆ. ರೆಗ್ಯುಲೇಟೆಡ್ ಮಾರ್ಕೆಟ್ ಎಲೆಕ್ಷನ್ ನಿಲ್ಲಿಸಿ ಮೂರು ವರ್ಷವಾಯಿತು. ಇನ್ನು ಸಂತೆಸಂತೆಗಳನ್ನು ರೆಗ್ಯುಲೇಟೆಡ್ ಮಾರ್ಕೆಟ್ ಮಾಡುತ್ತೇವೆ ಎಂದು ಹೇಳಿದ್ದೀರಿ. ನಾನು ಬದುಕಿದ್ದರೆ ನೋಡಿ ಸಂತೋಷ ಪಡುತ್ತೇನೆ. ಕಿರೀಟ ಮಾಡಿಸಲಿಕ್ಕೆ ಆಗಲಿಲ್ಲ ಅಂದರೆ ಇಂಥ ಒಂದು ಬಿಳಿ ಟೋಪಿಯನ್ನಾದರೂ ಮಾಡಿಸಿ ಹಾಕುತ್ತೇನೆ. ಇನ್ನು ದೀರ್ಘಕಾಲದಿಂದ ಇತ್ಯರ್ಥವಾಗದೆ ಇದ್ದ ರಾಜ್ಯದ ಬೀಡಿ ತಂಬಾಕು ಬೆಳೆಗಾರರ ಸಮಸ್ಯೆ ಬಗ್ಗೆ ಹೇಳಿದ್ದೀರಿ, ತಾವು ಸತ್ಯಕ್ಕೆ ದೂರವಾದ ಮಾತನ್ನು ಹೇಳಬೇಡಿ. ಮೊನ್ನೆ ಪ್ರಜಾವಾಣಿಯಲ್ಲಿ ಒಂದು ರಿಪೋರ್ಟ್ ಬಂದಿತ್ತು, ಅದನ್ನು ನೀವು ಓದಿರಬಹುದು ಎಂದು ಕಾಣುತ್ತದೆ. ಒಂದು ಸಾವಿರ ಸಿಗರೇಟು ಮಾಡುವುದಕ್ಕೆ ತಂಬಾಕು ಖರ್ಚಾಗುವುದು ೩ ರೂಪಾಯಿ, ಅವರು ಮಾರುವುದು ೩೦

ರೂಪಾಯಿ. ಈ ತಂಬಾಕು ಬೀಡಿಗೆ ಹಾಕುವುದು, ಸಿಗರೇಟಿಗೆ ಹಾಕುವುದಿಲ್ಲ ಅಂದರೆ ಆ ವಿಚಾರ ಬಿಟ್ಟುಬಿಡುತ್ತೇನೆ. ಈ ಸಂದರ್ಭದಲ್ಲಿ ತಮಗೆ ಒಂದು ಮಾತು ಹೇಳಬೇಕು ಎಂದರೆ, ಹರಿಜನರಿಗೆ ಈ ಬೀಡಿ ಕಟ್ಟುವ ಟ್ರೈನಿಂಗ್ ಆದರೂ ಕೊಡಿ. ಇದು ಖರ್ಚು ಇಲ್ಲದೇ ಇರತಕ್ಕಂಥ ಯೋಜನೆ. ಪ್ರತಿಯೊಂದು ಕಾಲೋನಿಗೂ ಒಂದೊಂದು ಕೇಂದ್ರ ಇಟ್ಟು ಬೀಡಿ ತಯಾರು ಮಾಡುವುದನ್ನು ಹೇಳಿಕೊಟ್ಟರೆ ಪ್ರತಿ ದಿವಸ ೫ರಿಂದ ೧೦ ರೂಪಾಯಿವರೆಗೆ ಸಂಪಾದನೆ ಮಾಡುವ ಶಕ್ತಿ ಅವರಿಗೆ ಬರುತ್ತದೆ. ತಾವು ಈ ಗಢಾರಿ, ಸನಿಕೆ, ಪಿಕಾಸಿ ಕೊಡುವುದರ ಬದಲು ಬೀಡಿ ಕಟ್ಟುವಂಥ ಟ್ರೈನಿಂಗ್ ಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಇನ್ನು ದನಗಳ ಆಸ್ಪತ್ರೆಯ ಬಗ್ಗೆ ಹೇಳಬೇಕು ಎಂದರೆ, ನಮ್ಮ ಪಶು ಸಂಗೋಪಾನಾ ಮಂತ್ರಿಗಳು ಇಲ್ಲ. ಅವರು ಡೆಲ್ಲಿಗೆ ಹೋಗಿದ್ದಾರೆ ಎಂದು ಕಾಣುತ್ತದೆ. ಈಗ ಮೊದಲೇ ೪೦೦ ಜನ ಡಾಕ್ಟರುಗಳು ಬೇಕು, ಈಗ ೨೦೦ ಆಸ್ಪತ್ರೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ ಅವನ್ನು ಖಾಲಿ ಮಡಗಿಕೊಳ್ಳುತ್ತಾರೋ, ಅಥವಾ ಡಾಕ್ಟರುಗಳನ್ನು ಹಾಕುತ್ತಾರೋ ಅದನ್ನು ಹೇಳಬೇಕು. ಜೊತೆಗೆ ೭೫ ಆರ್.ವಿ.ಗಳನ್ನು ಅಪ್‌ಗ್ರೇಡ್ ಮಾಡುತ್ತೇವೆಂದು ಹೇಳಿದ್ದೀರಿ, ಇದಕ್ಕೆ ಅಧಿಕಾರಿಗಳನ್ನು ಎಲ್ಲಿ ತರಿಸುತ್ತೀರಾ? ಮ್ಯಾಜಿಕ್ ಮಾಡಿದರೆ ಇವರು ಸಿಕ್ಕುವುದಿಲ್ಲ. ತಾವು ೫ ಅಗ್ರಿಕಲ್ಚರಲ್ ಕಾಲೇಜನ್ನು ಪ್ರಾರಂಭ ಮಾಡಿದಿರಿ. ಆದರೆ ಒಂದು ವೆಟರಿನರಿ ಕಾಲೇಜನ್ನೂ ಮಾಡಲಿಲ್ಲ. ತಾವು ಏತಕ್ಕೆ ಮಾಡಲಿಲ್ಲ? ಈವರ್ಷ ತಾವು ಮಾಡಿದರೂ ಮಾಡಬಹುದು. ಆದರೆ ನಿಮ್ಮ ಬಡ್ಜೆಟ್‌ನಲ್ಲಿ ಅದನ್ನು ಸೇರಿಸಿಲ್ಲ. ತಾವು ಏನುಬೇಕಾದರೂ ಮಾಡಬಹುದು, ಮಾಡಿ, ನೀವು ಮಾಡಿದ್ದಕ್ಕೆ ನಾವು ಎಸ್ ಅಂತ ಹೇಳುತ್ತೇವೆ. ಸ್ವಾಮಿ, ನಮ್ಮ ದೊಡ್ಡಬಳ್ಳಾಪುರ ತಾಲೂಕು, ಕಸಬಾ ಹೋಬಳಿಯಲ್ಲಿ ಒಂದು ರಾಜಗಟ್ಟ ಅಂತ ಹಳ್ಳಿ ಇದೆ. ಹೊರದೇಶದಿಂದ ಯಾರೇ ಬಂದರೂ ಕೂಡ ಆ ಹಳ್ಳಿಗೆ ಹಸುಗಳನ್ನು ನೋಡುವುದಕ್ಕೆ ಬರುತ್ತಾರೆ. ಅಲ್ಲಿಗೆ ಒಬ್ಬ ಡಾಕ್ಟರ್‌ನ್ನು ಡೆಪ್ಯುಟೇಷನ್‌ಮೇಲೆ ಅಲ್ಲಿಗೆ ಹಾಕಿದರು. ಪಾಪ, ಆತನಿಗೆ ಕಳೆದ ೮ ತಿಂಗಳಿಂದ ಸಂಬಳ ಕೊಟ್ಟಿಲ್ಲ. ಏಕೆಂದರೆ ಅಲ್ಲಿ ಆತನ ಪೋಸ್ಟ್ ಇನ್ನೂ ಸ್ಯಾಂಕ್ಷನ್ ಆಗಿರಲಿಲ್ಲವಂತೆ. ಹಾಗಾದರೆ ಅವನಿಗೆ ತಿನ್ನುವುದಕ್ಕೆ ಅನ್ನ ಬೇಡವೆ? ಅತನಿಗೆ ಮದುವೆಯಾಗಿದೆ, ಹೆಂಡತಿ ಮಕ್ಕಳು ಇದ್ದಾರೆ. ಆತನಿಗೆ ೮ ತಿಂಗಳಿಂದ ಸಂಬಳ ಕೊಟ್ಟಿಲ್ಲ ಅಂದರೆ ಆತ ಹೇಗೆ ಜೀವನ ಮಾಡಬೇಕು? ಆತ ತನ್ನ ಕೆಲಸವನ್ನು ಇನ್ನು ಎಷ್ಟು ಚೆನ್ನಾಗಿ ಮಾಡಬಹುದೆಂಬುದನ್ನು ತಾವು ಯೋಚನೆ ಮಾಡಬೇಕು. ನಾನು ಹೇಳುವುದರಲ್ಲಿ ಏನಾದರೂ ಅನುಮಾನವಿದ್ದರೆ ದಯವಿಟ್ಟು ನಿಮ್ಮ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಳ್ಳಿ. ಅದು ನಿಜ ಎಂದು ಕಂಡುಬಂದರೆ ಆತನಿಗೆ ಉಪಕಾರ ಮಾಡಿ ಪುಣ್ಯಕಟ್ಟಿಕೊಳ್ಳಿ.

ಸ್ವಾಮಿ, ಇನ್ನು ಹಾಲಿನ ದರವನ್ನು ಜಾಸ್ತಿ ಮಾಡಿ ಎಂದು ನಾನು ಹೇಳಿದರೆ, ಈಕಡೆಯಿಂದ ನನ್ನ ಮಾನ್ಯ ಮಿತ್ರ ರಾ ದ. ರಾಮದೇವ್‌ರವರು, ಮಾನ್ಯ ಚಂದ್ರಶೇಖರ್‌ರವರು, ಮಾನ್ಯ ತಮ್ಮೇಗೌಡರು ಇವರೆಲ್ಲಾ ಎದ್ದುಬರುತ್ತಾರೆ. ಆದ್ದರಿಂದ ನೀವು ಹಾಲಿನ ದರವನ್ನು ಏನೂ ಜಾಸ್ತಿ ಮಾಡಬೇಡಿ. ಆದರೆ ತಾವು ಒಂದು ಮಾತ್ರ ಮಾಡಬೇಕು. ಅದು ಏನೆಂದರೆ, ದನಗಳಿಗೆ ಮೇವು ಕೊಡುತ್ತೇವೆಂದು ಹೇಳುತ್ತಿದ್ದೀರಿ, ಅದು ಇವತ್ತಿನಿಂದ ಅಲ್ಲ, ನೀವು ಅಧಿಕಾರಕ್ಕೆ ಬಂದಾಗಿನಿಂದಲೂ ಇದನ್ನು ಹೇಳುತ್ತಲೇ ಇದ್ದೀರಿ. ಈಗೇನೋ ಸ್ವಲ್ಪಸ್ವಲ್ಪ ಸೆಂಟರ್‌ಗಳನ್ನು ತೆರೆಯುತ್ತಿದ್ದೀರಿ. ದನಗಳಿಗೆ ಬೇಕಾದ ತಿಂಡಿಯನ್ನು ಸಬ್ಸಿಡಿ ರೇಟನಲ್ಲಾದರೂ ತಾವು ಕೊಟ್ಟರೆ ನಿಮ್ಮನ್ನು ನಾವು ಅಭಿನಂದಿಸುತ್ತೇವೆ. ಮೂಕ ಪ್ರಾಣಿಗಳು ಹಣಕಾಸಿನ ಮಂತ್ರಿಗಳನ್ನು "ಅಂಬಾ" ಅಂತ ಹರಸುತ್ತವೆ. ಇದನ್ನು ತಾವು ಮಾಡುತ್ತೀರಾ? ನೀವು ೩೦ ಪರ್ಸೆಂಟ್ ಸಬ್ಸಿಡಿ ಕೊಟ್ಟರೂ ಇವರು ಯಾರೂ ಕೂಡ ಗಲಾಟೆ ಮಾಡುವುದಿಲ್ಲ, ಸ್ವಾಮಿ, ತಾವು ಮದರ್ ಡೈರಿ ಮಾಡುವುದಕ್ಕೆ ಹೊರಟಿದ್ದೀರಿ. ಹಿಂದೆ ನಾನು ಈ ಇಲಾಖೆಗೆ ಸಾಡೆ ತೀನ್ ತಿಂಗಳು ಮಂತ್ರಿಯಾಗಿದ್ದೆ. ಅವತ್ತು ಈ ಮದರ್ ಡೈರಿಗೆ ಜಾಗವನ್ನು ಹುಡುಕುವುದಕ್ಕೆ ಕಷ್ಟವಾಗಿದೆ ಎಂದಾಗ ನೀವು ನಂಬಲಿಲ್ಲ. ಈಗ ನೀವು ಕಳೆದ ೨ ವರ್ಷದಿಂದಲೂ ಜಾಗವನ್ನು ಹುಡುಕುತ್ತಲೇ ಇದ್ದೀರಿ. ಆದರೆ ಇನ್ನೂ ನಿಮಗೆ ಜಾಗವೇ ಸಿಕ್ಕಿಲ್ಲ. ಅಂದರೆ ನಿಮಗೆ ಜಾಗ ಸಿಕ್ಕಿಲ್ಲವೊ? ಅಥವಾ ಮಾಡುವುದಕ್ಕೆ ಮನಸ್ಸಿಲ್ಲವೊ? ಹೆಚ್.ಎ.ಎಲ್. ಹತ್ತಿರ ನಾನು ಒಂದು ಜಾಗವನ್ನು ನೋಡಿ ಅಲ್ಲಿ ಈ ಮದರ್ ಡೈರಿಯನ್ನು ಮಾಡಿ ಎಂದು ಹೇಳಿದೆ. ನೀವು ಅಧಿಕಾರಕ್ಕೆ ಬಂದಮೇಲೆ ರಾಮೇಗೌಡರು ನೋಡಿದ ಜಾಗ ಸರಿಯಿಲ್ಲವೆಂದು ಹೆಬ್ಬಾಳದ ಹತ್ತಿರವೋ ಎಲ್ಲೋ ಜಾಗವನ್ನು ನೋಡಿದಿರಿ. ಎಲ್ಲಾದರೂ ಆಗಲಿ ಮೊದಲು ಈ ಮದರ್ ಡೈರಿಯನ್ನು ಮಾಡಿ. ನಮ್ಮ ದೊಡ್ಡಬಳ್ಳಾಪುರದಲ್ಲಿ ಚಿಲ್ಲಿಂಗ್ ಸೆಂಟರ್‌ನ್ನು ಮಾಡಿದ್ದೀರಿ. ಅದರ ಕೆಪಾಸಿಟಿ ೧೦ ಸಾವಿರ ಲೀಟರ್. ಆ ಏರಿಯಾದಲ್ಲಿ ೨೫ ಸಾವಿರ ಲೀಟರ್ ಹಾಲು ಉತ್ಪತ್ತಿ ಯಾಗುತ್ತದೆ. ಅದನೆಲ್ಲಾ ಇವರೇ ನೇರವಾಗಿ

ತೆಗೆದು ಕೊಳ್ಳುತ್ತಾರೆ ನಿಮ್ಮ ಇಲಾಖೆಯಲ್ಲಿ ಕೆ.ಡಿ. ಅಂತ (ಕೆ.ಡಿ.ಡಿ.ಸಿ.) ಒಂದು ಡೈರಿ ಇದೆ. ನಾನು ಅದನ್ನು ಯಾವತ್ತೂ ಕೆ.ಡಿ. ಅಂತಲೇ ಕರೆಯುವುದು, ಅದು ಮದರ್ ಡೈರಿ.........

ಶ್ರೀ ಕೆ.ಹೆಚ್. ಶ್ರೀನಿವಾಸ್— ಹಾಗಾದರೆ ಫಾದರ್ ಡೈರಿ ಯಾವುದು?

ಶ್ರೀ ಜಿ. ರಾಮೇಗೌಡ.—ಇದಕ್ಕೆ ನೀವು ಏನು ಕರೆಯುತ್ತೀರೋ ಗೊತ್ತಿಲ್ಲ. ನಾನಂತೂ ಇದನ್ನು ಕೆ.ಡಿ. ಮದರ್ ಡೈರಿ ಅಂತಲೇ ಕರೆಯುವುದು. ಇದರ ಬಗ್ಗೆ ನಾಳೆ ನಾಡಿದರಲ್ಲಿ ಒಂದು ಕಾಲಿಂಗ್ ಅಟೆನ್ಷನ್ ಕಳುಹಿಸುತ್ತಿದ್ದೇನೆ. ಏಕೆಂದರೆ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿಸಬೇಕಾಗಿದೆ. ನಮ್ಮ ಏರಿಯಾದಲ್ಲಿ ೨೫ ಸಾವಿರ ಲೀಟರ್ ಹಾಲು ಉತ್ಪತ್ತಿಯಾಗುತ್ತದೆ. ಅದನ್ನು ತೆಗೆದುಕೊಂಡು ಹೋಗಲು ಈ ಡೈರಿಯವರು ಬರುತ್ತಾರೆ, ಇವರು ಬರುವುದೂ ಕೂಡ ಬಹಳ ಹೊತ್ತಾಗಿ. ಇವರು ಬರುವ ಹೊತ್ತಿಗೆ ಆ ಹಾಲು ಹುಳಿಯಾಗುತ್ತದೆ. ಆಗ ಇದು ಬೇಡವೆಂದು ವಾಪಸು ಕಳುಹಿಸುತ್ತಾರೆ, ಇಲ್ಲದಿದ್ದರೆ ಲೀಟರ್‌ಗೆ ೭೦ ಪೈಸೆಯಂತೆ ತೆಗೆದುಕೊಳ್ಳುತ್ತಾರೆ. ಅದನ್ನು ತಂದು ಮೊಸರು ಮಾಡಿ ೨.೫೦ ರೂ.ನಂತೆ ಮಾರಿಕೊಳ್ಳುತ್ತಾರೆ. ಅಲ್ಲಾ ಸ್ವಾಮಿ, ತಡವಾಗಿ ಹೋಗುವವರೂ ಇವರೆ, ಹಾಲು ಹುಳಿಯಾಗಿದೆ ನಮಗೆ ಬೇಡವೆಂದು ಹೇಳುವವರೂ ಇವರೆ, ಕೊನೆಗೆ ಸಿ.ಒ.ಬಿ. ಅಂತ ಹಾಕಿ ೭೦ ಪೈಸಾಕ್ಕೆ ಒಂದು ಲೀಟರ್‌ನಂತೆ ತೆಗೆದುಕೊಳ್ಳುತ್ತಾರೆ.

ಸ್ವಾಮಿ, ಕಪ್ಪು ತಲೆಯ ಒಂದು ಲ್ಯಾಕ್ಟೊ ಮೀಟರ್‌ನ್ನು ಯಾವುದೋ ಒಂದು ಕಂಪನಿಯವರ ಕಂಡು ಹಿಡಿದರು. ಆದರೆ ಅದು ಸರಿಯಾಗಿಲ್ಲವೆಂದು ತಮಗೆ ಬೇಕಾದ ಯಾರೋ ಒಬ್ಬ ರಿಟೈರ್ಡ್ ಆದ ಆಚಾರಿ ಒಬ್ಬನಿಂದ ಮಾಡಿಸಿದರು. ಅದರಲ್ಲಿ ಒಂದು ಕೆ.ಜಿ.ಗೆ ೫೦ ಪೈಸೆ ಲಾಭ ಸಿಕ್ಕುತ್ತದೆ. ಅಂದರೆ ರೈತನಿಗೆ ೫೦ ಪೈಸೆ ನಷ್ಟವಾಗುತ್ತದೆ. ನೀವು ೧ ಲಕ್ಷ ಲೀಟರ್ ಹಾಲನ್ನು ತೆಗೆದುಕೊಂಡರೆ ೫೦ ಸಾವಿರ ರೂಪಾಯಿ ಲಾಭ ಬರುತ್ತದೆ. ಇಷ್ಟರಲ್ಲೇ ಒಂದು ವರದಿ ಏನು ಬರುತ್ತದೆ ಎಂದರೆ "ನಮ್ಮ ಕೆ.ಡಿ.ಡಿ.ಸಿ. ೨ ಕೋಟಿ ರೂ. ಲಾಭ ಸಂಪಾದಿಸಿದೆ'' ಅಂತ. ಈರೀತಿ ಮಾಡಿ ಬಡ ರೈತರ ತಲೆ ಹೊಡೆದು ಲಾಭ ಸಂಪಾದನೆ ಮಾಡುವುದು ಯಾವ ನ್ಯಾಯ ಸ್ವಾಮಿ? ಹಿಂದೆ ಒಂದುಸಾರಿ ಮಾನ್ಯ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಡೈರಿ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡುತ್ತಾ "ಈ ಡೈರಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರ ಏಳಿಗೆಗೆ ಸಹಾಯ ಮಾಡುತ್ತದೆ'' ಎಂದು ಆಶ್ವಾಸನೆ ಕೊಡುತ್ತೇನೆ ಎಂದು ಹೇಳಿದರು. ಆಗ ನಾನು ಅವರ ಮುಂದೆಯೇ ಕುಳಿತಿದ್ದೆ. ಆದರೆ ಇವತ್ತು ತಾವು ಬಡರೈತರ ತಲೆಹೊಡೆದು ಲಾಭ ಸಂಪಾದನೆ ಮಾಡುತ್ತಿದ್ದೀರಿ. ಇದರ ಬಗ್ಗೆ ತಾವು ಯೋಚನೆ ಮಾಡಿ. ಕಳೆದಸಾರಿ ಮಾನ್ಯ ಮುಖ್ಯ ಮಂತ್ರಿಯವರೂ ಹಾಜರಿದ್ದ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಿದ್ದೆ. ಯಾರಾದರೂ ಒಬ್ಬ ರೈತ ಒಂದು ಫೋನ್ ಮಾಡಿದರೆ ಅಥವಾ ಒಂದು ಟೆಲಿಗ್ರಾಂ ಕಳುಹಿಸಿದರೆ ಇಲ್ಲಿಂದ ಒಬ್ಬ ಪಶುವೈದ್ಯ ಕೆ.ಡಿ. ಸೊಸೈಟಿಗಳ ಹಸುಗಳನ್ನು ನೋಡುವುದಕ್ಕೆ ಹೋಗುತ್ತಿದ್ದರು. ಅವರ ಖರ್ಚಿಗಾಗಿ ೧೫ ರೂ. ಛಾರ್ಜ್ ಮಾಡುತ್ತಿದ್ದರು. ಆದರೆ ಅವರು ಅದೇನು ತಿಳಿದುಕೊಂಡರೋ ಏನೋ ಸ್ವಾಮಿ, ಈಗ ೨೫ ರೂ. ಛಾರ್ಜ್ ಮಾಡುತ್ತಿದ್ದಾರೆ. ಏನು ಸ್ವಾಮಿ ಈ ಅನ್ಯಾಯ? ಅನಂತರ ಯಾರೋ ಒಬ್ಬರು ಒಂದು ಅರ್ಜಿಯನ್ನು ತಂದುಕೊಟ್ಟರು. ನಾನು ಮಾನ್ಯ ತಿಮ್ಮಯ್ಯನವರನ್ನು ಕುರಿತು ಏನು ಸ್ವಾಮಿ, ನನಗೆ ತಿಳಿಯದಂತೆಯೇ ಡಾಕ್ಟರ್ ಬಂದು ಹೋಗುವುದಕ್ಕೆ ೨೫ ರೂ. ಛಾರ್ಜ್ ಮಾಡಿದ್ದೀರಿ, ಏಕೆ ಹೀಗೆ ಮಾಡಿದಿರಿ ಅಂತ ಕೇಳಿದಾಗ, "ಏನೋ ಸ್ವಲ್ಪ ಖರ್ಚು ಜಾಸ್ತಿ ಬರುತ್ತಿತ್ತು, ಆದ್ದರಿಂದ ಮಾಡಿದೆ ಅಂತ ಹೇಳಿದರು. ಹೋಗಲಿ ಈಗಲಾದರೂ ಅದನ್ನು ಕಡಿಮೆ ಮಾಡುತ್ತೀರಾ ಎಂದು ನಾನು ಕೇಳಿದಾಗ, ಆಗಲಿ ನಾಳೆಯೇ ಇದನ್ನು ವಜಾ ಮಾಡುತ್ತೇನೆ ಎಂದು ಹೇಳಿದರು. ಸ್ವಾಮಿ, ಇವರು ಹೇಳಿ ಇವತ್ತಿಗೆ ೪ ತಿಂಗಳಾಯಿತು. ಇನ್ನೂ ಅದನ್ನು ವಜಾ ಮಾಡಲಿಲ್ಲ. ಈಗಲೂ ರೈತರ ಹತ್ತಿರ ಈ ಡಾಕ್ಟರ್‌ಗಳು ಒದ್ದು ವಸೂಲ್ಮಾಡುತ್ತಿದ್ದಾರೆ. ಹಾಗಾದರೆ ನೀವು ಯಾವ ರೈತರಿಗೆ ಸಹಾಯ ಮಾಡುತ್ತಿದ್ದೀರಿ ಅಂತ ನಾನು ಕೇಳಬೇಕಾಗಿದೆ. ಬಡ ರೈತನಿಗೆ ಅನುಕೂಲ ಮಾಡಿಕೊಡಬೇಕೆಂದು ತಾವು ನ್ಯಾಷನಲೈಸ್ಡ್ ಬ್ಯಾಂಕ್‌ನಿಂದಲೋ, ಹಣಕಾಸಿನ ಇಲಾಖೆಯಿಂದಲೋ, ಅಥವಾ ಸಹಕಾರಿ ಬ್ಯಾಂಕ್‌ನಿಂದಲೋ ಹಸು ತೆಗೆದುಕೊಳ್ಳುವುದಕ್ಕೆ ಸಾಲ ತೆಗೆಸಿಕೊಟ್ಟಿರುತ್ತೀರಿ. ಆ ಹಸುವಿಗೆ ಕಾಯಿಲೆ ಬಂದಾಗ ಅದನ್ನು ನೋಡುವುದಕ್ಕೆ ಬರುವ ಡಾಕ್ಟರ್ ಗೋಸ್ಕರ ೨೫ ರೂ. ಛಾರ್ಜ್ ಮಾಡಿದರೆ, ಆ ಬಡ ರೈತ ಹೇಗೆ ಬದುಕಬೇಕು? ದಯವಿಟ್ಟು ಅದನ್ನು ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

ಸ್ವಾಮಿ, ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಬರಗಾಲ ಸಂದರ್ಭದಲ್ಲಿ ನಮ್ಮ ಕಡೆ ಬೋರ್‌ವೆಲ್‌ಗಳನ್ನು ತೆಗೆಸಿ ಜನರಿಗೆ ಕುಡಿಯುವುದಕ್ಕೆ ನೀರನ್ನಾದರೂ ಕೊಟ್ಟಿದ್ದೀರಿ, ಅದಕ್ಕೋಸ್ಕರ ತಮ್ಮನ್ನು ಅಭಿನಂದಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಇರತಕ್ಕ ೩೦೦ ಬೋರ್‌ವೆಲ್‌ಗಳ ಪೈಕಿ ಸುಮಾರು ೧೫೦ ಬೋರ್‌ವೆಲ್‌ಗಳು ಕೆಟ್ಟುಹೋಗಿವೆ. ಆ ಪಂಪ್‌ಗಳನ್ನು ರಿಪೇರಿ ಮಾಡಿಸಿಲ್ಲ. ನಮಗೆ ಒಬ್ಬ ಅಸಿಸ್ಟೆಂಟ್ ಇಂಜನಿಯರ್‌ನ್ನು ಎಲ್ಲಿಂದ ತಂದು ಹಾಕಿದಿರೋ ಏನೋ ದೇವರಿಗೆ ಗೊತ್ತು. ಆತ ಧರ್ಮರಾಯನ ಮೊಮ್ಮಗನಂತೆ ಮಾತನಾಡುತ್ತಾನೆ. ಸ್ವಾಮಿ, ಪಂಪ್‌ಗಳು ಕೆಟ್ಟುಹೋಗಿವೆ ಇದನ್ನು ರಿಪೇರಿ ಮಾಡಿಸಿ ಎಂದರೆ, ಯಾಕ್ರಿ, ಮಳೆ ಬಂದು, ಕೆರೆ, ಕುಂಟೆ, ಎಲ್ಲಾ ತುಂಬಿವೆ, ಬೋರ್‌ವೆಲ್ ಕೆಟ್ಟು ಹೋದರೆ ನಿಮಗೆ ಏನಾಯಿತು ? ಹೋಗಿ ಆ ಕೆರೆ ನೀರನ್ನೇ ಕುಡಿಯಿರಿ ಅಂತ ಹೇಳುತ್ತಾನೆ. ಹಳ್ಳಿಯ ರೈತರಿಗೆ ಅನ್ನಕೊಡದಿದ್ದರೂ ಪರವಾಗಿಲ್ಲ. ಕುಡಿಯುವುದಕ್ಕೆ ಆಳವಾದ ಬಾವಿಯಿಂದ ಆರೋಗ್ಯವಾದ ನೀರನ್ನು ಕೊಟ್ಟಿದ್ದೀರಿ. ಆದರೆ ಈ ಅಧಿಕಾರಿ ಹೊಂಡದ ನೀರನ್ನೇ ಹೋಗಿ ಕುಡಿಯಿರಿ ಎಂದು ಹೇಳುತ್ತಿದ್ದಾನೆ. ದಯವಿಟ್ಟು ಆತನನ್ನು ಕರೆಸಿ ಆತನಿಗೆ ರಿಪೇರಿ ಮಾಡಿ, ಆತನಿಗೆ ಬೋರ್ ಹಾಕಿ. ಆತನಿಗೆ ಎಲ್ಲಿಗೆ ಬೋರ್ ಹಾಕಬೇಕು ಗೊತ್ತೆ ? ಆತನ ತಲೆಯಲ್ಲಿರುವ ಮೆದುಳು ಸರಿಯಾಗಿ ಕೆಲಸಮಾಡದೇ ಇರುವುದರಿಂದ ಆ ಮೆದುಳಿಗೆ ಬೋರ್ ಹಾಕಿ. ಆಗ ಆತನ ಮೆದುಳು ಚೆನ್ನಾಗಿ ಕೆಲಸಮಾಡುತ್ತದೆ.

೪-೩೦ ಪಿ. ಎಂ.

ಇನ್ನು ಜನತಾ ಮನೆಗಳ ವಿಚಾರ. ಇದನ್ನು ನಾನು ಹೇಳದಿದ್ದರೆ ತಪ್ಪಾಗುತ್ತದೆ. ಮಾನ್ಯ ಬೇಗಾನೆ ರಾಮಯ್ಯನವರು ಇದ್ದಾರೆ ಅವರನ್ನು ನಾನು ಏನೇ ಕೇಳಲಿ ಇಲ್ಲವೆಂದು ಹೇಳುವುದಿಲ್ಲ. ಆದರೆ ಯಾವುದು ಕೊಟ್ಟಿಲ್ಲ, ನಾನು ಏನು ಕೇಳಿದರು ಕೊಡುತ್ತೇನೆ ಹೋಗಿ ಗೌಡರೆ ಎಂದು ಹೇಳುತ್ತಾರೆ, ಆದರೆ ಒಂದು ಕೊಟ್ಟಿಲ್ಲ. ಏನು ಮಾಡುವುದು ನಾನು. ಇದು ನನ್ನ ದುರಾದೃಷ್ಟವೆಂದು ಹೇಳ ಬೇಕಾಗಿದೆಯೋ ಹೊರತು ಅವರನ್ನು ನಾನು ಆಕ್ಷೇಪಣೆ ಮಾಡುವುದಕ್ಕಾಗುವುದಿಲ್ಲ. ೧೯೭೪-೭೮ರ ವರೆಗೆ ಸುಮಾರು ಒಂಭೈನೂರು ಮನೆಗಳನ್ನು ಕೊಟ್ಟಿದ್ದರು, ಆವಾಗ ರಾಜ್ಯವನ್ನು ಕಳೆದುಕೊಂಡವರು ಮುಖ್ಯಮಂತ್ರಿಗಳಾಗಿದ್ದಾಗ. ೧೯೮೦-೮೧ಕ್ಕೆ ನೀವು ಬಂದಿರಿ ಎರಡನೂರು ಮನೆಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದಿರಿ. ೧೯೮೧-೮೨ಕ್ಕೆ ಪ್ರಚಾರಮಾಡಿದ್ದೇ ಮಾಡಿದ್ದು ೮೬ ಮನೆಗಳನ್ನು ಕೊಟ್ಟೆವು ಎಂದು. ೧೯೮೨-೮೩ಕ್ಕೆ ೨೩ಕ್ಕೆ ಇಳಿಸಿ ೩೬ ಕೊಡುತ್ತೀರೋ ಏನೋ ಗೊತ್ತಿಲ್ಲ. ಇದನ್ನು ಬೇಕಾದರೆ ತೆಗೆದು ನೋಡಿ ಲೇಶಮಾತ್ರ ಸುಳ್ಳು ಇದ್ದರೆ ನಾನು ತಮ್ಮನ್ನು ಕ್ಷಮೆ ಕೇಳುತ್ತೇನೆ,

ಶ್ರೀ ಎಂ. ವೀರಪ್ಪ ಮೊಯಿಲಿ.— ಈಗ ಕೊಡುವುದು ಮುಖ್ಯವೋ ತೆಗೆದುಕೊಳ್ಳುವುದು ಮುಖ್ಯವೋ ?

ಶ್ರೀ ಜಿ. ರಾಮೇಗೌಡ.— ಎರಡು ಮುಖ್ಯ, ಕೊಡುವುದು ಮುಖ್ಯ, ತೆಗೆದುಕೊಳ್ಳುವುದು ಮುಖ್ಯ. ನೀವು ಕೊಟ್ಟಿದ್ದನ್ನು ನಾವು ಉಪಯೋಗಿಸಿಕೊಳ್ಳದಿದ್ದರೆ ಅದು ನಮ್ಮದು ತಪ್ಪಾಗುತ್ತದೆ. ನಾವು ಕೇಳಿದಷ್ಟು ನೀವು ಕೊಡದಿದ್ದರೆ ಅದು ನಿಮ್ಮದು ತಪ್ಪಾಗುತ್ತದೆ ಅಲ್ಲವೆ ? ಈಗ ನ್ಯಾಯಾಧಿಕಾರಿ ಗಳಿಗೆ ವಸತಿ ಗೃಹಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಮಾಡಿದ್ದೀರಿ. ಬಹಳ ಒಳ್ಳೆಯದು ಅವರು ಸಪರೇಟಾಗಿಯೇ ಇರಬೇಕು. ಅವರು ಸಮಾಜದಲ್ಲಿ ಒಟ್ಟೊಟ್ಟಿಗೆ ಓಡಾಡಬಾರದು. ಅವರು ಸಪರೇಟಾಗಿಯೇ ಇರಬೇಕೆಂದು ಮಾಡಿದ್ದೀರಿ. ಎಷ್ಟೊ ಕೊಡುತ್ತೀರೋ ಎಷ್ಟು ಬಿಡುತ್ತೀರೋ ನೋಡೋಣ, ಮೊದಲು ಅದನ್ನು ಮಾಡಿ, ನೀವು ಕೆಲವೊಂದು ಒಳ್ಳೆಯದನ್ನು ಆಲೋಚನೆ ಮಾಡಿದ್ದೀರಿ ಹಾಗೆಯೇ ನಮಗೆ ಕೆಟ್ಟದ್ದನ್ನು ಆಲೋಚನೆ ಮಾಡಿದ್ದೀರಿ. ನಾವು ನೀವು ಮಾಡಿರತಕ್ಕಂಥ ಒಳ್ಳೆಯ ದನ್ನು ಶ್ಲಾಘನೆ ಮಾಡುತ್ತೇವೆ ಏತಕ್ಕೆಂದರೆ ಅವರು ನ್ಯಾಯ ಮಾಡತಕ್ಕಂಥವರು ದೂರವಾಗಿ, ಸಪರೇಟಾಗಿ ಯಾರ ಗೊಂದಲವೂ ಇಲ್ಲದೆ ಎಕ್ಸ್‌ಟೆನ್‌ಷನ್‌ಗಳಲ್ಲಿ ಇರಬೇಕು. ಮನೆಗಳನ್ನು ಕಟ್ಟಿಸಿಕೊಡಿ.

ಇನ್ನು ಕಂಪಲ್‌ಸರಿ ಎಜ್ಯುಕೇಶನ್‌ಗೆ ಬಹಳವಾಗಿ ದುಡ್ಡನ್ನು ಕೊಟ್ಟಿದ್ದೀರಿ. ನಿಮಗೆ ಗೊತ್ತು, ನೀವು ಮಹಾ ಬುದ್ಧಿವಂತರು. ಹಿಂದೆ ಮಂತ್ರಿಯಾಗಿದ್ದಾಗ ನಾನು ನಿಮ್ಮ ಒಡನಾಡಿಯಾಗಿದ್ದೆ. ನಿಮ್ಮಲ್ಲಿರತಕ್ಕಂಥ ಇಂಟಲಿಜೆನ್ಸಿ ಬೇರೆ ಯಾರಿಗೂ ಇಲ್ಲ. ಇದಕ್ಕೆ ಏತಕ್ಕೆ ದುಡ್ಡು ಕೊಟ್ಟಿರುತ್ತೀರಿ ಎಂದರೆ ಇದಕ್ಕೆ ಮೂರು ಕಾಸು ಕೂಡ ಖರ್ಚಾಗುವುದಿಲ್ಲ. ಆದ್ದರಿಂದ ಇದಕ್ಕೆ ದುಡ್ಡು ಕೊಟ್ಟಿ

ರುವುದು. ಇಲ್ಲಿ ಅಡಲ್ಟ್ಸ್ ಎಜುಕೇಶನ್ ಎಂದು ಹೇಳುವುದು ಅಲ್ಲಿ ಕಡ್ಡಾಯ ಶಿಕ್ಷಣವನ್ನು ಲೂಸ್ ಬಿಟ್ಟುಬಿಡುವುದು. ಕಡ್ಡಾಯ ಶಿಕ್ಷಣದ ಬಗ್ಗೆ ಸಾಕಷ್ಟು ಅಂಕಿಅಂಶಗಳು ಇರುತ್ತದೆ ಬೇಕಾದರೆ ತೆಗೆದು ನೋಡಿ. ಒಂದು ಊರಲ್ಲಿ ೫೫ ಮಕ್ಕಳು ಬರಬೇಕೆಂದರೆ ೫ ಮಕ್ಕಳು ಬರುತ್ತಾರೆ ಉಳಿದ ೪೫ ಜನ ಮಕ್ಕಳು ಬರುವುದೇ ಇಲ್ಲ. ಈವಾಗ ಅವರಿಗೆ ರಾತ್ರಿ ಹೊತ್ತು ಓದುವ ಸ್ಕೂಲ್‌ಗಳಲ್ಲಿ ೧೨ ವರ್ಷದ ಹುಡುಗರು ಬರುತ್ತಾರೆ. ನಾನು ಒಂದುಬಾರಿ ಇನ್‌ಸ್ಪೆಕ್ಷನ್‌ಗೆ ಹೋಗಿದ್ದೆ. ಆ ಹುಡುಗರನ್ನು ಕುರಿತು ನೀವು ಇಲ್ಲಿಗೆ ಏತಕ್ಕೆ ಬರುತ್ತೀರೋ ನೀವು ಅಲ್ಲಿರಬೇಕೆಂದು ಹೇಳಿದೆ. ಅದಕ್ಕೆ ಅವರು ಏನೋ ನಿಮ್ಮ ದಯದಿಂದ ಬೆಳಿಗ್ಗೆಯೆಲ್ಲ ಕೂಲಿ ಮಾಡಿಕೊಂಡು ಈಗ ಸಾಯಂಕಾಲ ಎರಡು ಅಕ್ಷರವನ್ನು ಕಲಿತುಕೊಳ್ಳೋಣವೆಂದು ಆಸೆಯಿಂದ ಬಂದಿದ್ದೇವೆ ನಮ್ಮನ್ನು ತೆಗೆಯಬೇಡಿ ಎಂದು ಹೇಳಿದರು. ಅಯ್ಯೋ ಎಲ್ಲಾದರು ಉಂಟೇನೋ ನಿನ್ನ ಹೆಸರು ತಿಮ್ಮ ಎಂದು ಬರೆಯುವುದನ್ನು ಕಲಿತುಕೊಳ್ಳೋ ಎಂದು ಆಶೀರ್ವಾದ ಮಾಡಿಬಂದೆ. ನನ್ನ ಆಶೀರ್ವಾದ ತಕ್ಷಣ ಹಿಡಿಯುತ್ತದೆ. ನಿಮಗೂ ಆಶೀರ್ವಾದ ಮಾಡುತ್ತೇನೆ. ಹೀಗೆ ನೀವು ಇನ್ನೂ ಹತ್ತು ವರ್ಷ ರಾಜ್ಯಭಾರ ಮಾಡಿ, ಜನರಿಗೆ ಏನು ಸಹಾಯ ಮಾಡುತ್ತೀರಿ ಆ ಸಹಾಯವನ್ನು ಜನರು ನೆನಸಿಕೊಳ್ಳುತ್ತಾರೆ. ಏಕೆಂದರೆ ನೀವು ಮತ್ತೆ ಓಟಿಗೆ ಹೋಗ ಬೇಕಾಗಿದೆ. ನಿಮಗೆ ಆಶೀರ್ವಾದ ಮಾಡಿದರೆ ನಿಮಗೆ ಬಲ ಬರುತ್ತದೆ. ನಿಮಗೆ ಬಲ ಬಂದಷ್ಟು ಅವರು ನೋಯುವುದು ಜಾಸ್ತಿಯಾಗುತ್ತದೆ. ಅದು ಆಗಲಿ, ಅವರು ಪಡಬಾರದು ಕಷ್ಟ ಪಡುತ್ತಿದ್ದಾರೆ. ಅದನ್ನು ಹೇಳತೀರದು. ಬೆಲ್ಲವನ್ನು ಕೊಡದಿದ್ದರೂ ಬೆಲ್ಲದಂಥ ಮಾತು. ನೀವು ಪ್ರಾರಂಭದಲ್ಲಿ ಹಳ್ಳಿಗಳಿಗೆ ಹೋದದ್ದು, ಮತ್ತೆ ಒಂದುಸಾರಿಯಾದರೂ ನೀವು ನನ್ನ ಹಳೆ ಸ್ನೇಹಿತ ಎಂದು ನಾನು ಬರುವವನಿದ್ದೇನೆ ನೀನು ಅಡ್ಡ ಬಾ ಎಂದು ಕಾಗದವನ್ನು ಬರೆದಿದ್ದೀರಾ ? ಎಲ್ಲರೂ ಸಾಯಂಕಾಲ ನೀರು ಕುಡಿಯುವುದಕ್ಕೆ ಕಳಿತುಬಿಡುತ್ತಾರೆ. ಅದು ಏನು ಎನ್ನುವುದು ಗೊತ್ತಿಲ್ಲ. ನಾನು ನೋಡಿದ್ದರೆ ಅಲ್ಲವೆ ಹೇಳುವುದು. ಅದನ್ನು ನಾನು ನೀರೆಂದೆ ಕರೆಯುವುದು. ಅವರೆಲ್ಲರೂ ನಿಮ್ಮ ಪಾರ್ಟಿಯವರೇ, ಈಗ ನನ್ನ ಪಾರ್ಟಿಯಲ್ಲಿರುವವರು ಮರ ಕಡಿದು ಹಾಕುವವರೇ. ಮರ ಕತ್ತರಿಸಿದರೆಂದು ಅವರನ್ನು ಹಿಡಿದರೆ ನಿಮ್ಮ ಪಾರ್ಟಿಯವರು ಆ ಮರಗಳನ್ನು ಕದ್ದುಕೊಂಡು ಹೋದರು. ದಯವಿಟ್ಟು ಏನಾದರೂ ಸಮಾಜ ಸುಧಾರಣೆ ಮಾಡಲು ಮಾರ್ಗವನ್ನು ಕಂಡುಹಿಡಿಯಿರಿ. ಅದನ್ನು ಮಾಡದಿದ್ದರೆ ತಪ್ಪಾಗುತ್ತದೆ. ಅಡಾಲ್ಟ್ ಎಜ್ಯುಕೇಷನ್‌ಗೆ ಬಾರಿ ಖರ್ಚುಮಾಡುತ್ತೇವೆಂದು ಹೇಳಿದಿರಿ. ಅದು ಖರ್ಚಾಗುವುದಿಲ್ಲ, ನಿಮಗೆ ಗೊತ್ತಾಗುವುದೂ ಇಲ್ಲ, ಅದು ಹಾಗೆಯೇ ಉಳಿಯುತ್ತದೆ. ಮತ್ತೆ ಯಾವುದೋ ಒಂದು ಬಡ್ಜೆಟ್‌ಗೆ ಇಟ್ಟುಕೊಳ್ಳುತ್ತೀರಿ. ಯಾವುದಕ್ಕೋ ಖರ್ಚು ಮಾಡಿಕೊಳ್ಳುತ್ತೀರಿ. ನಾವು ಅದನ್ನು ಬೇಡವೆಂದು ಹೇಳುವುದಿಲ್ಲ. ಶಾಲಾ ಕಟ್ಟಡಗಳಿಗೆ ಎಂದು ಹೇಳಿದಿರಿ, ನಮಗೆ ೩-೪ ವರ್ಷಗಳಿಂದಲೂ ಏನು ಕೊಟ್ಟಿಲ್ಲ. ಈ ವರ್ಷವಾದರೂ ೫-೬ ಕಡೆ ಶಾಲಾ ಕಟ್ಟಡಗಳನ್ನು ಕೊಡಿ ಎಂದು ಹೇಳುತ್ತೇನೆ. ನಮ್ಮ ಸ್ಕೂಲ್‌ಗಳಲ್ಲಿ ಬೆಟರ್‌ಮೆಂಟ್ ಕಮಿಟಿ ಎಂದು ಇದೆ. ಅವರು ಕೊಟ್ಟಂಥ ದುಡ್ಡನ್ನು ಯಾವ ರೀತಿ ಖರ್ಚು ಮಾಡಿದ್ದಾರೆಂದರೆ ಸ್ಕೂಲ್ ಬೆಂಚುಗಳನ್ನು ತಿರುವಿಹಾಕಿದ್ದಾರೆಯೇ ಹೊರತು ಏನೂ ಮಾಡಿಲ್ಲ. ಕೆಲವು ಕಡೆ ಕೊಟ್ಟಿದ್ದೀರಿ ಇಲ್ಲವೆಂದು ಹೇಳುವುದಿಲ್ಲ. ದೊಡ್ಡ ದೊಡ್ಡ ಸ್ಕೂಲುಗಳಿಗೆ ಕೊಟ್ಟಿದ್ದೀರಿ, ಮಂಗಳೂರು ಸೈಡಿಗೆ ಹೆಚ್ಚಿಗೆ ಹಣವನ್ನು ಕೊಟ್ಟಿದ್ದೀರಿ. ಕೊಟ್ಟರೆ ಅದು ತಪ್ಪಲ್ಲ. ರೀಜನಲ್ ಅಪೆಕ್ಷನ್, ಅದು ಇರಲೇಬೇಕು. ಅದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ.

ಇನ್ನು ಎರಡುಸಾವಿರ ಜ್ಞಾನ ಮಂದಿರಗಳನ್ನು ಕಟ್ಟಿಸುತ್ತೇವೆಂದು ಹೇಳಿರುತ್ತೀರಿ. ಇದು ಒಂದು ಒಳ್ಳೆಯ ಸ್ಕೀಮ್. ಎಲ್ಲೆಲ್ಲಿ ಹರಿಜನರು ಇದ್ದಾರೋ ಅಂಥ ಕಡೆ ಕೊಡಿ. ಆದರೆ ಜ್ಞಾನ ಮಂದಿರಗಳನ್ನು ತೆರೆಯುವ ಊರುಗಳಲ್ಲಿ ಮಾತ್ರ ಹೆಂಡದ ಅಂಗಡಿಗಳನ್ನು ತೆರೆಯಬೇಡಿ. ಅಲ್ಲಿ ಕುಡಿಯುತ್ತಾರೆ, ಇಲ್ಲಿ ಕುಣಿಯುತ್ತಾರೆ. ಆದ್ದರಿಂದ ದಯವಿಟ್ಟು ಆಲೋಚನೆ ಮಾಡಿ. ಎಲ್ಲಿ ಜ್ಞಾನಮಂದಿರಗಳನ್ನು ಕಟ್ಟಬೇಕೆಂದು ಇರುತ್ತೀರೋ ಅಲ್ಲಿ ಹೆಂಡದ ಅಂಗಡಿಗಳನ್ನು ಇಡಲು ಅವಕಾಶವನ್ನು ಮಾತ್ರ ಕೊಡಬೇಡಿ.

ಆಮೇಲೆ ಗೃಹ ಕಲ್ಯಾಣ ಮಾಡಲು ಎಲ್ಲ ಪದಗಳನ್ನು ಉಪಯೋಗಿಸಿ ಮಾಡಿದ್ದೀರಿ. ಈ ಯೋಜನೆ ಏನು ಇದೆ ಅದನ್ನು ಸ್ವಲ್ಪ ಎಕ್ಸ್‌ಪ್ಲೈನ್ ಮಾಡಿ. ಹೀಗೆ ಮಾಡುವಾಗ ಏನಾದರೂ ಒಂದು ಕಮಿಟಿಯನ್ನು ಮಾಡಿದರೆ ನಮ್ಮ ಕಡೆಯವರನ್ನು ದಯವಿಟ್ಟು ಸೇರಿಸಬೇಡಿ ವಿಧವೆಯರನ್ನು ಸುಧಾರಿಸುವುದಕ್ಕೆ, ನಡೆತೆಗೆಟ್ಟ ಹೆಣ್ಣುಮಕ್ಕಳನ್ನು ಸುಧಾರಿಸುವುದಕ್ಕೆ ನಿರ್ಗತಿಕರನ್ನು ಸುಧಾರಿಸುವುದಕ್ಕೆ

ಸಾಧ್ಯವೇ. ಸುಬದ್ರ ಕುಟುಂಬವನ್ನು ಕೊಡುವುದಕ್ಕೆ ಸಾಧ್ಯವೇ ? ಮಹಾತ್ಮಗಾಂಧಿಯವರೂ ಕೂಡ ಇದಕ್ಕೆ ಕೈ ಹಾಕಿರಲಿಲ್ಲ. ನೀವು ಈ ಯೋಜನೆಯನ್ನು ಹಿಡಿದಿದ್ದೀರಿ. ದೇವರು ನಿಮಗೆ ಒಳ್ಳೆಯದನ್ನು ಮಾಡಲಿ. ಈ ಕಾರ್ಯದಲ್ಲಿ ಜಯಗಳಿಸಿ. ನಿಮಗೆ ನಾನು ಆಶೀರ್ವಾದ ಮಾಡುತ್ತೇನೆ. ಹಾಗೆ ಏನಾದರೂ ಕಮಿಟಿಯನ್ನು ಮಾಡುವಾಗ ನಿಮ್ಮ ಕಡೆಯವರನ್ನೇ ಸೇರಿಸಿಕೊಳ್ಳಿ, ನಮ್ಮ ಕಡೆಯವರನ್ನು ದಯವಿಟ್ಟು ಬಿಟ್ಟುಬಿಡಿ.

ಇನ್ನು ಸ್ವಾಮಿ ಪ್ರಮುಖ ಮಾರುಕಟ್ಟೆಗಳಿಗೆ ಲೈಲಾನ್ ಬೇಲಿಯನ್ನು ಹಾಕುತ್ತೇವೆಂದು ಹೇಳಿರುತ್ತೀರಿ. ಅದು ಪ್ರಮುಖವಾದ ಮಾರುಕಟ್ಟೆಗಳಿಗೆ ಎಂದು ಹೇಳಿರುತ್ತೀರಿ. ಯಾವುದೇ ಮಾರ್ಕೆಟಿಗೆ ಆಗಲಿ ಲೈಲಾನ್ ಬಲೆಯನ್ನು ಹಾಕಲು ಸಾಧ್ಯವೇ. ಮಾರ್ಕೆಟಿಗೋ ಅಥವಾ ಮಾರ್ಕೆಟ್‌ಗೆ ಸೇರಿದ ಗ್ರಾಮಗಳಿಗೋ ಯಾವುದು ನಿಮ್ಮ ಅಭಿಪ್ರಾಯ ಗೊತ್ತಿಲ್ಲ. ಪ್ರಮುಖವಾದ ಮಾರ್ಕೆಟ್‌ಗಳಿಗೆ ಎಂದು ಹೇಳುವುದಕ್ಕೆ ಬದಲಾಗಿ ಮಾರ್ಕೆಟ್‌ಗೆ ಸೇರಿದ ಹಳ್ಳಿಗಳಿಗೆ ಕೊಡಿ.

ಇನ್ನು ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರ ಸಬ್‌ಜೆಕ್ಟ್‌ಗೆ ಬರುತ್ತೇನೆ. ಅದು ವನ ನಿರ್ಮಾಣ ಯೋಜನೆ. ಈ ಯೋಜನೆಯಿಂದ ಮಲೆನಾಡಿಗೆ ಸೌದೆ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿರುತ್ತೀರಿ. ಏತಕ್ಕೆ ಸಮುದ್ರಕ್ಕೆ ಮಳೆ ಸುರಿಸುವ ಕೆಲಸ ಮಾಡುತ್ತೀರಿ. ಸೌದೆ ಇಲ್ಲದಿರುವುದು ನಮ್ಮ ಬಯಲು ಸೀಮೆಯಲ್ಲಿ. ಸಾಲು ಮರಗಳನ್ನು ಕಡಿಯುವುದು ನಮ್ಮ ಬಯಲು ಸೀಮೆಯಲ್ಲಿ. ಏನೋ ಅಷ್ಟೋ ಇಷ್ಟೋ ಕೊಡುವುದಿದ್ದರೆ ಇಲ್ಲಿಗೆ ಕೊಡಿ. ಅದನ್ನು ಬಿಟ್ಟು ಮಲೆನಾಡಿಗೆ ಸೌದೆ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದರೆ, ದಯವಿಟ್ಟು ಅದನ್ನು ಮಾಡುವುದಕ್ಕೆ ಹೋಗಬೇಡಿ. ಏತಕ್ಕೆಂದರೆ ಬೆಂಗಳೂರಿನಲ್ಲಿ ಒಂದು ಟನ್ನಿಗೆ ನಾಲ್ಕುನೂರು ರೂಪಾಯಿಗಳು ಇರುತ್ತದೆ. ಅಲ್ಲಿ ಬಹಳ ಸೌಲಭ್ಯವಿರುತ್ತದೆಂದು ಅಲ್ಲಿ ಮಾಡುವುದಕ್ಕೆ ಹೊರಟಿದ್ದೀರಿ. ನಾನು ಮಂತ್ರಿಯಾಗಿದ್ದಾಗ ಉತ್ತರ ಕನ್ನಡ ಪ್ರದೇಶದಲ್ಲಿ ೩೫ ರೂಪಾಯಿಗಳಿಗೆ ಒಂದು ಟನ್ ಸೌದೆ ಮಾರಿರುತ್ತೇವೆ. ಹಿಂದೆ ಆ ರೀತಿ ಒಂದು ಅಗ್ರಿಮೆಂಟ್ ಆಗಿತ್ತು. ಈಗಲೂ ಮಾರುತ್ತಾರೋ ಏನೋ ಅದು ಇರಲಿ. ಶಿವಮೊಗ್ಗದಲ್ಲಿ ಮಾಡಿ ಬೇಡವೆಂದು ಹೇಳುವುದಿಲ್ಲ, ಮಂಗಳೂರಿನಲ್ಲಿ ಮಾಡಿ, ಬೆಂಗಳೂರು, ಕೋಲಾರ, ಚಿತ್ರದುರ್ಗ ಇಂಥ ಕಡೆಗಳಲ್ಲೆಲ್ಲ ಸೌದೆಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವಂಥ ವ್ಯವಸ್ಥೆಯನ್ನು ಮಾಡಿ. ದೊಡ್ಡಬಳ್ಳಾಪುರದಲ್ಲಿ ೫ ಸಹಸ್ರ ಜನಸಂಖ್ಯೆ ಇರುತ್ತದೆ. ಅಲ್ಲಿ ಯಾರು ಸೌದೆಯನ್ನು ಮಾರಾಟ ಮಾಡುವವರೇ ಇಲ್ಲ. ದಯವಿಟ್ಟು ಎಲ್ಲೆಲ್ಲಿ ಕಾಡು ಇಲ್ಲವೋ ಅಂಥ ಕಡೆ ಸೌದೆಯನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ನಿಗದಿ ಮಾಡಿ. ನಾನು ಮಂತ್ರಿಯಾಗಿದ್ದಾಗ ಒಂದು ಟನ್‌ಗೆ ೧೨೫ ರೂಪಾಯಿಗೆ ಮಾರಾಟ ಮಾಡಿದ್ದೇನೆ. ನಾನು ಆಚೆಗೆ ಹೋದೆ ಅದನ್ನೆಲ್ಲ ವಜಾ ಮಾಡಿದಿರಿ, ಏತಕ್ಕೆ ಮಾಡಿದಿರೋ ಗೊತ್ತಾಗಲಿಲ್ಲ.

ಸೌದೆಯನ್ನು ೧೨೫ ರೂಪಾಯಿಗಳಿಗೆ ಮಾಡಬೇಕೆಂದು ಮಾಡಿದ್ದು, ಎಲ್ಲಾ ಕಡೆಗೂ ಒಂದೇ ರೇಟ್‌ನಲ್ಲಿ ಮಾರಬೇಕೆಂದು ಮಾಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ವಯಸ್ಸಿನಲ್ಲಿ ಕಿರಿಯವರಾದರೂ ಬುದ್ಧಿಯಲ್ಲಿ ಪ್ರಳಯಾಂತಕರು ಇದನ್ನೆಲ್ಲಾ ಇವರೇ ಮಾಡಿದ್ದು. ಆಗಿನ ಮುಖ್ಯಮಂತ್ರಿಗಳನ್ನು ಬೆರಗು ಮಾಡಿ ೧೨೫ ರೂಪಾಯಿ ಮಾಡಬೇಕೆಂದು ಶ್ರೀ ಕೆ. ಎಚ್. ಶ್ರೀನಿವಾಸ್‌ರವರು ನನ್ನ ಕೈಯಲ್ಲಿ ಆರ್ಡರ್ ಮಾಡಿಸಿಬಿಟ್ಟರು. ನಾನು ಆರ್ಡರ್ ಮಾಡಿದೆ. ಈಗ ನೀವು ಬಂದು ಎಲ್ಲವನ್ನು ಹೊಡೆದುಹಾಕಿ ಆ ರೇಟೆಲ್ಲಾ ಹೋಯಿತು.

ಇನ್ನೊಂದು ವಿಷಯ ತೋಟಿತಳವಾರರಿಗೆ ಪೂಜಾರುಗಳಿಗೆ ಪೆನ್‌ಷನ್ ಕೊಡುತ್ತಿದ್ದೀರಿ, ಪಟೇಲರುಗಳು ಏನು ಪಾಪ ಮಾಡಿದ್ದಾರೆ ? ಅವರಿಗೇಕೆ ಪೆನ್‌ಷನ್ ಕೊಡುತ್ತಿಲ್ಲಾ ? ಸರ್ಕಾರಿ ಅಧಿಕಾರಿಗಳು ನೀವುಗಳು ಹೋದಾಗ ಅವನು ಅವನ ಹೆಂಡತಿ ಸೇರಿಕೊಂಡು ನಿಮಗೆಲ್ಲಾ ಬೇಯಿಸಿ ಹಾಕುತ್ತಾರೆ ಅವನಿಗೇಕೆ ಪೆನ್‌ಷನ್ ಇಲ್ಲ. ಹಿಂದೆ ಪಟೇಲರುಗಳಿಗೆ ವರ್ಷ ಒಂದಕ್ಕೆ ಪೋಡಿಗೆ ಎಂದು ೫ ರೂಪಾಯಿ ೬ ರೂಪಾಯಿ ಕೊಡುತ್ತಿದ್ದರು. ಪೋಡಿಗೆ ಅಂದರೆ ಬೀದಿರಿನ ತಡಿಕೆ ಎಂದಾಗುತ್ತದೆ. ಪಟೇಲರುಗಳಿಗೆ ಪೆನ್‌ಷನ್ ಕೊಡದೇ ಏತಕ್ಕೆ ಬಿಟ್ಟಿದ್ದೀರಿ ? ಅವನು ಒಕ್ಕಲಿಗ ಎಂದು ಬಿಟ್ಟಿದ್ದೀರಾ ? ಪಟೇಲರುಗಳ ಪೈಕಿ ಸಾಬರು ಇದ್ದಾರೆ ನಿಮಗೆ ಗ್ರಹಚಾರ ಬಂದೀತು ಮೊದಲು ಅವರಿಗೆ ಪೆನ್‌ಷನ್ ಕೊಡಿರಿ.

ಶ್ರೀಮತಿ ಅನಸೂಯ ಗಜಾನನಶರ್ಮ.—ಮಲೆನಾಡು ಏರಿಯಾಗಳಲ್ಲಿ ಸೌದೆಯನ್ನು ಕಡಿಮೆ ಬೆಲೆಯಲ್ಲಿ ಕೊಡುತ್ತಿರುವುದು ಆಶ್ಚರ್ಯವೇನಲ್ಲ. ಮಲೆನಾಡಿನ ಜನರು ಯಾವರೀತಿ ಇರುತ್ತಾರೆಂದೂ ಮಾನ್ಯ ಮಂತ್ರಿಗಳಿಗೆ ಮತ್ತು ಸದಸ್ಯರುಗಳಿಗೆ ಗೊತ್ತಿದೆ. ಅವರು ಕಾಡಿನ ಮಧ್ಯೆ ಹುಲಿ, ಹಾವು ಇತರೆ ಕಷ್ಟಗಳಿರುತ್ತವೆ. ಮಲೆನಾಡಿನಲ್ಲಿ ಜನಗಳಿಗೆ ಕಷ್ಟವಿದೆ ಎಂದು ಸೌದೆ ದರ ಕಡಿಮೆ ಮಾಡಿದ್ದಾರೆ. ಮಾನ್ಯ ರಾಮೇಗೌಡರು ಏತಕ್ಕೆ ಈ ರೀತಿ ಹೇಳುತ್ತಾರೋ ಗೊತ್ತಿಲ್ಲ.

ಶ್ರೀ ಜಿ. ರಾಮೇಗೌಡ.—ಶ್ರೀಮತಿ ಅನಸೂಯಮ್ಮನವರಿಗೆ ಸೌದೆ ೩೫ ರೂಪಾಯಿಗಳಿಗೆ ಕೊಟ್ಟರೆ ನಮಗೆ ೭೫ ರೂಪಾಯಿಗಳಿಗೆ ಕೂಡಿ. ಆಗಲೂ ಕೂಡ 10 ಪರ್ಸೆಂಟ್ ರೈಸ್ ಆದಂತೆ ಆಗುತ್ತದೆ. ಮಂತ್ರಿಗಳು ಏನು ಮಾಡುವುದಕ್ಕಾಗುವುದಿಲ್ಲ ಹಿಂದಿನ ಅಗ್ರಿಮೆಂಟ್.

ಶ್ರೀ ವಿ. ಎಂ. ಗಾಡಿ.—ಬ್ರಿಟಿಷ್‌ನವರ ಕಾಲದಿಂದಲೂ ಮಲೆನಾಡು ಏರಿಯಾಗಳಲ್ಲಿ ಸೌದೆ ಕಡಿಮೆ ದರಗಳಲ್ಲಿ ಸಿಗುತ್ತಿತ್ತು. ಅದಕ್ಕೋಸ್ಕರ ಈಗಲೂ ಕಡಿಮೆ ದರಗಳಲ್ಲಿ ಸಿಗುತ್ತದೆ.

ಶ್ರೀ ಜಿ. ರಾಮೇಗೌಡ.—ನಮ್ಮ ಮಾನ್ಯ ಸದಸ್ಯರಾದ ಗಾಡಿಯವರು ಕಾಡಿನಲ್ಲೇ ಹುಟ್ಟಿ ಕಾಡಿನಲ್ಲೇ ಬೆಳೆದವರು ಬಹಳ ಸಂತೋಷಪಡುತ್ತೇವೆ. ಆದರೆ ಸೌದೆಯನ್ನು ನಮಗೆ ಕೊಡಿ ಉಳಿದು ದನ್ನು ಅವರೇ ತಿನ್ನಲಿ. ನಿನ್ನೆ ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಭಾಷಣ ಮಾಡುತ್ತಿದ್ದರು. ಅವರು ಎಂದೂ ಆ ರೀತಿ ಭಾಷಣ ಮಾಡಿದವರಲ್ಲಾ. ನೀವೆಲ್ಲಾ ನೋಡಿದ್ದೀರಿ, ಅವರು ಮಂತ್ರಿಗಳಾಗಿ ದ್ದಾಗ ಸೆಕ್ರೆಟರಿಗಳವರ ಹತ್ತಿರ ಮಾಡಬಾರದ ಕೆಲಸಗಳನ್ನೆಲ್ಲಾ ಮಾಡಿಸಿದ್ದಾರೆ. "ಅವಸರವಾಗಿ ಮದುವೆಯಾಗಿ ಆರಾಮವಾದಾಗ ಚಿಂತೆ ಪಟ್ಟ" ಮಾನ್ಯ ಬಸವಲಿಂಗಪ್ಪನವರು ಹಾಗೇನಾದರೂ ಮಾಡಿದ್ದಾರೋ ಏನೋ ಗೊತ್ತಿಲ್ಲ. ಎಲ್ಲಿಯಾದರೂ ಕೆಲಸವಾಗಬೇಕಾದರೆ ಲಂಚ ಇದ್ದೇ ಇರುತ್ತದೆ. ಅದನ್ನು ನಾವು ಯಾರು ತಪ್ಪಿಸುವುದಕ್ಕಾಗುವುದಿಲ್ಲ. ತೆಗೆದುಕೊಳ್ಳುವುದು ಯಾರಿಗೂ ಗೊತ್ತಾಗುವುದಿಲ್ಲ. ಎಲ್ಲಾರೂ ಹೇಳುತ್ತಾರೆ ಅಷ್ಟೆ ಲಂಚ ಕೊಟ್ಟೆ ಕೆಲಸ ಮಾಡಿಸಿಕೊಳ್ಳುತ್ತಾರೆ. ಮಾಡಿಸದಿದ್ದರೆ ಸರ್ಕಾರ ನಡೆಯುವುದಿಲ್ಲ, ಲಂಚವನ್ನು ಎಲ್ಲರೂ ತಿಂದೇ ತಿನ್ನುತ್ತಾರೆ. ಕಡತದ ಹಾಳೆ ತಿರುವಾಗಲೂ ಎಂಜಲು ಹಾಕುತ್ತಾರೆ, ಜೇನು ತೆಗೆದರೂ ಎಂಜಲು ಆಗುತ್ತದೆ, ಅದೇರೀತಿ ಬೆಲ್ಲ ತೆಗೆದರೂ ಎಂಜಲು ಹಾಕುತ್ತಾರೆ. ಇವತ್ತು ಇದೊಂದು ಸಂಪ್ರದಾಯ ಎಲ್ಲರೂ ಮಾಡುತ್ತಾರೆ, ಎಲ್ಲರೂ ಮಾಡುವಾಗ ನಾವು ಯಾರನ್ನು ಆಕ್ಷೇಪಣೆ ಮಾಡುವುದು ? "ಅವಸರದಲ್ಲಿ ಮದುವೆ ಮಾಡಿಕೊಂಡು ಆರಾಮವಾಗಿ ಪಶ್ಚಾತ್ತಾಪ ಪಡುತ್ತಾರೆ" ಅವರು ಪಶ್ಚಾತ್ತಾಪ ಪಡುವುದು ಬೇಡ.

ಇನ್ನು ಕಲಬೆರಕೆ ವಿಚಾರದಲ್ಲಿ ಒಂದು ಮಾತನ್ನು ಹೇಳಿಲ್ಲ. ನಾನು ಮಂತ್ರಿಯಾಗಿದ್ದಾಗ ಪ್ರತಿಯೊಂದು ಜಿಲ್ಲೆಯಲ್ಲೂ ಲ್ಯಾಬೋರೇಟರಿ ಆಗಬೇಕೆಂದು ಮಾಡಿದ್ದೇನೆ. ನೀವು ಅದನ್ನು ವಜಾ ಮಾಡಿದ್ದೀರಿ. ಆರೋಗ್ಯ ಇಲಾಖೆಯ ಜೊತೆಗೂಡಿಕೊಂಡು ಪ್ರತಿಯೊಂದು ಜಿಲ್ಲೆಯಲ್ಲಿಯೂ ಕಲಬೆರಿಕೆಯನ್ನು ಪರೀಕ್ಷೆ ಮಾಡತಕ್ಕ ಸಲಕರಣೆಗಳನ್ನು ಕೊಟ್ಟು ಕಲಬೆರಿಕೆ ಪರೀಕ್ಷಾ ಕೇಂದ್ರಗಳನ್ನು ಮಾಡಿದ್ದೆವು. ನಾನು ಒಳ್ಳೆಯದನ್ನು ಮಾಡಿದ್ದರೆ ಒಳ್ಳೆಯದೆಂದು ಹೇಳಿ, "ಹೌದಾದರೆ ಅಹುದೆನ್ನಿ ಇಲ್ಲವಾದರೇ ಇಲ್ಲವೆನ್ನಿ" ಬಹುಜನರಿಗೆ ಬೇಕಾಗಿರುವ ವಸ್ತುಗಳ ಕಲಬೆರಿಕೆಯಾಗುತ್ತಿದೆ, ಇದು ಬಹಳ ಜಾಸ್ತಿಯಾಗುತ್ತಿದೆ. ಕೋಳಿಮೊಟ್ಟೆಗಳನ್ನು ಕಲಬೆರಿಕೆ ಮಾಡುತ್ತಿದ್ದಾರೆಂದೂ ಗೊತ್ತಾಗಿದೆ. ಕೋಳಿಮೊಟ್ಟೆಗಳ ಜೊತೆ ಬಾತು ಮೊಟ್ಟೆಗಳನ್ನು ಸೇರಿಸಿ ಮಾರುತ್ತಿದ್ದಾರೆ. ಪಾಪ ಕದ್ದು ತಿನ್ನುವ ಬ್ರಾಹ್ಮಣರಿಗೆ ಕೋಳಿಮೊಟ್ಟೆ ಯಾವುದು ಬಾತುಮೊಟ್ಟೆಯಾವುದು ಗೊತ್ತಾಗುವುದಿಲ್ಲ. ಬಾತು ಮೊಟ್ಟೆಯಲ್ಲಿ ಶಕ್ತಿ ಕಡಿಮೆ ಇರುತ್ತದೆ ಜೊತೆಗೆ ವಾಯು ಬರುತ್ತದೆ. ಕೋಳಿಮೊಟ್ಟೆಯಲ್ಲಿ ಪ್ರೋಟೀನ್ ಅಂಶ ಜಾಸ್ತಿ ಇರುತ್ತದೆ ಅದನ್ನು ತಿಂದರೆ ಶಕ್ತಿ ಬರುತ್ತದೆ. ಅದೇರೀತಿ ಅಕ್ಕಿಗೆ ಕಲ್ಲು, ಬೆಣ್ಣೆಗೆ ಕೊಬ್ಬು ಬೆರೆಸುತ್ತಾರೆ. ಇಂತಹ ಪ್ರಾಮುಖ್ಯವಾದ ವಿಷಯಗಳನ್ನು ಬಿಟ್ಟಿದ್ದೀರಿ. ಅರ್ಥಮಂತ್ರಿಗಳು ತಮ್ಮ ಕಾರ್ಯದರ್ಶಿಯವರಿಗೆ ಹೇಳಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಲ್ಯಾಬೋರೇಟರಿಗಳನ್ನು ಇಡಬೇಕು. ಆಯಾ ಜಿಲ್ಲೆಯಲ್ಲಿ ಸಿಗತಕ್ಕ ಆಹಾರ ಪದಾರ್ಥಗಳನ್ನು ಪರೀಕ್ಷೆ ಮಾಡಿಸಿ. ಮಹಿಳಾ ಸಂಘಗಳು ಸಾಕ್ಷಿ ಹೇಳುವುದಕ್ಕೆ ಬರಬೇಕು. ನಮ್ಮ ಮಾನ್ಯ ಸದಸ್ಯೆಣೀಯವರಾದ ಅನಸೂಯಮ್ಮನವರಂಥವರು ಕೋರ್ಟ್‌ಗಳಲ್ಲಿ ಧೈರ್ಯವಾಗಿ ಸಾಕ್ಷಿ ಹೇಳುವುದಕ್ಕೆ ಬರುತ್ತಾರೆ. ಕೋರ್ಟ್‌ಗಳಲ್ಲಿ ಸಾಕ್ಷಿ ಹೇಳುವುದರಲ್ಲಿ ಗಂಡಸರಿಗಿಂತ ಹೆಂಗಸರು ಬಹಳ ಧೈರ್ಯಶಾಲಿಗಳು. ಗಂಡಸರು ಧೈರ್ಯದಲ್ಲಿ ಹೇಡಿಗಳು. ತಾವು ದಯವಿಟ್ಟು ಕಲಬೆರಿಕೆ ಪರೀಕ್ಷಾ ಕೇಂದ್ರಗಳನ್ನು ತೆರೆಯಲು ತೀವ್ರವಾಗಿ ತೆಗೆದುಕೊಳ್ಳಬೇಕು. ಮಾನ

ಶ್ರೀನಿವಾಸರವರ ಮತ್ತು ಗುಂಡೂರಾಯರ ವಿಶ್ವಾಸದಿಂದ ನಾನು ಕಲಬೆರಿಕೆ ವಿಚಾರದಲ್ಲಿ ಎಲ್ಲಾ ರಾಜ್ಯ ಮತ್ತು ದೇಶಗಳಲ್ಲಿ ನೋಡಿದ್ದೇನೆ. ಕಲಬೆರಕೆ ಮಾಡಿದವರಿಗೆ ಅಮೇರಿಕಾದಲ್ಲಿರತಕ್ಕ ಶಿಕ್ಷೆ ಇನ್ನಾವ ದೇಶದಲ್ಲೂ ಇಲ್ಲ. ನಮ್ಮದೇಶದಲ್ಲಿ ಕಲಬೆರಕೆ ಮಾಡಿದವರಿಗೆ ಏನು ಶಿಕ್ಷೆ ಕೊಡುತ್ತೀರಿ ? ತಾರೀಫು ಮಾಡಂತ್ತೀರಿ. A Diamond cuts diamond. ನಾನು ಮಂತ್ರಿಯಾಗಿದ್ದಾಗ ಮಾಡಿದ್ದೆ. ಈಗ ಇಲ್ಲಿ ಬಂದು ಕುಳಿತಿದ್ದೇನೆ. ಈ ಕಲಬೆರಿಕೆಯನ್ನು ತಪ್ಪಿಸುವುದಕ್ಕೆ ತಾವು ಏನಾದರೂ ದಯವಿಟ್ಟು ಮಾಡಲೇಬೇಕು. ಇಲ್ಲದಿದ್ದರೆ ದೇಶನಾಶವಾಗುತ್ತದೆ. ಇನ್ನೊಂದು ದೊಡ್ಡ ವಿಷಯ ಹೆಂಡದಲ್ಲೂ ಕೂಡ ಕಲಬೆರಿಕೆ ಆಗುತ್ತಿದೆಯಂತೆ ಹೆಂಡ ಶುದ್ಧವಾಗಿದ್ದರೆ ನಾನು ಕುಡಿಯಬಹುದು. ಫೈನಾನ್ಸ್ ಮಿನಿಸ್ಟರ್ ಕೂಡ ಕುಡಿಯಬಹುದು ಕುಡಿದರೆ ಶರೀರ ತಣ್ಣಗಿರುತ್ತದೆ. ಏನೊ ಒಂದು ರಸಾಯನಿಕ ವಸ್ತುವನ್ನು ಸೇರಿಸಿ ತಿರುಗಿಸಿ ಮಾರುತ್ತಾರೆ. ಇದನ್ನು ಕುಡಿದ ಬಹಳ ಹರಿಜನರು ರೋಗಗ್ರಸ್ಥರಾಗಿ ಸಾಯುತ್ತಿದ್ದಾರೆ. ೧೦೦ವರ್ಷ ಬಾಳಬೇಕಾದವರು ೫೦ವರ್ಷಗಳಲ್ಲೇ ಸಾಯುತ್ತಿದ್ದಾರೆ. ಕಲಬೆರಿಕೆ ತಪ್ಪಿಸುವುದಕ್ಕೆಂದು ಒಂದು ಇಲಾಖೆಯನ್ನು ಮಾಡಿ. ಆ ಇಲಾಖೆಗೆ ಸ್ಪೆಷಲ್ ಆಗಿ ಒಬ್ಬರಂ ಮಂತ್ರಿಯನ್ನು ಮಾಡಿ. ಆ ಮಂತ್ರಿ ಪದವಿಯನ್ನು ಮಾನ್ಯ ಎಚ್.ಟಿ, ಕೃಷ್ಣಪ್ಪನವರಿಗೆ ಕೊಡಿ ಅವರು ಚೆನ್ನಾಗಿ ನಡೆಸುತ್ತಾರೆ. ಅವರು ಬಹಳ ಚೆನ್ನಾಗಿ ನಡೆಸುತ್ತಾರೆ. You will be surprised.

ರೈತರಿಗೆ ನೀವು ಏನನ್ನು ಮಾಡಿಲ್ಲ. ವ್ಯಾಪಾರ ಮಾಡತಕ್ಕ ವರ್ತಕರು ಎಲ್ಲಾ ಪದಾರ್ಥಗಳನ್ನು ಇಷ್ಟೆ ಬೆಲೆಗೆ ಮಾರಬೇಕೆಂದು ನಿಬಂದನೆ ಹಾಕಿ. ಎಲ್ಲಾ ದೇಶಗಳಲ್ಲೂ ಹಾಗೆ ಮಾಡಿದ್ದಾರೆ. ಹಾಗೂ ಜಾಸ್ತಿ ಬೆಲೆಗೆ ಮಾರಿದರೆ ಅವರಿಗೆ ಶಿಕ್ಷೆ ಕೊಡುವ ವ್ಯವಸ್ಥೆಯನ್ನು ಮಾಡಿ.

MR. DEPUTY SPEAKER.—Please conclude,

ಶ್ರೀ ಜಿ. ರಾಮೇಗೌಡ.—ಸತ್ಯಕ್ಕೆ ದೂರವಾದದ್ದನ್ನು ನಾನು ಹೇಳಿಲ್ಲ, ನಡೆಯುತ್ತಿರುವುದನ್ನ ಹೇಳಿದ್ದೇನೆ. ನಾನೂ ಖಂಡಿತವಾಗಿಯೂ ಜಾಸ್ತಿ ಸಮಯ ಮಾತನಾಡಿದ್ದೇನೆ, ಆದ್ದರಿಂದ ತಮ್ಮಲ್ಲಿ ಕ್ಷಮೆ ಕೋರುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಹೇಳುವುದೇನೆಂದರೆ,

"It is better to be a soldier's widow than a coward s wife"

ಎಂದು ಹೇಳುವಂತೆ ನೀವೂ ಸಹ ಧೈರ್ಯ ಮಾಡಿ ಈ ಒಂದು ಕೀರ್ತಿಯನ್ನು ಪಡೆದುಕೊಳ್ಳಿ. ಅಂದರೆ ಇದರಲ್ಲಿರುವ ಒಳ್ಳೆಯ ಅರ್ಥವನ್ನು ತಾವು ತೆಗೆದುಕೊಳ್ಳಬೇಕೇ ಹೊರತು, ಕೆಟ್ಟ ಅರ್ಥ ಮಾಡಿಕೊಳ್ಳ ಬಾರದು. ಒಟ್ಟಿನಲ್ಲಿ ನೀವು ಒಳ್ಳೆಯದನ್ನು ಮಾಡಿದಿರಿ ಎಂದು ನಾವೆಲ್ಲರೂ ಹೇಳುವಂತಾಗಬೇಕು. ಇಲ್ಲಿಯವರೆಗೆ ನಾನು ಅನೇಕ ಮುಖ್ಯವಾದ ವಿಷಯಂಗಳನ್ನು ಹೇಳಿದ್ದೇನೆ. ತಾವೂ ಸಹ ನಾನು ಹೇಳಿದ್ದನ್ನು ಬರೆದುಕೊಂಡಿದ್ದೀರಿ. ಆದರೆ ತಾವೂ ಏನು ಬರೆದುಕೊಂಡಿರಿ ಎಂಬುದು ಆ ಪರಮಾತ್ಮನಿಗೆ ಗೊತ್ತು. ನೀವು ನಿಜವಾಗಿಯೂ ಬರೆದುಕೊಂಡಿದ್ದರೆ, ಅದನ್ನೆಲ್ಲಾ ಕಾರ್ಯರೂಪಕ್ಕೆ ತಂದಿದ್ದೇ ಆದರೆ ಜನರಿಗೂ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ ನಾನು ಹೇಳಿದ್ದನ್ನೆಲ್ಲಾ ನಡೆಸಿಕೊಡ ಬೇಕೆಂದು ಮತ್ತೊಮ್ಮೆ ಕೇಳಿಕೊಂಡು. ನಾನು ಸ್ವಲ್ಪ ಹೆಚ್ಚು ಸಮಯ ತೆಗೆದುಕೊಂಡಿದ್ದಕ್ಕಾಗಿ ಅಧ್ಯಕ್ಷರಲ್ಲಿ ಕ್ಷಮೆ ಕೋರಿ, ತಮಗೆ ಕಡೆಯದಾಗಿ ಮತ್ತೊಮ್ಮೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆನಂದಕುಂದಹೆಗ್ಡೆ (ಬ್ರಹ್ಮಾವರ್).—ಮಾನ್ಯ ಅಧ್ಯಕ್ಷರೇ, ನಾನು ೧೯೮೨–೮೩ ನೇ ಸಾಲಿನ ಆಯುವ್ಯಯ ಪತ್ರವನ್ನು ಸಮರ್ಥಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಈ ರಾಜ್ಯದ ತೆರಿಗೆಗಳ ಪಾಲು ೬೪೪.೧೬ ಕೋಟಿ ರೂಪಾಯಿಗಳೆಂದು ಇಲ್ಲಿ ಹೇಳಿದ್ದಾರೆ. ಇನ್ನೂ ಒಂದು ನೂರು ಕೋಟಿ ರೂಪಾಯಿಗಳನ್ನು ಈ ಬಾಬಿನಿಂದ ನಾವು ನಿರೀಕ್ಷಿಸಬಹುದಾಗಿತ್ತು. ಆದರೆ ಕೆಲವರು ಕರವನ್ನು ಕೊಡದೆ ತಪ್ಪಿಸಿಕೊಳ್ಳುವುದರಿಂದ ಇದು ಕಡಿಮೆಯಾಗಿದೆ. ಕೆಲವರು ತೆರಿಗೆಯನ್ನೇ ಕೊಡದೆ ತಪ್ಪಿಸಿ ಕೊಳ್ಳುವುದು ಒಂದು ಸಂಪ್ರದಾಯವಾಗಿಬಿಟ್ಟಿದೆ? ಇದು ನಮ್ಮ ರಾಜ್ಯದ ತೆರಿಗೆಗೆ ಮಾತ್ರ ಸೀಮಿತ ವಾಗಿಲ್ಲ, ಕೇಂದ್ರ ಸರ್ಕಾರದ ಕರವನ್ನು ಸಹ ಕೊಡದೆ ತಪ್ಪಿಸಿಕೊಳ್ಳುವ ಜನರಿದ್ದಾರೆ. ಇದರ ಒಂದು ವ್ಯಾಪ್ತಿಯಿಂದ ಬಹಳ ಜನರು ಹೊರಗೆ ಉಳಿದಿದ್ದಾರೆ. ಈ ತೆರಿಗೆಗಳನ್ನು ಏನಾದರೂ ಮಾಡಿ ತಪ್ಪಿಸಿ ಕೊಳ್ಳಬೇಕೆಂಬ ಮನೋಭಾವ ನಮ್ಮ ಕೆಲವು ಜನರಲ್ಲಿರುವುದು ಒಂದು ವಿಶೇಷ. ಇದೇ ಕಾರಣದಿಂದ ನಮ್ಮ ರಾಜ್ಯಕ್ಕೆ ತೆರಿಗೆಗಳ ಆದಾಯವನ್ನು ನಾವು ಹೆಚ್ಚು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯನ್ನು ತಪ್ಪಿಸಿಕೊಳ್ಳುವ ಜನರ ಪೈಕಿ ಮೂರು ಜನರನ್ನು ಸ್ವರ್ಗದಲ್ಲಿ

ಒಂದು ಸಲ ತನಿಖೆಗೆ ಒಳಪಡಿಸಲಾಯಿತು. ಮೂರು ಜನರನ್ನೂ ಸಹ ಪಂಜರದಲ್ಲಿಟ್ಟು ನೀವು ತೆರಿಗೆ ಕೊಡದೆ ಅಪರಾಧ ಮಾಡಿರುವುದರಿಂದ, ಇದರ ಬಗ್ಗೆ ತಾವೇನು ಹೇಳುತ್ತೀರಿ ಎಂದು ಅವರನ್ನು ಕೇಳಲಾಯಿತು. ಆಗ ಅವರಲ್ಲಿ ಒಬ್ಬರು ಸರ್ಕಾರಕ್ಕೆ ಕರವನ್ನು ಕೊಡುವುದನ್ನು ತಪ್ಪಿಸಿಕೊಳ್ಳುವುದು ಅವಶ್ಯಕವೆಂದು ಹೇಳಿದರು. ಇನ್ನೊಬ್ಬರು ಕರವನ್ನು ತಪ್ಪಿಸಿಕೊಳ್ಳುವುದು ಅನಿವಾರ್ಯವೆಂದು ಹೇಳಿದರು. ಮೂರನೆಯವರು ಸರ್ಕಾರ ನನ್ನಿಂದ ಕರವನ್ನು ನಿರೀಕ್ಷಿಸಲ್ಪಟ್ಟಿತ್ತು ಎಂದು ಹೇಳಿದರು. ಹೀಗೆ ಒಬ್ಬೊಬ್ಬರೂ ಸಹ ಕರ ಕೊಡುವುದನ್ನು ತಪ್ಪಿಸಿಕೊಂಡರೇ ಹೊರತು ಸರ್ಕಾರಕ್ಕೆ ಕರ ಕೊಡುವುದರ ಉದ್ದೇಶವನ್ನು ಯಾರೂ ಗೌರವಿಸಲಿಲ್ಲ. ಈಗಲೂ ಸಹ ನಮ್ಮಲ್ಲಿ ಕರ ಕೊಡುವುದನ್ನು ಗೌರವಿಸುವ ಮನೋಧರ್ಮ ಬೆಳೆಯಲಿಲ್ಲ. ಎಲ್ಲರೂ ಕರವನ್ನು ಸರಿಯಾಗಿ ಕೊಡುವುದಾದರೆ ನಮ್ಮ ಸರ್ಕಾರಕ್ಕೆ ಇನ್ನೂ ನೂರು ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಆದಾಯ ಬರುತ್ತದೆ. ಈ ರೀತಿ ಹಣ ಬಂದರೆ ನಾವು ಇನ್ನೂ ಹೆಚ್ಚಿನ ಬೆಳವಣಿಗೆಯನ್ನು ನಿರೀಕ್ಷಿಸಬಹುದಾಗಿತ್ತು. ಆದರೆ ಪರಿಸ್ಥಿತಿಯೇ ಬೇರೆ. ನಮ್ಮ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಮತ್ತು ಸಾರ್ವಜನಿಕಾಂಗ ಎಂದು ನಾಲ್ಕು ಅಂಗಗಳಿವೆ. ಈ ನಾಲ್ಕೂ ಅಂಗಗಳೂ ಪರಸ್ಪರಪೂರಕವಾಗಿ ಸಹಕರಿಸಿದರೆ ನಮ್ಮ ಒಂದು ಅಪೇಕ್ಷಿತ ಉದ್ದೇಶಗಳನ್ನುಸಾಧನೆ ಮಾಡಬಹುದಾಗಿತ್ತು. ಆದರೆ ವಾದಗ್ರಸ್ಥವಿಲ್ಲದ ವಿಚಾರಗಳಿಲ್ಲ ಮತ್ತು ಸಮಸ್ಯೆಗಳಿಲ್ಲದ ಕ್ಷೇತ್ರಗಳಿಲ್ಲ. ಉದಾಹರಣೆಗೆ ಹೇಳಬೇಕೆಂದರೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಒಂದು ಮಾತಿದೆ. ಅದೇನೆಂದರೆ ರಾಜ್ಯವನ್ನಾಳುವವರು ಮತ್ತು ಧುರೀಣರಾದವರು ಜನರಲ್ಲಿ ಕೆಲವು ನಂಬಿಕೆಗಳನ್ನು, ಕೆಲವುಶ್ರದ್ಧೆಗಳನ್ನುಕೆಲವು ಭ್ರಮೆಗಳನ್ನು ಹುಟ್ಟಿಸಬೇಕು, ಆದರೆ ಅವರು ಮಾತ್ರ ಅದರಲ್ಲಿ ಸೇರಿಕೊಳ್ಳಬಾರದೆಂದು ಹೇಳಿದೆ. ಆದ್ದರಿಂದ ವಾದಮಾಡುವ ಒಂದು ಪದ್ಧತಿಯಲ್ಲಿ ಮಾತ್ರ ಎಲ್ಲರೂ ಈ ನಂಬಿಕೆ, ಭ್ರಮೆ ಮತ್ತು ಶ್ರದ್ಧೆಯನ್ನು ತೋರಿಸುತ್ತಾರೆಯೇ ಹೊರತು ಯಾರು ಸಹಕರಿಸುವುದಿಲ್ಲ. ಆದ್ದರಿಂದ ಈ ನಾಲ್ಕು ಅಂಗಗಳಲ್ಲಿ ಕೆಲವು ಅಭಾವಗಳಿರುವುದನ್ನು ನಾವು ಗುರುತಿಸಬಹುದಾಗಿದೆ. ಇದರ ಒಂದು ಹಿನ್ನೆಲೆಯಲ್ಲಿ ಕೌಟಿಲ್ಯನು ಅಸಾಧನಾ, ವಿತ್ತಹೀನ, ಬುದ್ಧಿಮಂತಸ್ಯ ಹೃತ್ತಮಾ, ಸಾಧಯಂತ್ಯಾಶು ಕಾರ್ಯಾಣಿ ಕಾಕಕೂರ್ಮ ಮೃಗೀತವತ್ ಎಂದು ಹೇಳಿದ್ದಾನೆ ಅಂದರೆ ಅಸಾಧ್ಯನಾದವನು ಬುದ್ಧಿವಂತನಾದರೆ ತನ್ನ ಸಂಪತ್ತನ್ನು ಅವರಿವರ ಸಹಕಾರದಿಂದ ಬೆಳೆಸಿಕೊಂಡು ಹೋಗುತ್ತಾನೆಂದು ಇದರಲ್ಲಿ ಹೇಳಿದ್ದಾನೆ. ಇದೇರೀತಿಯಲ್ಲಿ ನಮ್ಮ ಅರ್ಥ ಮಂತ್ರಿಗಳು ಬಹಳ ಕೌಶಲ್ಯಪೂರ್ಣವಾಗಿ ಹಾಗೂ ವೈಶಿಷ್ಟ್ಯಪೂರ್ಣವಾಗಿ ಆಕರಣೆ ಮತ್ತು ವಿತರಣೆಯನ್ನು ಈ ಮುಂಗಡ ಪತ್ರದ ಮೂಲಕ ಮಂಡನೆ ಮಾಡಿದ್ದಾರೆಂದು ನನ್ನ ಅಭಿಪ್ರಾಯ. ಈ ಆಯ ವ್ಯಯ ಪತ್ರದಲ್ಲಿರುವ ವೈಶಿಷ್ಟಗಳೆಂದರೆ ನೇಗಿಲಭಾಗ್ಯ, ಸಾಗರ ದೀಪ, ಮುನ್ನಡೆ, ಗೃಹಕಲ್ಯಾಣ ಹಾಗೂ ಆಶಾಕಿರಣ ಯೋಜನೆಗಳು. ಈ ಯೋಜನೆಗಳಲ್ಲಿ ವ್ಯಾಪಕವಾದಂಥ ಅರ್ಥವಿದೆ ಮತ್ತು ಉದ್ದೇಶಗಳಿವೆ. ಸುಮಾರು ೧೨೫೦ ಕೋಟಿ ರೂಪಾಯಿಗಳ ಒಂದು ಬಜೆಟ್ ಅಂದಾಜನ್ನು ಮಾನ್ಯ ಆರ್ಥಿಕ ಮಂತ್ರಿಗಳು ಏನು ರೂಪಿಸಿದ್ದಾರೆ, ಇದರೊಳಗೆ ಈ ಕೆಲವೊಂದು ವೈಶಿಷ್ಟಪೂರ್ಣವಾದ ಯೋಜನೆಗಳು ಒಳಗೊಂಡಿವೆ. ನೇಗಿಲಭಾಗ್ಯ ಎಂಬ ಯೋಜನೆಯ ಅರ್ಥ ಏನೆಂದರೆ, ನಮ್ಮ ಕೃಷಿ ಕ್ಷೇತ್ರಕ್ಕೆ ಬಹಳ ಮಹತ್ವವಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಗುರುತಿಸುವುದರ ಮೂಲಕ ಹಾಗೂ ಅದರ ಹಿನ್ನೆಲೆಯಲ್ಲಿ ಇದನ್ನು ಜಾರಿಗೆ ತರುತ್ತಿದ್ದಾರೆಂದು ಹೇಳಬಹುದು. ಹಿಂದೆ ಬ್ರಿಟೀಷರ ಕಾಲದಲ್ಲಿದ್ದಂಥ ಅರ್ಥ ಮಂತ್ರಿಗಳೊಬ್ಬರು ಈ ದೇಶದ ಆರ್ಥಿಕ ವ್ಯವಸ್ಥೆ ಮಳೆಯನ್ನೇ ಅವಲಂಬಿಸಿದೆ ಎಂದು ಹೇಳಿದ್ದರು. ಅದೇರೀತಿ ಇವೊತ್ತಿನ ದಿವಸ ನಮ್ಮ ಆರ್ಥಿಕ ಸಂಪತ್ತಿನಲ್ಲಿ ಶೇಕಡಾ ೫೦ರಷ್ಟು ಆದಾಯ ಈ ಕೃಷಿ ಕೇತ್ರದಿಂದ ಬರುತ್ತಿದೆ. ಈ ಕಾರಣದಿಂದ ಮಾನ್ಯ ಮಂತ್ರಿಗಳು ಕೃಷಿಯ ಅಭಿವೃದ್ಧಿಗಾಗಿ ಕಾವೇರಿ ಜಲಾನಯನ ಪ್ರದೇಶವನ್ನು ಹೊರತುಪಡಿಸಿ ನೇರವಾಗಿ ೮೧ ಕೋಟಿ ರೂಪಾಯಿಗಳನ್ನು ಮತ್ತು ಬೇರೆ ಮೂಲಗಳಿಂದ ೧೨೦ ಕೋಟಿ ರೂಪಾಯಿಗಳನ್ನು ತೊಡಗಿಸಿದ್ದಾರೆ. ಜೊತೆಗೆ ೫ ಲಕ್ಷ ಜನರಿಗೆ ಉದ್ಯೋಗ ಒದಗಿಸುವ ಭರವಸೆಯನ್ನು ಸಹ ಇದರಲ್ಲಿ ನೀಡಿದ್ದಾರೆ. ಕೆಲಸಕ್ಕಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಲ್ಪಟ್ಟ ಪದವೀದರರುಗಳ ಸಂಖ್ಯೆಯನ್ನು ಹಾಗೂನಿರುದ್ಯೋಗಿಗಳ ಸಂಖ್ಯೆಯನ್ನು ಈ ಮೊದಲು ಮಾತನಾಡಿದವರು ಕೊಟ್ಟರು. ಕೆಲಸವಿಲ್ಲದ ಹಾಗೂ ಪದವೀದರರಲ್ಲದವರು ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಹ ಇದ್ದಾರೆ ಈ ಸಲ ಕೃಷಿ ಕ್ಷೇತ್ರಕ್ಕೆ ೧೨೦ಕೋಟಿ ರೂ. ಗಳನ್ನು ತೊಡಗಿಸುವುದರ ಮೂಲಕ ಮತ್ತೆ ೧೨ ಲಕ್ಷ ಹೆಕ್ಟಾರ್ ಪ್ರದೇಶಕ್ಕೆ ನೀರನ್ನು ಒದಗಿಸುವುದರಿಂದ, ಪ್ರತಿ ಹೆಕ್ಟಾರ್ ಪ್ರದೇಶದಲ್ಲಿ ಒಬ್ಬರಿಗೆ ಉದ್ಯೋಗ ಸಿಗುತ್ತದೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ೬೦ ಲಕ್ಷ ಟನ್ ಎಣ್ಣೆಯನ್ನು ಶುದ್ಧೀಕರಣ ಮಾಡುವ ಕೇಂದ್ರವನ್ನು, ನಾಲ್ಕು ಸಕ್ಕರೆ ಕಾರ್ಖಾನೆಗಳನ್ನು, ೩೦ ಕೋಟಿ ರೂಪಾಯಿಗಳ ಬಂಡವಾಳ ವೆಚ್ಚದಲ್ಲಿ ಪಾಲಿನೋಸಿಕ್

ಫೈಬರ್‌ಗಳನ್ನು ಹಾಗೂ ಬ್ಲೇಡುಗಳನ್ನು ತಯಾರು ಮಾಡುವ ಕೇಂದ್ರವನ್ನು ೪೦ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಧಾರವಾಡದಲ್ಲಿ ಬಟ್ಟೆ ಉತ್ಪಾದನಾ ಯಂತ್ರಗಳ ತಯಾರಿಕೆಗಾಗಿ ಜರ್ಮನ್ ಸಹ ಯೋಗದಸಹಾಯ ಪೋಷಿತ ಸ್ಟಾರ್—ವೋಕ್‌ಮನ್ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸುವುದರಿಂದ ಪದವೀಧರ ನಿರುದ್ಯೋಗಿಗಳಿಗೂ ಸಹ ಸಾಕಷ್ಟು ಪ್ರಮಾಣದಲ್ಲಿ ಉದ್ಯೋಗಗಳು ಸಿಗುತ್ತವೆ. ಆದ್ದರಿಂದ ಇವೆಲ್ಲವೂ ಮಹತ್ವಾಕಾಂಕ್ಷೆಗಳಿಂದ ಕೂಡಿದ ಯೋಜನೆಗಳಲ್ಲವೇ? ಇವು ಯಾವೂವೂ ಸಹ ತಪ್ಪು ಉದ್ದೇಶ ದಿಂದ ಕೂಡಿದ ಯೋಜನೆಗಳಲ್ಲ. ಮಾನ್ಯ ಮಂತ್ರಿಗಳು ನನ್ನ ಒಂದು ನಿರೀಕ್ಷೆಯಲ್ಲಿ ಎಲ್ಲಿಯೂ ಎಡವಿಲ್ಲ. ಈ ಎಲ್ಲ ಯೋಜನೆಗಳಿಂದ ೫ ಲಕ್ಷಕ್ಕೂ ಹೆಚ್ಚಿನ ಜನರಿಗೆ ಉದ್ಯೋಗ ಸಿಗುತ್ತದೆ. ಈ ನೇಗಿಲಭಾಗ್ಯ ಯೋಜನೆಯಲ್ಲಿರುವ ಇನ್ನೊಂದು ವೈಶಿಷ್ಟವೇನೆಂದರೆ, ಈಗಾಗಲೇ ೬ ಲಕ್ಷ ಚಿಲ್ಲರೆ ಜನರು ಈ ಭೂ ಸುಧಾರಣೆ ಮೂಲಕ ಸರ್ಕಾರದಿಂದ ಜಮೀನನ್ನು ಪಡೆದಿದ್ದಾರೆ. ಆದರೆ ಈ ಜನರು ಪಂಪ್‌ಸೆಟ್ಟು ಗಳನ್ನು ಹಾಕಿಸಿಕೊಳ್ಳಲು, ಜಾನುವಾರುಗಳನ್ನು ಕೊಳ್ಳಲು, ಕೊಟ್ಟಿಗೆಗಳನ್ನು ಕಟ್ಟಿಸಲು ಬೇಕಾದಂಥ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಲು ಇನ್ನೂ ಶಕ್ತರಾಗಿಲ್ಲ. ಇವರುಗಳಿಗೆ ಕೆರೆ ಬಾವಿಗಳ ಸೌಕರ್ಯ ಇನ್ನೂ ಸಿಕ್ಕಿಲ್ಲ. ಆದ್ದರಿಂದ ಈ ಜನರನ್ನೂ ಸಹ ಬೇರೆ ಜನರ ಒಂದು ಸಮಾನತೆಗೆ ತರುವು ದಕ್ಕಾಗಿ ಮಾನ್ಯ ಮಂತ್ರಿಗಳು ಈ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಇದೇರೀತಿ ಸಾಗರದೀಪ ಯೋಜನೆ ಬಗ್ಗೆ ಹೇಳಬೇಕೆಂದರೆ, ಈಗ ನಮ್ಮ ರಾಜ್ಯದಲ್ಲಿ ೧,೬೦,೦೦೦ ಟನ್ನುಗಳಷ್ಟು ಮೀನಿನ ಉತ್ಪಾದನೆ ಯಾಗುತ್ತಿದೆ. ವಿದೇಶಿ ವಿನಿಮಯದ ಮೂಲಕ ಹಾಗೂ ಆಂತರಿಕ ಕಬಳಕೆಯ ಮೂಲಕ ಸಮಾರು ೪೦ ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತಿದೆ. ಈ ಸಾಗರ ಸಂಪನ್ಮೂಲಗಳನ್ನು ಹೆಚ್ಚು ಮಾಡುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಈಗ ನಮ್ಮ ರಾಜ್ಯದಲ್ಲಿ ೧೫೦೦ ಯಾಂತ್ರೀ ಕೃತ ದೋಣಿಗಳು, ೩೦೦ ಪರ್ಷಿಯನ್ ದೋಣಿಗಳು ಹಾಗೂ ಸಾಂಪ್ರದಾಯಿಕ ದೋಣಿಗಳು ಇವೆ. ಅನೇಕ ಮೀನುಗಾರಿಕಾ ಕೇಂದ್ರಗಳಿವೆ. ಈ ಕೇಂದ್ರಗಳಿಗೆ ಪ್ರೋತ್ಸಾಹ ಮತ್ತು ಸಹಾಯಧನ ನೀಡು ವುದರ ಮೂಲಕ ಇಲ್ಲಿ ದುಡಿಯುತ್ತಿರುವವರಿಗೆ ಅಗತ್ಯ ಸಹಕಾರ ನೀಡಿದರೆ ಈ ಮೀನಿನ ಉತ್ಪಾದನೆಯನ್ನು ಇನ್ನೂ ಹೆಚ್ಚು ಮಾಡಲು ಸಾಧ್ಯವಿದೆ.

೫–೦೦ ಪಿ.ಎಂ.

ಅದಕ್ಕಾಗಿ ಇದನ್ನು ಪ್ರತ್ಯೇಕವಾಗಿ ಗುರುತಿಸಿದ್ದಾರೆ. ಈ ಸಾಗರ ಅನ್ನುವಂಥಾ ದೀಪ ನಮ್ಮ ಜಿಲ್ಲೆಯಲ್ಲಿರುವ ಜನರಿಗೆ ಬಹಳ ಅನುಚಿತವಾದುದು. ನಮ್ಮಲ್ಲಿ ಬಹಳ ಮಂದಿ ಶ್ರಮಜೀವಿಗಳೇ ಇರುವುದರಿಂದ ಇದನ್ನು ಗುರುತಿಸಿ ಅವರಿಗೆ ಬೇಕಾದಂಥಾ ಸೌಲಭ್ಯಗಳನ್ನು ಒದಗಿಸಿ ಕೊಡಲು ಈ ಒಂದು ಯೋಜನೆಯನ್ನು ಹಾಕಿರುವುದು ಸ್ವಾಗತಾರ್ಹವಾದುದು ಎಂದು ಹೇಳಬಯಸುತ್ತೇನೆ.

ಇನ್ನು ಈ ಸಣ್ಣ ಕಸಬುದಾರರಿಗೆ ತುಂಬ ಅನುಕೂಲ ಮಾಡಿಕೊಡಲು ಒಂದು ಮುನ್ನಡೆ ಎಂಬ ಯೋಜನೆಯನ್ನು ಹಾಕಿರುವುದು ತುಂಬಾ ಸ್ವಾಗತಾರ್ಹವಾದುದು. ಬ್ಯಾಂಕ್‌ನಲ್ಲಿ ಇನ್ನು ಇತರ ಸಹಕಾರ ಸಂಘಗಳಲ್ಲಿ ಸಾಲಗಳನ್ನು ನೀಡುವ ಮೂಲಕ ಕೈಕಸುಬುಗಳನ್ನು ಮಾಡುವಂಥಾ ಸಣ್ಣ ದುಡಿಮೆಗಾರರಿಗೆ ಈ ಯೋಜನೆಯಿಂದ ಬಹಳ ಸಹಾಯವಾಗುತ್ತದೆ. ಇವರಿಗೆ ದೊಡ್ಡವರು ಯಾರೂ ಸಹಾಯ ಮಾಡುವುದಿಲ್ಲ. ಕೇಂದ್ರ ಸರ್ಕಾರದ ಮೂಲಕ ನಮ್ಮ ಸರ್ಕಾರದವರು ಈ ಸಣ್ಣ ದುಡಿಮೆ ದಾರರಿಗೆ ಸಹಾಯ ಮಾಡಲು ಹೊರಟಿರುವುದು ಬಹಳ ಶ್ಲಾಘನೀಯವಾದುದು. ಇದರಿಂದ ಅವರು ಒಂದು ಸಂಘಟಿತರಾಗಿ ತಮ್ಮ ಕಸುಬನ್ನು ಇನ್ನೂ ಹೆಚ್ಚು ಹೆಚ್ಚು ರೂಢಿಸಲು ಅನುಕೂಲವಾಗುತ್ತದೆ. ಈ ಬಗ್ಗೆ ಸಣ್ಣ ಕಸಬುದಾರರೂ ಕೂಡ ಒಂದು ನಿರ್ದಿಷ್ಟವಾದ ಯೋಜನೆ ಹಾಕಿಕೊಂಡು ಇದರ ಸಹಾಯ ವನ್ನು ಪಡೆದುಕೊಂಡಿದ್ದೇ ಆದರೆ ಸರ್ಕಾರದವರು ಹಾಕಿಕೊಂಡಿರತಕ್ಕಂಥಾ ಮುನ್ನಡೆ ಯೋಜನೆಗೆ ಒಂದು ಪ್ರತಿಫಲ ಬಂದಂತಾಗುತ್ತದೆ. ಸಣ್ಣ ಸಣ್ಣ ದುಡಿಮೆಗಾರರ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿರುವುದನ್ನು ನೋಡಿದರೆ ಅವರಿಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಸಾಲದು.

ಇನ್ನು ನಮ್ಮ ರಾಜ್ಯದಲ್ಲಿ ಮಹಿಳೆಯರು ತಮ್ಮ ಕುಟುಂಬ ವರಮಾನವನ್ನು ಹೆಚ್ಚಿಸಲು ಅನು ಕೂಲವಾಗುವಂತೆ ಧನ ಸಹಾಯ ನೀಡುವ 'ಗೃಹ ಕಲ್ಯಾಣ' ಎಂಬ ಒಂದು ಸಮಗ್ರ ಯೋಜನೆಯನ್ನು ತಂದಿರುವುದು ಬಹಳ ಸ್ವಾಗತಾರ್ಹವಾದುದು, ಹೆಣ್ಣು ಮಕ್ಕಳಲ್ಲೂ ಇವೊತ್ತಿನ ದಿವಸ ಬಹಳ ನಿರುದ್ಯೋಗ ಇದೆ ಅನ್ನುವುದು ಎಲ್ಲರಿಗೂ ಗೊತ್ತು. ತಮಗೆ ಹೇಳಬೇಕಾದರೆ ಕೃಷಿಕರಿಗೆ ೧೨ ತಿಂಗಳೂ

ಕೆಲಸ ಸಿಗುವುದಿಲ್ಲ. ಎಲ್ಲರಿಗೂ ಕೆಲಸ ಕೊಡಬೇಕು ಅನ್ನುವ ಉದ್ದೇಶ ಇದ್ದರೂ ಸಹ ಅದನ್ನು ಪೂರ್ಣವಾಗಿ ರೂಪಿಸಲಿಕ್ಕೆ ಆಗುವುದಿಲ್ಲ. ಇದಕ್ಕೆ ಒಂದೇ ಒಂದು ಮಾರ್ಗ ಏನೆಂದರೆ ಈ ನಿರುದ್ಯೋಗ ನಿವಾರಣೆಯಾಗಬೇಕಾದರೆ ಸಣ್ಣ ಕೈಕಸಬುಗಳು ಪ್ರತಿ ಮನೆಯಲ್ಲೂ ಆಗುವಂತೆ ಇರಬೇಕು. ಈ ಸಣ್ಣ ವೃತ್ತಿಯ ಕಡೆ ಎಲ್ಲರೂ ಗಮನಕೊಟ್ಟರೆ ಆವಾಗ ಈ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಬಗೆ ಹರಿಸಬಹುದು. ಯಾರಿಗೇ ಆಗಲಿ ಆತನಿಗೆ ಸಾಮರ್ಥ್ಯ ಇರಲಿ ಇಲ್ಲದೇ ಇರಲಿ ಅಭಾಗ್ಯವಂತನನ್ನು ಸೌಭಾಗ್ಯವಂತನನ್ನಾಗಿ ಮಾಡುವುದಕ್ಕೆ ಮತ್ತು ಅಪೇಕ್ಷಿತ ಫಲ ಬರುವುದಕ್ಕೆ ಈ ಗೃಹ ಕಲ್ಯಾಣ ಎಂಬ ಯೋಜನೆಯಿಂದ ಬರುವುದಕ್ಕೆ ಸಾಧ್ಯ ಉಂಟು. ಇದು ಒಳ್ಳೆಯ ಯೋಜನೆ ಎಂದು ಹೇಳಬಯಸುತ್ತೇನೆ.

ಇನ್ನು ಸರ್ಕಾರವು ವೃತ್ತಿಯಲ್ಲಿ ತೊಡಗಿರುವಾಗ ಮೃತರಾಗುವ ವ್ಯಕ್ತಿಗಳ ಕುಟುಂಬಗಳಿಗೆ ಅಗತ್ಯವಿರುವ ಪರಿಹಾರ ಒದಗಿಸಲು 'ಆಶಾಕಿರಣ' ಎಂಬ ಒಂದು ಯೋಜನೆಯನ್ನು ರೂಪಿಸಿರುವುದು ಬಹಳ ಸ್ವಾಗತಾರ್ಹವಾದುದು ಎಂದು ಹೇಳಬಯಸುತ್ತೇನೆ. ಹರಿಜನ ಮತ್ತು ಗಿರಿಜನರ ಆರ್ಥಿಕ ಅಭಿವೃದ್ಧಿಗಾಗಿ ಈ ಒಂದು ಯೋಜನೆಯನ್ನು ಹಾಕಿಕೊಂಡಿರುವುದು ತುಂಬಾ ಉತ್ತಮವಾದುದು. ತಮಗೆ ಗೊತ್ತಿದೆ ಗ್ರಾಮಾಂತರದಲ್ಲಿರುವ ಹರಿಜನರು-ಗಿರಿಜನರು ಎಲ್ಲಾ ತುಂಬಾ ಶ್ರಮ ಜೀವಿಗಳು ಎನ್ನುವುದು. ಅವರನ್ನು ಶೂದ್ರರಲ್ಲಿ ಅತಿಶೂದ್ರರೆಂದು ಗುರುತಿಸಿರುವುದು ತಮಗೆಲ್ಲಾ ಗೊತ್ತಿದೆ. ಅವರನ್ನು ವಿಶಿಷ್ಟ ರೀತಿಯಲ್ಲಿ ಇಟ್ಟಿದ್ದಾರೆ. ಈಗ ಅಂಥಾವರುಗಳಿಗೆ ನಮ್ಮ ಸರ್ಕಾರವು ಗ್ರಾಮಾಂತರ ಗಳಲ್ಲಿ ಭೂ ಒಡೆತನ ಏನೋ ಕೊಟ್ಟಿದ್ದೀರಿ ಆದರೆ ಅವರಿಗೆ ಅಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಆಗುವುದಿಲ್ಲ. ಏತಕ್ಕೆಂದರೆ ಆಕಾಶವೇ ಹೊದಿಕೆ ನೆಲವೇ ಚಾಪೆ ಈ ರೀತಿ ಅವರು ಜೀವನ ಸಾಗಿಸುವಾಗ ಮನೆ ಕಟ್ಟಲಿಕ್ಕೆ ದುಡ್ಡು ಎಲ್ಲಿ ಬರುತ್ತದೆ ? ಇದಕ್ಕಾಗಿ ತಾವು ಒಂದು ಯೋಜನೆ ಹಾಕಿಕೊಂಡಿರುವುದು ತುಂಬಾ ಶ್ಲಾಘನೀಯವಾದುದೇ ಎಂದು ಹೇಳಬಹುದು. ಭೂಮಿ ಇದ್ದವರಿಗೆ ಸಸಿ ನೆಡುವ ಮೂಲಕ ಸಹಾಯ ಮಾಡುವುದು, ಭೂಮಿ ಇಲ್ಲದವರಿಗೆ ಕ್ಷೀರ ಯೋಜನೆಗೆ ದನ ಎಮ್ಮೆ ತೆಗೆದುಕೊಳ್ಳುವುದು ಸಹಾಯ ಮಾಡುವಂಥಾದ್ದು, ನೇಗಿಲು ಇದ್ದವರಿಗೆ ನೇಗಿಲು ಇಲ್ಲದವರಿಗೆ ಯಾವ್ಯಾವ ರೀತಿ ಸಹಾಯ ಮಾಡ ಬೇಕೋ ಆ ರೀತಿ ಸಹಾಯ ಮಾಡತಕ್ಕಂಥಾದ್ದು ಅಜಾಗರೂಕತೆ ಇದ್ದವರನ್ನು ಜಾಗರೂಕತೆಯನ್ನಾಗಿ ಮಾಡಿಸುವುದು ಅವರವರಿಗೆ ತಕ್ಕಂತೆ ಕಾರ್ಯಕ್ರಮಗಳನ್ನು ಹಾಕಿ ರೂಪಿಸಿರುವುದು ತುಂಬಾ ಅನುಚಿತ ವಾಗಿದೆ. ಇದರಲ್ಲಿ ಇನ್ನೊಂದು ವೈಶಿಷ್ಟ್ಯ ಏನೆಂದರೆ ಇದರಲ್ಲಿ ಕೈಬಳಕೆಯ ಸಾಲ ಬೇರೆ ರೂಪಿಸಿದ್ದೀರಿ. ಇದನ್ನು ಯಾರು ಗುರುತಿಸಿದರೋ ಏನೋ ಗೊತ್ತಿಲ್ಲ. ಇದು ಬಹಳ ಒಳ್ಳೆಯದು ಎಂದು ಹೇಳು ತ್ತೇನೆ. ಏತಕ್ಕೆಂದರೆ ಗ್ರಾಮಾಂತರದಲ್ಲಿರತಕ್ಕಂಥಾ ಹರಿಜನ-ಗಿರಿಜನರಿಗೆ ಈವೊತ್ತಿನ ದಿವಸ ಎಂತಹ ಸಂದರ್ಭ ಬಂದರೂ ೫-೧೦ ರೂಪಾಯಿ ಕೂಡ ಯಾರೂ ಕೊಡುವುದಿಲ್ಲ. ಆ ಮನೆಯಲ್ಲಿ ಒಂದು ಸಾವು ನೋವಾಗಲಿ, ಒಂದು ಮದುವೆಯಾಗಲಿ, ಒಂದು ರೋಗವಾಗಲಿ ಒದಗಿದರೆ ೫-೧೦ ರೂಪಾಯಿ ಕೂಡ ಯಾರೂ ಕೊಡುವುದಿಲ್ಲ ಅನ್ನುವುದು ತಮಗೆಲ್ಲಾ ಗೊತ್ತಿದೆ. ತಮಗೆ ಹೇಳಬೇಕಾದರೆ ಎಲ್ಲರೂ ಬಂಡವಾಳಸ್ಥರಲ್ಲಾ, ಅಲ್ಲದೆ ಈವೊತ್ತಿನ ದಿವಸ ನಮ್ಮ ಸಮಾಜ ಹೇಗಿದೆ ಎಂದರೆ ಎಲ್ಲಾ ಚೆನ್ನಾಗಿದ್ದರೆ ಈತ ನಮ್ಮವನು ತಮ್ಮವನು ಎಂದು ಹೇಳುತ್ತಾರೆ. ಆತ ತೀರ ಬಡವನಾಗಿದ್ದರೆ ಆತ ತನ್ನ ಬಂಧು ವಾಗಿದ್ದರೂ ಕೂಡ ಆತನು ತನ್ನ ಬಂಧುವಲ್ಲ ಎಂದು ಹೇಳುತ್ತಾನೆ. ಆತನಿಗೆ ಸರಿಸಮಾನನಾಗಿದ್ದರೆ ಆಗ ಎಲ್ಲ ಸಂಬಂಧವನ್ನೂ ಹೇಳುತ್ತಾನೆ. ಎಂಥಾ ಶ್ರೀಮಂತರಾದರೂ ತನ್ನ ಬಂಧು ಯಾವನಾದರೂ ಒಬ್ಬ ಬಡತನದಲ್ಲಿದ್ದರೆ ಅವನನ್ನು ಗುರುತಿಸುವುದೇ ಇಲ್ಲ. ಹೀಗಾಗಿ ಈವೊತ್ತಿನ ಬಡವರ ಕಷ್ಟ ಹೇಳತೀರದು. ಅದಕ್ಕೋಸ್ಕರವಾಗಿ ನಮ್ಮ ಸರ್ಕಾರದವರು ಅಂತಹವರನ್ನು ಗುರುತಿಸಿ ಆಯಾಯ ಸಹಕಾರ ಸಂಘಗಳ ಮೂಲಕ ಈ ಬಡತನದ ಅಂಚಿನಲ್ಲಿರುವವರಿಗೆ ಕೈ ಸಾಲಗಳನ್ನು ಕೊಡುವ ಯೋಜನೆ ಯನ್ನು ಹಾಕಿರುವುದು ಬಹಳ ಶ್ಲಾಘನೀಯವಾದ ಕೆಲಸವೆಂದೇ ಹೇಳಬಹುದು. ಅಷ್ಟೇ ಅಲ್ಲ ಇನ್ನೊಂದು ವೈಶಿಷ್ಟ್ಯ ಏನೆಂದರೆ ಆತ ಆ ಸಹಕಾರಿ ಸಂಘದಲ್ಲಿ ಸದಸ್ಯತ್ವನಾಗುವುದಕ್ಕೆ ದುಡ್ಡು ಇಲ್ಲದೇ ಇದ್ದರೂ ಕೂಡ ಅದನ್ನೂ ಸರ್ಕಾರವೇ ಕೊಡಿಸಿ ಆತನಿಗೆ ಸಾಲ ಕೊಡುವ ಹಾಗೆ ಏರ್ಪಾಡು ಮಾಡಿರು ವುದು ಬಹಳ ಶ್ಲಾಘನೀಯವಾದ ಕೆಲಸವೇ ಸರಿ. ನಾವು ಇಂಥಾ ಯೋಜನೆಗಳನ್ನು ಒಂದು ಸದುದ್ದೇಶದಿಂದ ನೋಡಬೇಕೇ ವಿನಾ ಬೇರೆ ದೃಷ್ಟಿಯಲ್ಲಿ ನೋಡಬಾರದು. ಅವನು ಅದನ್ನು ೧೨ ತಿಂಗಳವರೆಗೂ ಕಟ್ಟಬಹುದು. ಹೀಗೆ ಕೈಬಳಕೆಗೆ ತೆಗೆದುಕೊಂಡಂಥಾ ಸಾಲ ಒಂದೇ ಗಂಟಿನಲ್ಲಿ ಕೊಡು ವುದಕ್ಕೆ ಆಗದೇ ಹೋದರೂ ಕೂಡ ೧೦-೧೨ ಕಂತುಗಳಲ್ಲಿ ಕಟ್ಟಬಹುದು. ಹಾಗೂ ಈ ಮಧ್ಯೆ ಅವನಿಗೆ

ಮತ್ತೆ ಕೈಬಳಕೆಗೆ ಸಾಲ ಅಪೇಕ್ಷಿಸಿದಾಗ ಅವನು ಎಷ್ಟು ಕಂತುಗಳನ್ನು ಕಟ್ಟಿರುತ್ತಾನೋ ಅದನ್ನು ವಜಾ ಮಾಡಿಕೊಂಡು ಉಳಿದ ಮೊಬಲಗನ್ನು ಕೊಡುತ್ತಾರೆ. ಆದುದರಿಂದ ನಾನು ಹೇಳುವುದು ಈ ಒಂದು 'ಆಶಾಕಿರಣ' ಎಂಬ ಯೋಜನೆ ಶ್ರೀಸಾಮಾನ್ಯನಿಗೂ ಕೂಡ ಆಶೆಯನ್ನು ಹುಟ್ಟಿಸತಕ್ಕಂಥಾ ಯೋಜನೆಯಾಗಿದೆ ಅನ್ನುವುದನ್ನು ಹೇಳಬಯಸುತ್ತೇನೆ. ಅಲ್ಲದೆ ಈ ಬಡತನವನ್ನು ಹೋಗಲಾಡಿಸುವುದಕ್ಕೆ ಬರೇ ಮಾತನಾಡಿದರೆ ಸಾಲದು, ಮಾತಿನಿಂದ ಕೆಲಸವಾಗುವುದಿಲ್ಲ ಬರೇ ಮಾತಿನಿಂದ ಬಡತನ ಹೋಗಲಾಡಿಸುವುದು ಅಷ್ಟು ಸುಲಭವಲ್ಲ. ಬಹಳ ಶ್ರದ್ಧೆಯಿಂದ ಕರ್ತವ್ಯ ದೃಷ್ಟಿಯಿಂದ, ಒಳ್ಳೆಯ ಸದುದ್ದೇಶವನ್ನಿಟ್ಟುಕೊಂಡು ಯಾರು ಕೆಲಸ ಮಾಡುತ್ತಾರೋ ಅಂಥಾವರು ಸಾಮರ್ಥ್ಯರು, ಅವರು ಅಂಥಾ ಪಾತ್ರವನ್ನು ವಹಿಸಿ ರಾಜ್ಯವನ್ನು ಕಟ್ಟುತ್ತಾರೆ, ನಿಜವಾದ ಒಂದು ಧ್ಯೇಯೋಧೋರಣೆಗಳನ್ನಿಟ್ಟುಕೊಂಡು, ಒಳ್ಳೆಯ ಆಶಾದಾಯಕವಾದ ಭಾವನೆಗಳನ್ನಿಟ್ಟುಕೊಂಡು ಯಾರು ಕಷ್ಟಪಟ್ಟು ಕೆಲಸ ಮಾಡುತ್ತಾರೋ ಅಂಥಾ ಶ್ರಮಜೀವಿಗಳೇ ರಾಜ್ಯ ಕಟ್ಟುವಂಥಾವರು ಉಳಿದವರು ಕಲಾಕ್ಷೇಪ ಮಾಡತಕ್ಕಂಥಾವರು. ಆದರೆ ನಮ್ಮ ರಾಜ್ಯದಲ್ಲಿ ಬಡತನವನ್ನು ಹೋಗಲಾಡಿಸುವುದಕ್ಕೆ ನಾವು ಪಡತಕ್ಕಂಥಾ ಶ್ರಮ ಇನ್ನೂ ಸಾಕಾಗದು. ಈಗ ಸರ್ಕಾರದವರು ಈ ಬಡತನವನ್ನು ಹೋಗಲಾಡಿಸುವುದಕ್ಕೆ ಒಂದು ಘಟನಾಬದ್ಧವಾದಂಥಾ 'ಆಶಾಕಿರಣ' ಅನ್ನುವ ಯೋಜನೆಯನ್ನು ಇಟ್ಟಿರುವುದರಿಂದ ಈ ಕಾರ್ಯವನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ತಮ್ಮ ಮುಂದೆ ಒಂದು ಶ್ಲೋಕವನ್ನು ಹೇಳಬಯಸುತ್ತೇನೆ. ಅದು ಈ ರೀತಿ ಇದೆ.—

"ಉಡುರಾಜಂ ಕಳೆಗುಂದಿ ಪೆರ್ಚದಿಹನೆ, ನಗ್ರೋದ ಬೀಜಂ ಕೆಲಂ,
ಸಿಡಿದುಪೆರ್ಮರನಾಗದೆ, ಎಳೆಗರಂ ಎತ್ತಾಗದೇ, ಮಿಡಿ ಪಣ್ಣಾಗದೇ,
ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ಬಡವಂ ಬಲ್ಲಿದನಾಗನೇ,
ಹರಾಹರಾ ಶ್ರೀ ಚೆನ್ನಸೋಮೇಶ್ವರಾ..."

ಅಂತ ಇದೆ. ಈಗ ಈ ರೀತಿ ಇರುವುದು ನಮ್ಮ ದೌರ್ಭಾಗ್ಯವಲ್ಲವೇ ? ಇದರಿಂದ ನಾವು ನಿರೀಕ್ಷಿತ ಫಲ ಇನ್ನೂ ಸಿಕ್ಕಿಲ್ಲ.

ಇನ್ನು ತೆರಿಗೆ ಬಗ್ಗೆ ಹೇಳಬೇಕಾದರೆ ರಾಜ್ಯ ಸರ್ಕಾರದವರೂ ಮತ್ತು ಕೇಂದ್ರ ಸರ್ಕಾರದವರೂ ನಮ್ಮ ಮೇಲೆ ಹಾಕತಕ್ಕಂಥಾ ತೆರಿಗೆಗಳನ್ನು ನೋಡಿದರೆ ಶೇಕಡ ೨೦ರಷ್ಟು ಪ್ರತ್ಯಕ್ಷ ತೆರಿಗೆ ಇದ್ದರೆ ಇನ್ನು ಉಳಿದ ಶೇಕಡ ೮೦ ರಷ್ಟು ಪರೋಕ್ಷ ತೆರಿಗೆ ಇರುತ್ತದೆ. ಈ ಪರೋಕ್ಷ ತೆರಿಗೆಗಳು ಏನು ಇವೆ ಇದು ಶ್ರೀಸಾಮಾನ್ಯನನ್ನು ಬಾಧಿಸುವಂಥಾ ತೆರಿಗೆಗಳು. ಶ್ರೀ ಸಾಮಾನ್ಯನ ಆದಾಯ ಸರಾಸರಿ ಈವೊತ್ತಿನ ದಿವಸ ೫೦೦ ರೂ. ಇದ್ದರೆ ಅದರಲ್ಲಿ ಈ ಪರೋಕ್ಷ ತೆರಿಗೆಯನ್ನು ಕಳೆದರೆ ೩೫೦ ರೂಪಾಯಿ ಆಗುತ್ತದೆ. ಅದೇ ಒಬ್ಬ ಶ್ರೀಮಂತನ ಸರಾಸರಿ ಆದಾಯ ೧೮೦೦೦ ರೂಪಾಯಿ ಇದ್ದರೆ ಅದು ೧೯೦೦೦ ರೂಪಾಯಿ ಆಗುತ್ತದೆ. ಹೀಗೆ ಶ್ರೀಮಂತನ ಆದಾಯ ವರ್ಷೇ ವರ್ಷೇ ಹೆಚ್ಚುತ್ತಾ ಹೋಗುತ್ತದೆ. ಅದೇ ಬಡವರ ಆದಾಯ ಕಡಿಮೆಯಾಗಿ ಹೋಗುತ್ತಾ ಇದೆ. ಈ ಪರೋಕ್ಷ ತೆರಿಗೆಗಳನ್ನು ಹೆಚ್ಚಾಗಿ ಕೊಡುವುದು ಶ್ರೀಸಾಮಾನ್ಯನೇ. ಆದುದರಿಂದ ಇದನ್ನು ಆದಷ್ಟು ಕಡಿಮೆ ಮಾಡಿದರೆ ಒಳ್ಳೆಯದು, ಎಂದು ತಿಳಿದು ನಮ್ಮ ರಾಜ್ಯದ ಹಣಕಾಸಿನ ಮಂತ್ರಿಗಳು ತಮ್ಮ ಮುಂಗಡ ಪತ್ರದಲ್ಲಿ ಇವನ್ನೆಲ್ಲಾ ಗುರುತಿಸಿ ಶ್ರೀಸಾಮಾನ್ಯನಿಗೆ ಅನುಕೂಲವಾಗುವಂತೆ ಮುಂಗಡ ಪತ್ರವನ್ನು ಮಂಡನೆ ಮಾಡಿದ್ದಾರೆ. ಆದುದರಿಂದ ಅವರನ್ನು ನಾನು ಇದರ ಬಗ್ಗೆ ಗೌರವಿಸುತ್ತೇನೆ. ಇನ್ನೊಂದು ಬಹು ಮುಖ್ಯವಾದ ವಿಚಾರವನ್ನು ಮಾನ್ಯ ಅರ್ಥಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದರ ಬಗ್ಗೆ ಪೂರ್ವಭಾವಿಯಾಗಿಯೇ ಕೇಂದ್ರ ಸರ್ಕಾರಕ್ಕೆ ಬರೆದು ಉತ್ತರ ತರಿಸಿಕೊಂಡರೆ ಒಳ್ಳೆಯದು. ಇದು ಇಡೀ ದೇಶದ ಸಮಸ್ಯೆ. ಆದುದರಿಂದ ಹೇಳುತ್ತೇನೆ, ಅದೇನೆಂದರೆ ನಮ್ಮ ಮುಂಗಡ ಪತ್ರ ಏನು ತೋರಿಸುತ್ತದೆ ಎಂದರೆ ಈ ಮಾರ್ಚಿಯಿಂದ ಬರುವ ಮಾರ್ಚಿಯವರೆಗೆ ಲೆಕ್ಕಪತ್ರ ತೋರಿಸುತ್ತದೆ. ಸಾಮಾನ್ಯವಾಗಿ ಈ ರಾಜ್ಯದಲ್ಲಿ ೫ ತಿಂಗಳು ಮಳೆಗಾಲ ಇರುತ್ತದೆ, ನವೆಂಬರ್‌ನಿಂದ ಮಾರ್ಚ್‌ನವರೆಗೆ ಮಾತ್ರ ನಮಗೆ ಈ ೫ ತಿಂಗಳಿನಲ್ಲಿ ತಾವು ಕೊಟ್ಟಿರುವ ಮೊಬಲಗಳನ್ನು ಖರ್ಚು ಮಾಡುವುದಕ್ಕೆ ಅವಕಾಶಸಿಗತಕ್ಕಂಥಾದ್ದು. ತಾವು ಮಾರ್ಚಿನಲ್ಲಿ ಮುಂಗಡ ಪತ್ರವನ್ನು ಇಟ್ಟರೆ ಅದನ್ನು ಪಾಸ್ ಮಾಡುವುದಕ್ಕೆ ಎರಡು ತಿಂಗಳು ಬೇಕಾಗುತ್ತದೆ. ನಂತರ ಕ್ರಮಬದ್ಧವಾಗಿ ಆ ಮೊಬಲಗನ್ನು ರಿಲೀಸ್ ಮಾಡಬೇಕಾದರೆ ಅದಕ್ಕೆ ಎರಡು ತಿಂಗಳ ಕಾಲ ಓಡಾಟ ಒಟ್ಟು

ಸಾಮಾನ್ಯವಾಗಿ ೭ ತಿಂಗಳ ಕಾಲದಲ್ಲಿ ಏನೂ ಖರ್ಚು ಮಾಡುವುದಕ್ಕಾಗುವುದಿಲ್ಲ. ಒಟ್ಟು ನಮಗೆ ದುಡಿತದ ದಿವಸಗಳು ಸಿಗಬೇಕಾದರೆ ಕೇವಲ ೫ ತಿಂಗಳು ಮಾತ್ರ. ಆದುದರಿಂದ ಈ ಮುಂಗಡ ಪತ್ರದ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚಿಂತನೆ ಮಾಡಿ ಈ ಮುಂಗಡ ಪತ್ರವನ್ನು ಮೇ ನಿಂದ ಮುಂದಿನಮೇ ನವರೆಗೆ ಇಡುವಹಾಗೆ ಮಾಡಿದರೆ ದೇಶದಲ್ಲಿ ದುಡಿಯುವ ಶ್ರಮಜೀವಿಗಳಿಗೆ ತುಂಬಾ ಅನುಕೂಲವಾಗುತ್ತದೆಹಾಗೂ ಅದಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಮೇ ನಿಂದ ಮುಂದಿನ ವರೆಗೆ ಮುಂಗಡ ಪತ್ರದ ಅಂದಾಜು ಇಡಬೇಕು ಎಂದು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ.

ನನ್ನ ಇನ್ನೊಂದು ಸಲಹೆಯನ್ನು ಹೇಳಬಯಸುತ್ತೇನೆ. ಅದನ್ನು ಮಾನ್ಯ ಆರ್ಥಿಕ ಮಂತ್ರಿಗಳು ಕಾರ್ಯಗತ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈವೊತ್ತಿನ ದಿವಸ ಕೃಷಿಕರಿಗೆ ಅದರಲ್ಲೂ ಪಂಪ್‌ಸೆಟ್ ಇಟ್ಟುಕೊಂಡು ವ್ಯವಸಾಯ ಮಾಡುತ್ತಿರುವವರಿಗೆ ಈ ವಿದ್ಯುತ್ ಒದಗಿಸುತ್ತಾ ಇರುವುದು ಒಂದು ಅನಿಶ್ಚಿತ ಪರಿಸ್ಥಿತಿಯಾಗಿ ಉಳಿದಿದೆ. ಈ ಬಗ್ಗೆ ಮಂತ್ರಿಗಳ ಮಟ್ಟದಲ್ಲಿ ಚರ್ಚೆ ಆಗಿದೆ, ರಾಜ್ಯ ಮಟ್ಟದಲ್ಲಿ ಚರ್ಚೆಯಾಗಿದೆ. ಹಾಗಿದ್ದರೂ ಸಹ ಆಗಿಂದಾಗ್ಗೆ ಈ ಕೃಷಿಕರಿಗೆ ತೊಂದರೆಯಾಗಿ ಆಗಿಂದಾಗೆ ವಿದ್ಯುತ್ ನಿಂತು ಹೋಗಿ ಬಹಳ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಇದನ್ನು ಈ ಕೃಷಿಕರಿಗೆ ಅನ್ವಯಿಸಬಾರದು ಎಂದು ಹೇಳುತ್ತೇನೆ. ಏತಕ್ಕೆಂದರೆ ಇದರಿಂದ ಅವರ ಒಂದು ಉತ್ಪನ್ನ ಕುಂಠಿತವಾಗುತ್ತದೆ ಅಲ್ಲದೆ ಆ ಮೂಲಕ ಅವರು ಬೆಳೆಯುವ ಬೆಳೆಗೆ ಸರಿಯಾದಂಥಾ ಬೆಲೆ ಬರುವ ಹಾಗೆ ನಿಯಂತ್ರಿಸುವುದಕ್ಕೂ ಆಗುವುದಿಲ್ಲ. ಇದರಿಂದ ದೇಶದಲ್ಲಿ ಬೆಲೆಗಳು ಏರುವುದಕ್ಕೆ ಸಹಾಯವಾಗುತ್ತದೆ, ಇನ್ನೂ ನಾನಾ ತರಹ ತೊಂದರೆಗಳು ಉದ್ಭವವಾಗುತ್ತವೆ. ಬೆಲೆಗಳನ್ನು ಇಳಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಇದನ್ನು ಒಂದು ಕಾನೂನು ಕಾಯಿದೆ ಮೂಲ ಹತೋಟಿಯಲ್ಲಿಟ್ಟುಕೊಳ್ಳುತ್ತೇವೆಂದರೆ ಅದಕ್ಕೂ ಸಾಧ್ಯವಾಗುವುದಿಲ್ಲ. ನೇರವಾಗಿ ಬೆಲೆಗಳನ್ನು ನಿಯಂತ್ರಿಸುವುದು ಅಷ್ಟು ಸುಲಭವಲ್ಲ, ಪ್ರಜಾಪ್ರಭುತ್ವದಲ್ಲಿ ನೀವು ಏನೇ ಕಾನೂನು ಕಾಯಿದೆಗಳು ತಂದರೂ ಅದು ಅಷ್ಟು ಪರಿಣಾಮವಾಗಿರಲಾರದು. ಈ ಸಂದರ್ಭದಲ್ಲಿ ತಮಗೆ ಒಂದು ನೆನಪು ಮಾಡಿಕೊಡುವುದೇನೆಂದರೆ ಈಗ್ಗೆ ೧೫೦ ವರ್ಷದ ಕೆಳಗೆ ಇಟಲಿಯಲ್ಲಿ ಒಂದೇ ಸಮನೆ ಬೆಲೆಗಳು ಏರಿದಾಗ ಅಲ್ಲಿಯ ಜನ ಬೊಬ್ಬೆ ಹಾಕಿದರು. ಆದರೂ ಅಲ್ಲಿ ಆಡಳಿತದಲ್ಲಿರತಕ್ಕಂಥಾವರು ಬೆಲೆಗಳು ಇಳಿಸಲಿಲ್ಲ. ಅವರಿಗೆ ಹೇಳಿ ಹೇಳಿ ಸಾಕಾಗಿ ಹೋಯಿತು. ಕಟ್ಟಕಡೆಗೆ ಏನು ಮಾಡಿದರು ಎಂದರೆ ಒಂದು ದಿವಸ ಅಲ್ಲಿ ಆಡಳಿತ ನಡೆಸತಕ್ಕಂಥಾ ೮ ಜನರನ್ನೂ ೮ ಕಂಬಗಳನ್ನು ಮಾಡಿ ಎಲ್ಲರನ್ನೂ ನೇಣು ಹಾಕಿಬಿಡುತ್ತೇವೆ ಎಂದು ಘೋಷಣೆ ಮಾಡಿದರೆ. ಹೀಗೆ ಬೊಬ್ಬೆ ಹಾಕಿದ ಮಾರನೆಯ ದಿವಸವೇ ಅವರು ಎಲ್ಲಾ ಬೆಲೆಗಳನ್ನೂ ಇಳಿಸಿದರು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕಾನೂನಿನಲ್ಲಿ ಏನಾದರೂ ದೌರ್ಬಲ್ಯ ಇದೆಯೋ ಅನ್ನುವುದನ್ನು ನೋಡಿದರೆ ಅದು ಹಾಗಿಲ್ಲ, ಸಮಾಜವೇ ಇದಕ್ಕೆ ಮೂಲಕಾರಣ. ಈ ಕಾನೂನಿನಿಂದ ಸಮಾಜ ಬದಲಾವಣೆಯಾಗಬೇಕಾಗಿದೆ. ಕಾನೂನು ಇರತಕ್ಕಂಥಾದ್ದು ಸಮಾಜದ ಬದಲಾವಣೆಗಾಗಿ ಇದೆ. ಅದರ ಕೊರತೆ ಇರುವುದರಿಂದ ಸಮಾಜದಲ್ಲಿ ಈ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿದೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾದ ಕಾನೂನನ್ನು ಮಾಡುವುದರಿಂದ ಅಪೇಕ್ಷಿತ ಪರಿಣಾಮ ಹಾಗೂ ಪ್ರತಿಕ್ರಿಯೆ ಇರುತ್ತದೆ. ಈ ದಿಶೆಯಲ್ಲಿ ಈ ಸರ್ಕಾರವಾಗಲಿ, ಈ ಸದನದ ಸದಸ್ಯರೇ ಆಗಲಿ, ಜನರೇ ಆಗಲಿ, ಈ ಎಲ್ಲಾ ಅಂಗಗಳೂ ಪರಸ್ಪರ ಪೂರಕವಾದ ಪಾತ್ರವನ್ನು ವಹಿಸಿ ಅಪೇಕ್ಷಿತ ಕಾರ್ಯಕ್ರಮಗಳನ್ನು ರೂಪಿಸಿ ಅದನ್ನು ಜಾರಿಗೆ ತಂದರೆ ನಿರೀಕ್ಷಿತ ಪರಿಣಾಮ ಇರುತ್ತದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾರೋ ಏನನ್ನೋ ಕಟ್ಟಿ ಇಟ್ಟಿದ್ದಾರೆ. ಇದನ್ನು ಯಾರು ಇಟ್ಟಿದ್ದಾರೋ ಗೊತ್ತಿಲ್ಲ. ದಯವಿಟ್ಟು ವಾಚ್ ಅಂಡ್ ವಾರ್ಡ್‌ನವರನ್ನು ಕರೆಸಿ ಇದನ್ನು ತೋರಿಸಿ. ಇದರಲ್ಲಿ ಏನೋ ಇಟ್ಟಿಗೆ ತರಹ ಕಟ್ಟಿ ಇಟ್ಟಿರುವ ಹಾಗೆ ಇದೆ.

ಉಪಾಧ್ಯಕ್ಷರು.—ಅದು ಏನು ಎಂಬುದನ್ನು ನಾನು ನೋಡಿಸುತ್ತೇನೆ. ಈಗ ಮಾನ್ಯ ಕೆ. ರಾಮಭಟ್‌ರವರು ಮಾತನಾಡುತ್ತಾರೆ.

ಶ್ರೀ ಕೆ. ರಾಮಭಟ್.—ಮಾನ್ಯ ಉಪಾಧ್ಯಕ್ಷರೇ,...

SRI C. M. ARUMUGHAM.—You have got a lot of security men. How this packet came here ? What are these security men doing ?

MR. DEPUTY SPEAKER.—I will look into it.

SRI B. V. KAKKILAYA.—Something about Gopinatham Tank is written in it. Who has left it ?

MR. DEPUTY SPEAKER.—I will order for preventive steps.

SRI C. M. ARUMUGHAM.—You cannot take it so lightly. How this stone came here ? You send Circulars about MLAs' guests standing here and there. You call the Verandha as the Central Hall as it been covered on all sides To-day stones have come here and tomorrow bombs will be here. You have got hundreds of Security-men here apart from Police. This House must be given all protection. Somebody shouts, somebody throws stones. What is this ? You are the custodian of this House. You must take the responsibility. Shouting is only in Market not here in the Assembly. Everyday shouting is going on. Inside this House we have got the freedom of speech and even if one speaks without sense, it is a different matter. Shouting is going on everyday.

MR. DEPUTY SPEAKER.—I will look into it.

SRI K. BHASKAR NAIDU.—Some MLA might have brought it.

SRI B. V. KAKKILAYA.—Even if MLAs bring it, they should take prior permission of the Chair and then bring it.

SRI C. M. ARUMUGHAM.—Send it for examination to know whether it is a stone or some minerals.

MR. DEPUTY SPEAKER.—It might be some mineral. Some MLA might have brought it. I will get it examined. Now, the hon· member Sri Ram Bhat will speak.

ಶ್ರೀ ಕೆ. ರಾಮಭಟ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅರ್ಥಸಚಿವರ ಆಯವ್ಯಯದ ಮೇಲಿನ ಭಾಷಣ ಕ್ಷಾಮದ ಪರಿಸ್ಥಿತಿಯಿಂದ ಆರಂಭವಾಗಿದೆ. ಇಲ್ಲಿ ಒಂದು ವಿಚಾರವನ್ನು ಅವರು ಉಲ್ಲೇಖ ಮಾಡಿದ್ದಾರೆ. "ಕೆಲವು ಪ್ರದೇಶಗಳಲ್ಲಿ ಪದೇ ಪದೇ ತಲೆದೋರಂತ್ತಿರುವ ಕ್ಷಾಮ ಪರಿಸ್ಥಿತಿ ಸರ್ಕಾರಕ್ಕೆ ತೀವ್ರ ಕಳವಳವನ್ನುಂಟು ಮಾಡಿದೆ. ಈ ಕ್ಷಾಮ ಪರಿಸ್ಥಿತಿಯಿಂದ ಉಂಟಾಗುವ ಸಂಕಷ್ಟಗಳನ್ನು ಸಂಪೂರ್ಣವಾಗಿ ನಿವಾರಿಸಲಾಗದಿದ್ದರೂ, ಅವುಗಳನ್ನು ಆದಷ್ಟು ಕಡಿಮೆ ಮಾಡಲು ಕ್ರಮಗಳನ್ನು ಕೈಕೊಳ್ಳಬೇಕಾಗಿದೆ...ಎಂದು ವಗೈರೆ ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ನಾನು ಕೇಳುತ್ತಿದ್ದೇನೆ. ಈ ಕ್ಷಾಮ ಪರಿಸ್ಥಿತಿ ಯಾವಾಗಿನಿಂದ ಉಂಟು ? ವರ್ಷಂಪ್ರತಿ ಅದಕ್ಕಾಗಿ ಎಷ್ಟೆಷ್ಟು ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡುತ್ತಿದ್ದಾರೆ ? ಇದಕ್ಕೆ ಅವರು ಉತ್ತರ ಕೊಡಬೇಕು. ೧೯೪೭ ನೇ ಇಸವಿಯಲ್ಲಿ ನಮಗೆ ಸ್ವರಾಜ್ಯ ಸಿಕ್ಕಿದ ನಂತರವೂ ಕೂಡ, ೩೫ ವರ್ಷಗಳ ನಂತರ ನಮ್ಮ ರಾಜ್ಯದಲ್ಲಿ ಕೆಲವು ಪ್ರದೇಶಗಳಲ್ಲಿ ಈ ಕ್ಷಾಮ ಪರಿಸ್ಥಿತಿ ಮೇಲಿಂದಮೇಲೆ ಬರುತ್ತಾ ಇದೆಯೆಂದರೆ ಈ ಸರ್ಕಾರದ ಆಡಳಿತ ವೈಫಲ್ಯಕ್ಕೆ ಸಾಕ್ಷಿ ಅಲ್ಲವೇ ? ಈ ರೀತಿ ಏತಕ್ಕೆ ಆಗುತ್ತಿದೆ ? ಇದರ ಪರಿಹಾರಕ್ಕೆ ಒಂದು ಧೀರ್ಘಕಾಲಿಕವಾದ ಯೋಜನೆ ಏನಾದರೂ ಇದೆಯೇ ? ಇಲ್ಲಿ ೨ ವರ್ಷದಿಂದ ಯಾರು ಸರ್ಕಾರವನ್ನು ನಡೆಸುತ್ತಿದ್ದಾರೆ ಅವರ ಮೇಲೆ ನಾನು ಆರೋಪಣೆಯನ್ನು ಮಾಡುತ್ತಾ ಇಲ್ಲ. ಸುಮಾರು ೩೫ ವರ್ಷ

ಗಳಿಂದ ಈ ಒಂದು ಕಾಂಗ್ರೆಸ್ ಪಕ್ಷ ಈ ದೇಶದಲ್ಲಿ ಸರ್ಕಾರ ನಡೆಸುತ್ತಿದೆ. ಆಗಿನಿಂದಲೂ ಮೇಲಿಂದ ಮೇಲೆ ಈ ರೀತಿ ಕ್ಷಾಮದ ಪರಿಸ್ಥಿತಿ ನಿರ್ಮಾಣವಾಗುತ್ತಾ ಹೋದರೆ ಇದಕ್ಕೆ ಏನು ಕಾರಣ ? ಇದಕ್ಕೆ ಏನಾದರೂ ಧೀರ್ಘಕಾಲದ ಯೋಜನೆಯನ್ನು ಹಾಕಿಕೊಂಡಿದ್ದಾರೆಯೇ ? ಇಲ್ಲಿ ಏನು ಹೇಳಿದ್ದಾರೆ ಎಂದರೆ 'ಈ ಕ್ಷಾಮ ಪರಿಸ್ಥಿತಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಆ ಬಗ್ಗೆ ಧೀರ್ಘಾವಧಿ ಪರಿಹಾರ ಕ್ರಮಗಳನ್ನು ಸೂಚಿಸಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಇನ್ನು ೬ ತಿಂಗಳಲ್ಲಿ ಆ ಸಮಿತಿ ಒಂದು ವರದಿಯನ್ನು ಕೊಡುವ ಸಂಭವ ಉಂಟು'' ಎನ್ನತಕ್ಕಂಥ ಮಾತನ್ನು ಹೇಳಿ ಒಂದು ಆಶಯವನ್ನು ಕೊಟ್ಟಿದ್ದಾರೆ. ನಾನು ಈ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಉತ್ತರ ಪ್ರದೇಶದಲ್ಲಿ ಗೂಂಡಾ ಎನ್ನತಕ್ಕಂಥ ಕ್ಷಾಮಪೀಡಿತ ಜಿಲ್ಲೆ ಇದೆ ; ಅಲ್ಲಿ ಒಂದು ಸಂಶೋಧನಾ ಸಂಸ್ಥೆಯವರು ಸರ್ಕಾರದ ನೆರವಿನಿಂದ ಶ್ರಮಪಟ್ಟು ಕೆಲಸಮಾಡಿ ಅದನ್ನು ಒಂದು ಆದರ್ಶ ಜಿಲ್ಲೆಯನ್ನಾಗಿ ನಿರ್ಮಾಣ ಮಾಡಿದ್ದಾರೆ. ಆ ಜಿಲ್ಲೆಯಲ್ಲಿ ಅರ್ಧಾಂಶ ನೆರೆ ಬರುವಂಥಾದ್ದು ಮತ್ತು ಉಳಿದ ಅರ್ಧಾಂಶ ಕ್ಷಾಮ ಬರುವಂಥಾ ಪರಿಸ್ಥಿತಿ ಇತ್ತು. ಆ ಸಂಶೋಧನಾ ಸಂಸ್ಥೆಯವರ ಪ್ರಯತ್ನದ ಫಲವಾಗಿ ಅಲ್ಲಿ ಇಡೀ ಜಿಲ್ಲೆಯು ಆ ಕ್ಷಾಮದ ದವಡೆಯಿಂದ ಪಾರಾಗಿ ಒಂದು ಆದರ್ಶವಾದ ಜಿಲ್ಲೆಯಾಗಿ ಪರಿವರ್ತನೆಯಾಗಿರುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಸರ್ಕಾರ ಅದನ್ನು ಒಪ್ಪಿಕೊಂಡಿದೆ. ಈ ಸರ್ಕಾರದಿಂದ ರಾಜ್ಯದಲ್ಲಿ ಎಲ್ಲಿಯಾದರು ಆ ರೀತಿ ಆದರ್ಶವಾದ ಜಿಲ್ಲೆ ಅಥವಾ ತಾಲ್ಲೂಕನ್ನು ನಿರ್ಮಾಣ ಮಾಡುವುದಕ್ಕೆ ಏನಾದರೂ ಪ್ರಯತ್ನ ನಡೆದಿದೆಯೇ ? ಕಳೆದವರ್ಷ ಈ ಬಗ್ಗೆ ಕಾಮಗಾರಿಗಳಿಗಾಗಿ ೨೬ ಕೋಟಿ ರೂಪಾಯಿಗಳನ್ನು ವ್ಯಯ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇದರ ಬದಲಿಗೆ ಒಂದು ಶಾಶ್ವತವಾದ ಯೋಜನೆಯನ್ನು ಹಾಕಿದ್ದರೆ ಈ ಒಂದು ಕ್ಷಾಮದ ಪರಿಸ್ಥಿತಿಯನ್ನು ತಪ್ಪಿಸಬಹುದಾಗಿತ್ತು. ಆದರೆ ಅದರ ಬಗ್ಗೆ ನಿಜವಾಗಿ ಕೂಡ ಒಂದು ಸೀರಿಯಸ್ಸಾದ ಪ್ರಯತ್ನ ನಡೆಯಲಿಲ್ಲ ಎಂದು ಹೇಳತಕ್ಕಂಥಾದ್ದು ಬಹಳ ದುಃಖಕರವಾದ ಸಂಗತಿ. ಈ ಆಯವ್ಯಯ ಪತ್ರದಲ್ಲಿ ಇನ್ನೊಂದು ಮಾತನ್ನು ಏನು ಹೇಳಿದ್ದಾರೆ ಎಂದರೆ 'ಈ ಹರಿಜನ-ಗಿರಿಜನ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು ೧೯೮೨-೮೩ರ ವಾರ್ಷಿಕ ಯೋಜನೆಯ ಮುಖ್ಯ ಧ್ಯೇಯ' ಎಂದು ಹೇಳಿದ್ದಾರೆ. ಇದನ್ನು ಬಹಳ ಹಿಂದಿನಿಂದ ಹೇಳುತ್ತಿದ್ದಾರೆ. ಈ ಹರಿಜನ ಗಿರಿಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕು ಎಂದು ಹೇಳಿದ್ದನ್ನೇ ಪ್ರತಿವರ್ಷ ಹೇಳುತ್ತಿದ್ದಾರೆ. ಇಷ್ಟರತನಕ ಯಾರೂ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಉಪಾಧ್ಯಕ್ಷರೇ, ೪ ದಿವಸದಿಂದ ಇವರೂ ಅದನ್ನೇ ಹೇಳುವುದಕ್ಕೆ ಶುರು ಮಾಡಿದ್ದಾರೆ ! ಲಾಲ್‌ಬಾಗ್ ಗ್ಲಾಸ್‌ಹೌಸ್‌ನಲ್ಲಿ ಆ ರೀತಿ ಹೇಳಿ ಆಗಲೇ ಶುರು ಮಾಡಿದ್ದಾರೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ನಾವು ಲಾಲ್‌ಬಾಗ್‌ನಲ್ಲಿ ಮೀಟಿಂಗ್ ಮಾಡಿದಕೂಡಲೇ ಇಲ್ಲಿ ಇವರಿಗೆ ತಲೆನೋವು ಶುರುವಾಗಿದೆ ! ಆಳುವ ಪಕ್ಷದ ಗುತ್ತಿಗೆ ಮೇಲೆ ಈ ಹರಿಜನ ಗಿರಿಜನರ ಶ್ರೇಯಸ್ಸು ನಿಂತಿದೆ ಎಂದು ಹೇಳವಂತಾದ್ದು ಸರಿಯಲ್ಲ. ನಾವು ಈ ಸಮ್ಮೇಳನ ಕರೆದದ್ದರ ಬಗ್ಗೆ ಮಾನ್ಯ ಅರ್ಥ ಮಂತ್ರಿಯವರೂ ಪ್ರಸ್ತಾಪ ಮಾಡಿದ್ದಾರೆ.

ಪ್ರಾಮಾಣಿಕವಾಗಿ ನಾವು ಅಸ್ಪೃಶ್ಯತೆ ನಿವಾರಣೆ ಮಾಡಿ ಬಡವರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಸಹಕಾರವನ್ನು ಕೊಡುತ್ತೇವೆ. ಇದಕ್ಕೆ ಮಾನ್ಯ ಅರ್ಥ ಮಂತ್ರಿಗಳು ನಮ್ಮನ್ನು ಹೊಗಳಬೇಕು. ಅದು ಬಿಟ್ಟು ನೀವು ಏತಕ್ಕೆ ಹೊಟ್ಟೆ ಕಿಚ್ಚು ಪಡುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗಲಾದರೂ ತಮಗೆ ನೆನಪು ಬಂತಲ್ಲ ಎಂದು.

ಶ್ರೀ ಪಿ, ರಾಂಭಟ್.— ಹರಿಜನ ಮತ್ತು ಗಿರಿಜನರ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವ ಹಕ್ಕು ನಮಗೂ ಇದೆ. ಅದರಲ್ಲಿ ನಮ್ಮ ಭಾಗವು ಸಹ ಇದೆ. ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹರಿಜನ ಮತ್ತು ಗಿರಿಜನರು ಹಾಗೂ ಹಿಂದುಳಿದ ವರ್ಗದವರ ಅಭಿವೃದ್ಧಿಯನ್ನು ಮಾಡುವುದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಇದರಲ್ಲಿ ಅವರಿಗೆ ಎಷ್ಟು ಪಾಲು ದೊರೆತಿದೆ ? ಈ ನಮ್ಮ ಸಮಾಜದಲ್ಲಿ ದುರ್ಬಲವರ್ಗದವರ ಮೇಲೆ ಯಾವ ರೀತಿಯಲ್ಲಿ ಪರಿಣಾಮ ಉಂಟು ಮಾಡುತ್ತದೆ ಎಂಬುದನ್ನು ನಾವು ನೋಡಬೇಕಾಗಿದೆ. ಪ್ರತಿಯೊಂದು ವರ್ಷದಲ್ಲಿಯೂ ಕೂಡ ಈ ಹರಿಜನ ಮತ್ತು ಗಿರಿಜನರ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿಗಳ

ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಯಾವ ರೀತಿಯಲ್ಲಿ ಅವರ ಜೀವನ ಮಟ್ಟವನ್ನು ಏರಿಸಿದ್ದಾರೆ ಮತ್ತು ಅವರನ್ನು ಯಾವ ರೀತಿಯಲ್ಲಿ ಮೇಲಕ್ಕೆ ತಂದಿದ್ದಾರೆ, ಮತ್ತು ಎಷ್ಟು ಹರಿಜನ ಮತ್ತು ಗಿರಿಜನರು ಬಡತನದ ರೇಖೆಗಿಂತ ಮೇಲಿದ್ದಾರೆ ಎಂಬುದನ್ನು ಹೇಳಬೇಕು. ಇದರ ಪರಿಣಾಮವನ್ನು ವಿಶ್ಲೇಷಣೆ ಮಾಡಬೇಕಾಗಿದೆ. ಏತಕ್ಕೆ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಎಂದರೆ ನಾನು ಸುಮಾರು ಒಂದು ವರ್ಷದ ಹಿಂದೆ ಒಂದು ಚುಕ್ಕೆ ಗುರುತಿನ ಪ್ರಶ್ನೆಯನ್ನು ಕಳುಹಿಸಿಕೊಟ್ಟಿದ್ದೆ. ಅದು ಏನೆಂದರೆ ಹರಿಜನ ಮತ್ತು ಗಿರಿಜನರಿಗೆ ಹಾಗೂ ದುರ್ಬಲ ವರ್ಗದವರಿಗೆ ಎಷ್ಟು ಹಣವನ್ನು ವೆಚ್ಚ ಮಾಡಿದ್ದೀರಿ ? ಎಷ್ಟು ಜನ ಹರಿಜನ ಮತ್ತು ಗಿರಿಜನರು ಮೇಲೆ ಬಂದಿದ್ದಾರೆ ? ಇದಕ್ಕೆ ಇನ್ನೂ ಸರ್ಕಾರದಿಂದ ಉತ್ತರ ದೊರೆಯಲಿಲ್ಲ, ಸರ್ಕಾರದ ಬಳಿ ಅಂಕಿ ಅಂಶಗಳು ಇಲ್ಲವೆಂದು ಕಾಣುತ್ತದೆ. ಇದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲವೆಂದು ನನಗೆ ಬಹಳ ದುಃಖವಾಗುತ್ತದೆ.

ಇನ್ನು ಕೃಷಿ ಬಗ್ಗೆ ಹೇಳುವುದಾದರೆ ನಮ್ಮ ಅರ್ಥ ಸಚಿವರು ಈ ಕೃಷಿಗೆ ಶೇಕಡ ೧೪ ಪರ್ಸೆಂಟ್ ಎಂದು ಕಾಣಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು ೮೫ ಪರ್ಸೆಂಟ್ ಕೃಷಿಕರು ಕೃಷಿಯನ್ನು ಅವಲಂಬಿಸಿರುವಾಗ ಶೇಕಡ ೧೪ ಪರ್ಸೆಂಟ್ ಇಟ್ಟಿರುವುದು ಯಾವ ನ್ಯಾಯ ? ಇವತ್ತು ಬೆಂಗಳೂರು ನಗರದ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಹಳ್ಳಿಗಳಿಂದ ಪಟ್ಟಣಗಳಿಗೆ ಕೃಷಿಕರು ವಲಸೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗ ಶೇಕಡ ೧೪ ಪರ್ಸೆಂಟ್ ಕೃಷಿಕರಿಗೆ ಕೊಟ್ಟರೆ ಅವನು ಯಾವ ರೀತಿಯಲ್ಲಿ ಜೀವನ ಮಾಡಬೇಕೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ನಗರಗಳಲ್ಲಿ ವಾಟರ್ ಸಪ್ಲೈ ದೊರೆಯುತ್ತದೆ. ಇದಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾರೆ, ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾರೆ. ಆದರೆ ಇವರೆಲ್ಲರಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ ನಾನು ವಿರೋಧ ಮಾಡುತ್ತಿಲ್ಲ. ಆದರೆ ಹಳ್ಳಿಗಳಲ್ಲಿ ಜೀವನ ಮಾಡತಕ್ಕದು ಬಹಳ ದುಸ್ತರವಾಗಿದೆ. ಪಟ್ಟಣಗಳಲ್ಲಿ ದಿನಕ್ಕೆ ನಾಲ್ಕು ರೂಪಾಯಿಗಳು ಸಂಪಾದನೆ ಮಾಡಿದರೂ ಸಾಕು ಸುಖ ಜೀವನ ಮಾಡಬಹುದು. ಆದರೆ ಹಳ್ಳಿಗಳಲ್ಲಿ ಜೀವನ ಮಾಡುವುದು ದುಸಾಧ್ಯವಾಗಿದೆ. ಇದನ್ನು ಸರ್ಕಾರ ಪುನರ್‌ಪರಿಶೀಲನೆ ಮಾಡಬೇಕು. ಜನತಾ ಸರ್ಕಾರ ಅಧಿಕಾರದಲ್ಲಿರುವಾಗ ಶೇಕಡ ೩೪ ಪರ್ಸೆಂಟ್ ಹಣವನ್ನು ಈ ಕೃಷಿಗೆ ಏರಿಸಿತ್ತು. ಇಡೀ ಸಮಾಜದ ಸಮಗ್ರ ದೃಷ್ಟಿಯಿಂದ ಯಾವ ರೀತಿ ಹಳ್ಳಿಗಳಿಗೆ ಹಣವನ್ನು ತೊಡಗಿಸಬೇಕು ಯಾವ ರೀತಿ ಹಳ್ಳಿಗಳ ಅಭಿವೃದ್ಧಿ ಮಾಡಬೇಕು ಎನ್ನುವ ಪ್ರಯತ್ನವನ್ನು ಮಾಡಿತ್ತು. ಆದರೆ ನಿಮ್ಮ ಸರ್ಕಾರ ಕೇವಲ ೧೪ ಪರ್ಸೆಂಟ್ ಹಣವನ್ನು ವೆಚ್ಚ ಮಾಡಿದರೆ ಪರಿಣಾಮ ಏನಾಗುತ್ತದೆ ಎಂದರೆ ಹಳ್ಳಿಗಳಿಂದ ಪಟ್ಟಣಗಳಿಗೆ ಜನರು ವಲಸೆ ಬರುತ್ತಾರೆ, ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಳ್ಳಿಗಳಲ್ಲಿ ಜೀವನ ನಡೆಸಲು ಎಷ್ಟು ದುರ್ಬಲವಾಗಿದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಇತ್ತೀಚೆಗೆ ತನಗೆ ಇದ್ದ ಜಮೀನನ್ನು ಕಳೆದುಕೊಂಡು ಉಳಿದ ಅರ್ಧ ಜಮೀನಿನಲ್ಲಿ ಆ ವ್ಯಕ್ತಿ ಸ್ವಲ್ಪ ಗೇರು ಬೀಜವನ್ನು ಬೆಳೆಸಿದ್ದ. ಒಬ್ಬ ಹುಡುಗ ಸ್ವಲ್ಪ ಗೇರು ಬೀಜವನ್ನು ಕದ್ದು ಸಿಕ್ಕಿಬಿದ್ದ. ಅವನನ್ನು ಹಿಡಿದುಕೊಂಡು ಮನೆಗೆ ಬರುವಾಗ ಅವನ ಮನೆಯ ವಿಳಾಸವನ್ನು ಕೇಳಿದಾಗ ಆ ಹುಡುಗ ಒಂದು ಸುಳ್ಳು ವಿಳಾಸವನ್ನು ಕೊಟ್ಟು ಮನೆಗೆ ಹೋಗಿ ನಮ್ಮ ತಂದೆ ತಾಯಿಗಳನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿ ಹೊರಟು ಹೋದ. ಆ ನಂತರ ಅವರೇ ಮಾಲೀಕನ ಮೇಲೆ ಒಂದು ಕಂಪ್ಲೆಂಟ್ ಕೊಟ್ಟಿದ್ದಾರೆ ಅದು ಏನೆಂದರೆ ನಮ್ಮ ಹುಡುಗನನ್ನು ಇವರು ಕಿಡ್‌ನಾಪ್ ಮಾಡಿದ್ದಾರೆ ಎಂದು. ಇಂತಹ ಸುಳ್ಳು ಅಪಾದನೆಗಳನ್ನು ಮಾಡಿದರೆ ಹಳ್ಳಿಗಳಲ್ಲಿ ಯಾವ ರೀತಿಯಲ್ಲಿ ಬದುಕಬೇಕು. ಆ ಮಾಲೀಕನನ್ನು ಪೋಲೀಸ್ ಠಾಣೆಯಲ್ಲಿ ಬಾಯಿಗೆ ಬಂದಂತೆ ಬೈಯುತ್ತಾರೆ, ಈ ರೀತಿ ಇರುವಾಗ ಹಳ್ಳಿಗಳಲ್ಲಿ ಕೃಷಿಯನ್ನು ಏತಕ್ಕೆ ಮಾಡಬೇಕು. ಇದರಿಂದ ಏನಾಗಿದೆಯೆಂದರೆ ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ವಲಸೆ ಬಂದು ಯಾವುದಾದರೂ ಒಂದು ಭಾಗದಲ್ಲಿ ಡಕಾಯಿತಿಯನ್ನು ಮಾಡಿದರೂ ಪರವಾಗಿಲ್ಲ ಜೀವನ ಮಾಡಬಹುದು ಎನ್ನುವ ಒಂದು ದೃಢ ನಿರ್ಧಾರಕ್ಕೆ ಜನರು ಬಂದಿದ್ದಾರೆ. ಈ ರೀತಿ ಹಳ್ಳಿಗಳಿಂದ ಪಟ್ಟಣಕ್ಕೆ ವಲಸೆ ಬರುವುದನ್ನು ತಪ್ಪಿಸಲು ಯಾವ ಒಂದು ಪ್ರಯತ್ನವನ್ನು ನಮ್ಮ ಮಾನ್ಯ ಮಂತ್ರಿಗಳು ಮಾಡಿರುವುದು ನನಗೆ ಕಾಣುತ್ತಿಲ್ಲ.

ಇನ್ನು ಭೂ ಸುಧಾರಣೆಯ ಬಗ್ಗೆ ಹೇಳುವುದಾದರೆ ನಮ್ಮ ಸರ್ಕಾರದವರು ಸಾವಿರಾರು ಮೊಕ್ಕದ್ದಮೆಗಳನ್ನು ಖುಲಾಸು ಮಾಡಿದ್ದಾರೆ ಇದನ್ನು ಸಹ ನಾವು ಮೆಚ್ಚಬಹುದು. ಆದರೆ ಬಹಳ ಶೀಘ್ರದಲ್ಲಿಯೇ ಈ ಮೊಕದ್ದಮೆಗಳನ್ನು ತೀರ್ಮಾನ ಮಾಡಿದ್ದಾರೆ. ಅದನ್ನು ಯಾವ ರೀತಿಯಲ್ಲಿ ತೀರ್ಮಾನ ಮಾಡಿದ್ದಾರೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಭ್ರಷ್ಟಾಚಾರವನ್ನು

ತುಂಬಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಪ್ರಕರಣವನ್ನು ತೀರ್ಮಾನ ಮಾಡಲು ಸುಮಾರು ೨೫-೩೦ ಸಾವಿರ ರೂಪಾಯಿಗಳವರೆವಿಗೂ ವ್ಯವಹಾರ ಮಾಡಿ ಜಡ್ಜ್‌ಮೆಂಟನ್ನು ಮಾರಾಟ ಮಾಡಿದ್ದಾರೆ. ಈ ವಿಷಯವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಆದರೆ ಇದರ ಬಗ್ಗೆ ಮಾನ್ಯ ಸಚಿವರು ಯಾವ ಆತಂಕವನ್ನು ವ್ಯಕ್ತಪಡಿಸಿಲ್ಲ. ಈ ವ್ಯಕ್ತಿಗಳಿಗೆ ಮೊದಲು ಎಷ್ಟು ಆಸ್ತಿಪಾಸ್ತಿ ಇತ್ತು, ಈಗ ಎಷ್ಟು ಆಸ್ತಿಪಾಸ್ತಿ ಇದೆ ಎಂಬುದನ್ನು ನೋಡಿ ತಾವು ತನಿಖೆ ಮಾಡ ಬೇಕೆಂದು ನಾನು ಹೇಳಿದ್ದೆ. ಆದರೆ ಅದನ್ನು ತಾವು ಮಾಡಲಿಲ್ಲ. ಈ ಭೂ ಸುಧಾರಣೆಯು ಕಾನೂನಿ ನಿಂದ ಒಂದಂಶದಷ್ಟು ಅನುಕೂಲವಾದರೆ ಇನ್ನು ೧೦೦ ಭಾಗದಷ್ಟು ಭ್ರಷ್ಟಾಚಾರವನ್ನು ಮಾಡಿದ್ದಾರೆ. ಇಂತಹ ಒಂದು ರೋಗವನ್ನು ಹರಡಿರುವುದರಿಂದ ಇದು ನಿಮ್ಮ ಸರ್ಕಾರಕ್ಕೆ ಹಾನಿಯನ್ನು ತರುವಂತಹ ಪರಿಸ್ಥಿತಿಯಲ್ಲಿ ಇದೆ ಎಂಬುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಭ್ರಷ್ಟಾಚಾರವನ್ನು ನಿವಾರಣೆ ಮಾಡಲು ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಭೂ ಸುಧಾರಣೆಯ ಕಾನೂನಿನಿಂದ ಉಳುವವನಿಗೆ ಭೂಮಿಯನ್ನು ಕೊಟ್ಟಿದ್ದೀರಿ. ಆದರೆ ವ್ಯಾಪಕ ವಾದ ಒಂದು ಭ್ರಷ್ಟಾಚಾರ ಇಲ್ಲಿ ನಡೆಯುತ್ತಿದೆ. ಇದಕ್ಕೆ ಒಂದು ಸಮಾಧಾನ ಕೊಡಬೇಕು.

ಇನ್ನು ವಿದ್ಯುದೀಕರಣದ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ನಮಗೆ ಬೇಕಾದಂತಹ ವಿದ್ಯುತ್ತನ್ನು ಸರಿಯಾಗಿ ಕೊಟ್ಟರೆ ಸಾಕು. ಇದನ್ನು ವಿಸ್ತರಿಸುವ ಯೋಜನೆ ಮಾಡಬೇಕಾಗಿಲ್ಲ. ನಮ್ಮ ಮಾನ್ಯ ವಿದ್ಯುತ್ ಸಚಿವರ ಜೊತೆಯಲ್ಲಿ ಮಾತನಾಡಿದಾಗ ಅವರು ಹೇಳಿದರು ೧೯೮೪-೮೫ನೇ ಸಾಲಿನಲ್ಲಿ ವಿದ್ಯುತ್ ಸರಿಯಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಇದು ಖಂಡಿತವಾಗಿ ನಮ್ಮ ರಾಜ್ಯಕ್ಕೆ ನಾಚಿಕೆಗೇಡಿನ ವಿಷಯವಾಗಿದೆ. ನಮ್ಮ ರಾಜ್ಯದಲ್ಲಿ ಶರಾವತಿ ಯೋಜನೆಗೆ ಕಾರ್ಯಗತ ವಾದಾಗ ಇಡೀ ನಮ್ಮ ರಾಜ್ಯಕ್ಕೆ ಬೇಕಾದಂತಹ ವಿದ್ಯುತ್‌ನ್ನು ಒದಗಿಸಿಕೊಂಡು ಬೇಕಾದರೆ ನಾವು ಬೇರೆ ರಾಜ್ಯಗಳಿಗೂ ವಿದ್ಯುತ್‌ನ್ನು ಒದಗಿಸಿಕೊಡಬಹುದು ಎನ್ನುವ ಒಂದು ಪರಿಸ್ಥಿತಿ ಇತ್ತು, ಆದರೆ ಅದನ್ನು ಬಿಟ್ಟು ನೆರೆ ರಾಜ್ಯಗಳಾದ ಆಂದ್ರಪ್ರದೇಶ, ಕೇರಳ, ತಮಿಳುನಾಡು ಪ್ರದೇಶಗಳಲ್ಲಿ ವಿದ್ಯುತ್‌ನ್ನು ಭಿಕ್ಷೆ ಬೇಡುತ್ತಿದ್ದೇವೆ. ಈ ರೀತಿ ವಿದ್ಯುತ್ ಕೊರತೆ ನಮ್ಮ ರಾಜ್ಯದಲ್ಲಿ ಏತಕ್ಕೆ ಆಗಿದೆ ಎಂಬುದಕ್ಕೆ ಒಂದು ಸಮಾಧಾನ ಕೊಡಬೇಕು. ಹಾಗೂ ಇದರ ಬಗ್ಗೆ ಒಂದು ತನಿಖೆಯನ್ನು ನಡೆಸಿ ವೈಟ್ ಪೇಪರನ್ನು ಹೊರಡಿಸಬೇಕು. ಇದರ ಬಗ್ಗೆ ಒಂದು ನಿಷ್ಪಕ್ಷಪಾತವಾದ ವಿಚಾರಣೆ ನಡೆಸಿ ರಿಪೋರ್ಟ್‌ನ್ನು ಕೊಡಬೇಕು. ಬೇಕಾದರೆ ಶಾಸಕರನ್ನು ಕೂಡ ಇದರಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಿ. ಸರ್ಕಾರ ಇದರ ಬಗ್ಗೆ ತನಿಖೆಯನ್ನು ನಡೆಸದೆ ಹೋದರೆ ಮುಂದೆ ನಾವು ವಿದ್ಯುತ್ ಕೊರತೆಯನ್ನು ಕಾಣಬೇಕಾಗುತ್ತದೆ ಇಲ್ಲಿ ಮಿಸ್ ಮೆನೇಜ್‌ಮೆಂಟ್ ನಡೆಯುತ್ತಿದೆ. ನಮ್ಮ ಹಳ್ಳಿಗಾಡು ಪ್ರದೇಶ ಗಳಲ್ಲಿ ಪ್ರತಿ ದಿನ ೬ ಗಂಟೆಗಳ ಕಾಲ ವಿದ್ಯುತ್ ಇಲ್ಲದೆ ಹೋದರೆ ಕೃಷಿಕನು ಏನು ಮಾಡಬೇಕು? ಅವನು ಯಾವ ರೀತಿಯಲ್ಲಿ ಉತ್ಪಾದನೆ ಮಾಡಬೇಕು? ಇದನ್ನೆಲ್ಲಾ ತಾವು ಯೋಚನೆ ಮಾಡದೆ ಈ ವರ್ಷ ಉತ್ಪಾದನೆ ಜಾಸ್ತಿಯಾಗುತ್ತದೆ ಎಂಬುದನ್ನು ಯಾವ ಆಧಾರದ ಮೇಲೆ ಹೇಳುತ್ತೀರಿ. ಈ ವರ್ಷ ಮಳೆಯಿಂದ ಪರಿಸ್ಥಿತಿ ಸುಧಾರಿಸುವಂತೆ ಇಲ್ಲ.

5-30 P.M.

ಯಾವರೀತಿ ಮಾಡುತ್ತಾರೆಂದು ನಾವು ಕೇಳುವುದು, ಯಾವ ಆಸೆಯನ್ನಿಟ್ಟುಕೊಂಡು ನಾವು ಕೇಳುವುದು. ಈ ರೀತಿ ಉತ್ಪಾದನೆ ಕುಂಠಿತವಾಗಿ, ನಮ್ಮ ರಾಜ್ಯ ಹಿಂದೆ ಬೀಳುತ್ತದೆ ಎಂದು ತಿಳಿಯಲು ನಾವು ಬಹಳ ದೂರ ಹೋಗಬೇಕಾಗಿಲ್ಲ. ಹಿರಿಯ ಸದಸ್ಯರಾದಂಥ ಮಾನ್ಯ ರಾಮೇಗೌಡರು ಡಾಕ್ಟರು ಗಳ ಬಗ್ಗೆ ಹೇಳಿದ್ದಾರೆ. ಅಲ್ಲಿ ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಏಕೆಂದರೆ, ಡಾಕ್ಟರುಗಳು ಸಂಬಳಕ್ಕೆ ಪ್ಯಾರಿಟಿ ತರಬೇಕು ಎಂದು, ಅದರ ಬಗ್ಗೆ ಸರ್ಕಾರ ವಿಚಾರಮಾಡಿಲ್ಲ ಇವತ್ತಿನ ದಿವಸ ಡಾಕ್ಟರುಗಳು ಸಿಕ್ಕುವುದಿಲ್ಲ. ಡೈರಿ ಹೆಚ್ಚು ಮಾಡಬೇಕು ಅಂದರೆ ಜಾನುವಾರುಗಳು ಸತ್ತುಹೋಗತಕ್ಕ ಸಂದರ್ಭ ಇದೆ. ನಮ್ಮ ಡಾಕ್ಟರುಗಳು ನಮ್ಮ ರಾಜ್ಯದಲ್ಲಿ ವಿದ್ಯೆಯನ್ನು ಕಲಿಯುತ್ತಾರೆ, ಬೇರೆ ದೇಶಕ್ಕೆ ಹೋಗುತ್ತಾರೆ, ಅವರು ಬೇರೆ ದೇಶಕ್ಕೆ ಹೋಗದೇ ಇದ್ದರೆ ಸಾಕು, ನಮ್ಮ ರಾಜ್ಯದಲ್ಲೇ ಉಳಿದು ಕೊಳ್ಳುತ್ತಾರೆ. ಇವತ್ತು ಪೋಲೀಸ್ ಇಲಾಖೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಪೋಲೀಸ್ ಇಲಾಖೆ ಯಲ್ಲಿ ಎಲ್ಲರಿಗೂ ಮನೆಗಳನ್ನು ಕೊಡಬೇಕು ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಎಲ್ಲರಿಗೂ ಮನೆಗಳನ್ನು ಕೊಡಬೇಕು. ಎಲ್ಲರಿಗೂ ಮನೆಗಳನ್ನು ಕೊಟ್ಟರೆ ಮಾತ್ರ ಸಾಲದು, ಅವರು

ಮೊರೇಲ್ ಉಳಿಸಿಕೊಳ್ಳಬೇಕು ಎನ್ನುವಂಥಾದ್ದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಅವರಿಗೆ ಹೊಟ್ಟೆಗೆ ಅನ್ನ ಕೊಟ್ಟು ಬಟ್ಟೆ ಕೊಟ್ಟರೆ ಸಾಕಾಗುವುದಿಲ್ಲ. ಇಡೀ ಪೋಲೀಸರು ನೈತಿಕ ಮಟ್ಟವನ್ನು ಉಳಿಸಿಕೊಳ್ಳದೆ ನೀವು ಏನೇನು ಕೊಟ್ಟರೂ ಕೂಡ ಈ ದೇಶದಲ್ಲಿ ಯಾವ ಪೋಲೀಸ್ ಪದ್ಧತಿ ಇದೆ ಅದು ಸಂಪೂರ್ಣವಾಗಿ ನಾಶವಾಗುತ್ತದೆ. ನಾನು ಒಂದು ಉದಾಹರಣೆ ಕೊಡುತ್ತೇನೆ, ಅದು ಎಲ್ಲರಿಗೂ ಗೊತ್ತಿದೆ. ಅದನ್ನು ಹೇಳುತ್ತೇನೆ. ಇಲ್ಲಿ ಒಬ್ಬ ಮಂತ್ರಿ ಮೇಲೆ ಕೇಸ್ ಹಾಕಿದರು, ಅದರ ಪರಿಣಾಮ ಏನಾಯಿತು ಅಂದರೆ, ನಾನು ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯಲ್ಲಿ ಉತ್ತರ ಭಾರತದಲ್ಲಿ ಪಾಟ್ನಾ ಅಸ್ಸಾಂನಲ್ಲಿ ತಿರುಗಾಡಿದಾಗ ಅನೇಕರು ಅದರ ಬಗ್ಗೆ ಹೇಳಿದರು. ''ನೋಡಿ, ನಿಮ್ಮ ರಾಜ್ಯದಲ್ಲಿ ಯಾರಡಿ ಅಡ್ಮಿನಿಸ್ಟ್ರೇಷನ್‌ನಲ್ಲಿ ಪ್ರವೇಶ ಮಾಡುವುದಿಲ್ಲ, ಒಬ್ಬ ಮಂತ್ರಿ ಮೇಲೆ ಕೇಸ್ ಮಾಡುವಷ್ಟು ಇಂಡಿಪೆಂಡೆನ್ಸ್ ನಿಮ್ಮ ರಾಜ್ಯದಲ್ಲಿ ಇತ್ತು'' ಅಂದರೆ ಶಹಭಾಸ್ ಎಂದು ಹೇಳಿದರು. ನಾನೂ ಕೂಡ ಬಹಳ ಅಭಿಮಾನ ಪಟ್ಟೆ ನನಗೂ ಬಹಳ ಸಂತೋಷವಾಯಿತು. ನಾವು ವಿರೋಧಪಕ್ಷದಲ್ಲಿರಬಹುದು, ಆದರೆ ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ರೀತಿಯಲ್ಲಿ ಪ್ರವೇಶ ಮಾಡುವುದಿಲ್ಲ ಎನ್ನುವ ರೀತಿಯಲ್ಲಿ ಪೋಲೀಸ್ ಅಧಿಕಾರಿಗಳು ಕೆಲಸಮಾಡುತ್ತಾರೆ ಅಂದರೆ ನಾವೆಲ್ಲರೂ ಅಭಿಮಾನಪಟ್ಟುಕೊಳ್ಳಬೇಕು. ಅಲ್ಲಿ ಅಧಿಕಾರಿಗಳೂ ಹೇಳಿದರು, ಎಂ.ಎಲ್.ಎ.ಗಳು ಹೇಳಿದರು, ನಿಮ್ಮ ಸರ್ಕಾರ ಕೂಡ ಇಂಟರ್‌ಫಿಯರ್ ಆಗಲಿಲ್ಲ ನೋಡಿ ಒಳ್ಳೆಯ ಆದರ್ಶ ಸ್ಥಾಪನೆ ಮಾಡಿದ್ದಾರೆಂದು ಹೇಳಿದರು. ನಾನು ಪ್ರವಾಸ ಮುಗಿಸಿ ಇಲ್ಲಿಗೆ ಬರಬೇಕಾದರೆ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದರು, ರಜೆಯಲ್ಲಿ ಕಳಿಸಿದರು. ಹೀಗೆ ಮಾಡಿದರೆ ಪೋಲೀಸ್ ಅಧಿಕಾರಿಗಳಲ್ಲಿ ಸ್ಥೈರ್ಯ ಹೇಗೆ ಉಳಿಯಬೇಕು, ಎಂದು ಯೋಚನೆಮಾಡಿ, ಅವರು ಹೇಗೆ ದಲಸಮಾಡಬೇಕು ಎಂದು ಯೋಚನೆಮಾಡಿ. ಪೋಲೀಸ್ ಅಧಿಕಾರಿಗಳು ನಿರ್ಭಯವಾಗಿ ಯಾವುದೇ ಒಂದು ಒತ್ತಡಕ್ಕೆ ಬಲಿಯಾಗದೆ ಅವರು ಕೆಲಸಮಾಡಬೇಕು ಅಂದರೆ, ಈ ರೀತಿ ಇಲ್ಲಿ ಕೆಲಸಮಾಡುವಾವಗ ಪ್ರಾಮಾಣಿಕ, ದಕ್ಷ ಅಧಿಕಾರಿಗಳನ್ನು ತೆಗೆದು ರಜೆಯಲ್ಲಿ ಹೋಗು, ಮನೆಗೆ ಹೋಗು ಎಂದು ಹೇಳುವ, ಉತ್ತರ ಪ್ರದೇಶಕ್ಕೆ ಟ್ರಾನ್ಸ್‌ಫರ್ ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡರೆ, ಅವರಿಗೆ ಮನೆ ಕೊಡಿ, ಸಂಬಳ ಕೊಡಿ, ಆದರೆ ಪೋಲೀಸ್ ಇಲಾಖೆ ಮೂಲವನ್ನೇ, ಚಿಗುರನ್ನೇ ಕಿತ್ತುಹಾಕಿ ದೇಶದಲ್ಲಿ ಸ್ಮಶಾನ ಮಾತ್ರ ನಿರ್ಮಾಣಮಾಡುತ್ತೀರೇ ಹೊರತು ಖಂಡಿತವಾಗಿಯೂ ಒಳ್ಳೆಯದನ್ನು ಮಾಡುತ್ತಾರೆ ಎನ್ನುವುದು ಕನಸಾಗುತ್ತದೆ. ಈ ವಿಷಯದಲ್ಲಿ ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡಬೇಕು. ಬಡ್ಜೆಟ್‌ನಲ್ಲಿ ಕೆಲವು ಲಕ್ಷ ರೂಪಾಯಿಗಳನ್ನು ನಾವು ಇಡುತ್ತೇವೆ ಅಂದರೆ ಅದು ಅಂಕಿಅಂಶಗಳ ಪ್ರಶ್ನೆಯಲ್ಲ. ಇಲ್ಲಿ ಇರುವಂಥಾದ್ದು ನೈತಿಕತೆಯ ಪ್ರಶ್ನೆ. ನೈತಿಕತೆಯನ್ನು ಹೊಡೆದು ಹಾಕಿ ಎಷ್ಟು ದುಡ್ಡು ಕೊಟ್ಟರೂ ಕೂಡ ಪ್ರಯೋಜನವಾಗುವುದಿಲ್ಲ ಎಂದು ಹೇಳುತ್ತೇನೆ. ಇನ್ನೊಂದು ಪ್ರಶ್ನೆ ಯಾವುದು ಎಂದರೆ ಕಾಂಗ್ರೆಸ್ ಪಕ್ಷದ ಒಳ ಜಗಳ. ಇದು ಒಂದು ಲಾ ಅಂಡ್ ಆರ್ಡರ್ ಪ್ರಾಬ್ಲಮ್ಮಾಗಿ ಭೀಕರ ಸ್ವರೂಪವನ್ನು ಪಡೆಯುತ್ತಾ ಇದೆ. ನಮ್ಮ ಅರ್ಥ ಮಂತ್ರಿಗಳು ಹೇಳಬಹುದು, ಇದು ನಮ್ಮ ಪಾರ್ಟಿಯೊಳಗಿನ ಪ್ರಶ್ನೆ ಎಂದು. ಕೋಣೆ ಒಳಗೆ ಏನಾದರೂ ಜಗಳ ಮಾಡಿಕೊಳ್ಳಿ, ಏನಾದರೂ ಮಾಡಿಕೊಳ್ಳಿ, ಆದರೆ ಬೀದಿಗಿಳಿದು ಜಗಳ ಮಾಡಿದರೆ, ನೀವು ಎಂಥ ಒಂದು ಕೆಟ್ಟ ಪರಂಪರೆ ಹಾಕುತ್ತಾ ಇದ್ದೀರಿ ಎಂದು ಹೇಳುವುದಕ್ಕೆ ನಾನು ಕೆಲವು ನಿದರ್ಶನಗಳನ್ನು ಕೊಡುತ್ತೇನೆ. ನಾಳೇ ಪೋಲೀಸರಿಗೆ ಸಮಸ್ಯೆಯಾಗುತ್ತದೆ. ನಮಗೆ ಗೊತ್ತು ಎಲ್ಲರಿಗೂ ಗೊತ್ತು, ಕಾಂಗ್ರೆಸ್‌ನಲ್ಲಿ ಎರಡು ಪಾರ್ಟಿ ಇದೆಯೆಂದು ಈ ಎರಡು ಪಾರ್ಟಿಯ ಜಗಳದಲ್ಲಿ ನಮ್ಮ ಈ ಸಭೆಯ ಸದಸ್ಯರಾದ ಮಾನ್ಯ ಸಾಲಪ್ಪನವರಿಗೆ ಹೊಡೆದರು. ಅದನ್ನು ಏಕೆ ಪ್ರಸ್ತಾಪ ಮಾಡುತ್ತೀರಿ ಎಂದು ಕೇಳಬಹುದು. ನಮ್ಮ ಈ ಸಭೆಯ ಸದಸ್ಯರಾದಂಥ ಮಾನ್ಯ ಸಾಲಪ್ಪನವರಿಗೆ ಪೆಟ್ಟು ಬಿತ್ತು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಕಾಂಗ್ರೆಸ್‌ನಲ್ಲಿ ಎರಡು ಪಾರ್ಟಿ ಇದೆ ಎಂದು ನಿಮಗೆ ಯಾರು ಹೇಳಿದರು.

ಶ್ರೀ ಕೆ. ರಾಮಭಟ್.—ನಾನು ಹೇಳುತ್ತೇನೆ, ಒಬ್ಬರು ಹೊಡೆಯುವವರು, ಒಬ್ಬರು ತಿನ್ನುವವರು.

ಶ್ರೀ ಜೆ. ಹೆಚ್. ಪಟೇಲ್.—ಇನ್ನೂ ಜಾಸ್ತಿ ಇದೆಯೋ ?

ಶ್ರೀ ಕೆ. ರಾಮಭಟ್.—ನಾನು ಕರೆಕ್ಟ್ ಮಾಡಿಕೊಳ್ಳುತ್ತೇನೆ, ತಪ್ಪಿದ್ದರೆ ಹೇಳಿ ನಾನು ತಿದ್ದಿಕೊಳ್ಳುತ್ತೇನೆ.

ಶ್ರೀ ಕೆ. ಭಾಸ್ಕರ ನಾಯ್ಡು.—ನಮ್ಮ ಪಕ್ಷದ ವಿಷಯ ನಿಮಗೆ ಏಕೆ, ನೀವು ಬರುತ್ತೀರಾ ?

ಶ್ರೀ ಕೆ. ರಾಮಭಟ್.—ಇದು ಲಾ ಅಂಡ್ ಆರ್ಡರ್ ಪ್ರಾಬ್ಲಂ. You are creating law and order problem.

SRI K. BHASKAR NAIDU.—Please say that all of us are creating law and order problem you are also creating law and order problem.

SRI K. RAMBHAT.—How ?

SRI K. BHASKAR NAIDU.—Should I say that ?

ಶ್ರೀ ಕೆ. ರಾಮಭಟ್.—ಈಗ ಎಲ್ಲಿ ಸಮಸ್ಯೆ ಬರುತ್ತದೆ ಎಂದರೆ ಯಾವಾಗಲೂ ಆಳುವ ಪಕ್ಷದ ಎರಡು ಜನ ಹೊಡೆದುಕೊಂಡರೆ ಪೋಲೀಸರಿಗೆ ಧರ್ಮಸಂಕಟವುಂಟಾಗಿ ಕ್ಷಿಪ್ರವಾಗಿ ಅವರು ಕಾರ್ಯಾಚರಣೆ ಕೈಗೊಳ್ಳಲಿಕ್ಕೆ ಹೇಸುತ್ತಾರೆ.

ಶ್ರೀ ಜಿ.ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೆ, ಈಗ ಬಿ.ಜೆ.ಪಿ. ಪಕ್ಷದವರು ಹಣ ಕಲೆಕ್ಟ್ ಮಾಡಿ ಎಲ್ಲಿ ಬೇಕಾದಲ್ಲಿ ಇವತ್ತು ಪಕ್ಷ ವಿರೋಧಿಯಾಗಿ, ಜನ ವಿರೋಧಿಯಾಗಿ ವಿಧ್ವಂಸಕ ಶಕ್ತಿಯನ್ನು ನಿರ್ಮಾಣ ಮಾಡುವಂಥಾದ್ದು ತಮ್ಮ ಪಕ್ಷದ ಮುಖಾಂತರವಾಗಿ ನಡೆದಿದೆ. ತಾವು ಸ್ಪಷ್ಟವಾಗಿ ಆತ್ಮವಂಚನೆ ಮಾಡುವಂಥ ಮಾತನ್ನು ಆಡುತ್ತಾ ಇದ್ದೀರಿ, ಇವತ್ತು ಕಾಂಗ್ರೆಸ್ ಪಕ್ಷದಲ್ಲಿ ದೇಶದಲ್ಲಿ ರಕ್ಷಣೆ ಮಾಡುವಂಥಾದ್ದು, ಸಮಾಜದ ದುರ್ಬಲ ವರ್ಗದ ಜನರಿಗೆ ರಕ್ಷಣೆ ಕೊಡುವಂಥ ಕಾರ್ಯವನ್ನು ಮಾಡುತ್ತಾ ಇದ್ದಾರೆ. ಅದನ್ನು ಕೆಡಿಸುವಂಥ ಕೆಲಸ ನಡೆದಿದ್ದರೆ ನಿಮ್ಮ ಪಕ್ಷದವರೇ ಮಾಡುತ್ತಾ ಇದ್ದಾರೆ. ಇದನ್ನು ನೀವು ಸ್ಪಷ್ಟವಾಗಿ ಹೇಳಿರಿ.

ಶ್ರೀ ಕೆ. ರಾಮಭಟ್.—ಸ್ವಾಮಿ, ಅಧ್ಯಕ್ಷರೆ, ಅವರು ಯಾವ ದೃಷ್ಟಿಯಿಂದ ನೋಡಿದ್ದಾರೋ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಈ ಪಕ್ಷದವರು ಇಂತಹ ಕೆಲಸ ಮಾಡುತ್ತಿದ್ದಾರೆ, ಆ ಪಕ್ಷದವರು ಅಂತಹ ಕೆಲಸ ಮಾಡುತ್ತಾ ಇದ್ದಾರೆ ಎಂದು ಪ್ರಾರಂಭ ಮಾಡಿಬಿಟ್ಟರೆ, ಪ್ರಾರಂಭ ಮಾಡುವುದಕ್ಕೆ ಅಡ್ಡಿಯಿಲ್ಲ, ಸದಸ್ಯರಿಗೆ ಸ್ವಾತಂತ್ರ್ಯ ಇದೆ, ಮಾತನಾಡುತ್ತಾರೆ. ಈಗ ಅವರು ಕಾಂಗ್ರೆಸ್ ಪಕ್ಷದ ವಿಚಾರ ಪ್ರಾರಂಭ ಮಾಡಲಿಕ್ಕೆ ಹೋದರೆ, ಮತ್ತೊಬ್ಬರು ಬಿ.ಜೆ.ಪಿ. ಪಕ್ಷದವರು ಲಾ ಅಂಡ್ ಆರ್ಡರ್‌ಗೆ ತೊಂದರೆ ಮಾಡುತ್ತಾ ಇದ್ದಾರೆ ಎಂದು ಹೇಳುತ್ತಾರೆ. ಮತ್ತೊಬ್ಬರು ಸಿ.ಪಿ.ಐ. ವಿಚಾರ ಹೇಳುತ್ತಾರೆ, ಮತ್ತೊಬ್ಬರು ಜನತಾ ಪಾರ್ಟಿ ವಿಚಾರ ಹೇಳುತ್ತಾರೆ. ಇದೆಲ್ಲಾ ಬಡ್ಜೆಟ್‌ನ ಜನರಲ್ ಡಿಸ್ಕಷನ್‌ಗೆ ಬರುತ್ತದೆಯೇ, ಯಾವ ಯಾವ ಪಕ್ಷದವರು ಯಾವ ರೀತಿಯಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಂ ಕ್ರಿಯೇಟ್ ಮಾಡುತ್ತಾರೆಂದು ಚರ್ಚೆಗೆ ಬಂದರೆ ಅದಕ್ಕೆ ಕೊನೆ ಇರಲಿಕ್ಕಿಲ್ಲ. ಇಲ್ಲಿ ಈ ಪಕ್ಷದ ಕಾರ್ಯಕರ್ತರ ವಿಚಾರವನ್ನು ಅಂದರೆ ಒಂದು ಪಕ್ಷದ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟರೆ ಅದೇರೀತಿ ಮತ್ತೊಬ್ಬರಿಗೆ ಅವಕಾಶ ಕೊಡಬೇಕಾಗುತ್ತದೆ. ಆದುದರಿಂದ ನನಗನ್ನಿಸುತ್ತದೆ. ಇದು ಅನಾವಶ್ಯಕ ಎಂದು. ಅದನ್ನು ಈಗಲೇ ಮಾನ್ಯ ಸಭಾಧ್ಯಕ್ಷರು ಮೊಟಕುಗೊಳಿಸುವುದು ಒಳ್ಳೆಯದು. It will create lot of bad blood among the parties concerned.

MR. DEPUTY SPEAKER.—Please speak on the Budget.

ಶ್ರೀ ಕೆ. ಭಾಸ್ಕರ ನಾಯ್ಡು.—ದಯಮಾಡಿ ಅದನ್ನು ಬಿಡಿ, ನಮ್ಮ ಪಕ್ಷದವರೂ ಮಾಡಬಹುದು, ನಿಮ್ಮ ಪಕ್ಷದವರೂ ಮಾಡಬಹುದು, ಎಲ್ಲರೂ ಮಾಡಬಹುದು.

ಶ್ರೀ ಕೆ. ರಾಮಭಟ್.—ನಾವು ಜಗಳ ಮಾಡಿದರೆ ಒಳಗೆ ಮಾಡುತ್ತೇವೆ, ನೀವು ಹೊರಗಡೆ ಮಾಡುತ್ತೀರಿ.

ಉಪಾಧ್ಯಕ್ಷರು.—ಅದಕ್ಕೆ ನಾನು ಅಲೊ ಮಾಡುವುದಿಲ್ಲ, ವಿಷಯಕ್ಕೆ ಬನ್ನಿ.

ಶ್ರೀ ಕೆ. ಭಾಸ್ಕರ ನಾಯ್ಡು.—ನಮ್ಮ ಪಕ್ಷ ಚೆನ್ನಾಗಿ ಬೆಳೆದು ಬರುತ್ತಾ ಇದೆ.

ಶ್ರೀ ಕೆ. ರಾಮಭಟ್.—ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ಇವತ್ತು 'ಎ' ಮತ್ತು 'ಬಿ' ಜಗಳ ಮಾಡುತ್ತಾರೆ, ಆಗ ಪೋಲೀಸರು ಆಕ್ಷನ್ ತೆಗೆದುಕೊಳ್ಳಬಹುದು.

MR. DEPUTY SPEAKER.—You can speak on the Demands for Grants.

SRI K. RAMBHAT.—It affects the morale of the Police.

ಶ್ರೀ ಜಿ.ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೆ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಮಾನ್ಯ ಸದಸ್ಯರು ವಿಷಯಾಂತರಮಾಡಿ, ಯಾವುದು ಇವತ್ತು ಮುಂಗಡ ಪತ್ರದ ಮೇಲೆ ಮಾತನಾಡಬೇಕಾಗಿದೆ ಅದನ್ನು ಬಿಟ್ಟು ಪ್ರಚೋದನಾತ್ಮಕವಾಗಿ ಮಾತನಾಡುತ್ತಾ ಇದ್ದಾರೆ ಹೀಗೆ ಆಡುವ ಭಾಷೆಯನ್ನು, ಮಾತನಾಡುವಂಥ ವಿಚಾರವನ್ನು ಸಭೆಯ ನಡೆವಳಿಕೆಯಿಂದ ತೆಗೆದುಹಾಕಬೇಕು.

ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಸಚಿವರೂ ಕೂಡ ಹೇಳುವಾಗ ಬೇರೆ ಬೇರೆ ಪಕ್ಷಗಳ ಹೆಸರನ್ನು ಹೇಳಿದರು. ಮಾನ್ಯ ಸದಸ್ಯರು ಹೇಳಿದ ವಿಚಾರ ಏನೆಂದರೆ, ಪಕ್ಷದ ಒಳ ಜಗಳ ಎಲ್ಲಾ ಪಾರ್ಟಿಯಲ್ಲೂ ಇರಬಹುದು, ಅದನ್ನು ಒಳಗಡೆ ಚರ್ಚೆಮಾಡಿಕೊಳ್ಳಿ ಯಾರೂ ಬೇಡ ಎಂದು ಹೇಳುವುದಿಲ್ಲ, ಆಳುವ ಪಕ್ಷದ ಸದಸ್ಯರು, ಅದರಲ್ಲೂ ಒಬ್ಬರು ಈ ಸದನದ ಸದಸ್ಯರಾಗಿದ್ದವರು, ಅವರ ಮೇಲೆ ಹಲ್ಲೆ ನಡೆದರೆ ಯಾವುದೇ ಕ್ರಮ ತೆಗೆದುಕೊಳ್ಳುವುದಕ್ಕೆ ಪೋಲೀಸರು ನಿರ್ವೀರ್ಯರಾಗುತ್ತಾರೆ, ಇದು ಈ ರಾಜ್ಯಕ್ಕೆ ಒಳ್ಳೆಯದಲ್ಲ, ಕಾನೂನು ಮತ್ತು ಶಿಸ್ತಿನ ಪಾಲನೆಗೆ ಇದರಿಂದ ಅಡ್ಡಿಯಾಗುತ್ತದೆ ಎಂದು ಹೇಳಿದರು. ಆ ರೀತಿ ಮಾಡುವುದು ಒಳ್ಳೆಯದು ಎಂದು ಇದ್ದರೆ, ಅದು ನಡೆದುಕೊಂಡು ಹೋಗಲಿ.

INTERRUPTIONS

ಶ್ರೀ ಬಿ. ಭಾಸ್ಕರ ಶೆಟ್ಟಿ.—ಬಿ.ಜೆ.ಪಿ. ಆರ್.ಎಸ್.ಎಸ್.ನವರು ಇವತ್ತು ವಿಸಿಟರ್ಸ್ ಗ್ಯಾಲರಿಯಲ್ಲಿ ಕೂಗಿದರು. ತಾವು ಪಕ್ಷದ ವಿಚಾರ ಮಾತನಾಡಿದರೆ ನಾವೂ ಕೂಡ ಮಾತನಾಡಬೇಕಾಗುತ್ತದೆ. ಆದ್ದರಿಂದ ಪಕ್ಷದ ವಿಚಾರ ಬೇಡ.

ಶ್ರೀ ಕೆ. ರಾಮಭಟ್.—ನಾನು ಏನು ಹೇಳುತ್ತೇನೆ ಅಂದರೆ, ಇವರು ಜಗಳ ಮಾಡಿಕೊಂಡರೆ ಊರಿಗೆಲ್ಲಾ ದುರ್ನಾತ ಬರುತ್ತದೆ, ಅದಕ್ಕೋಸ್ಕರ ಹೇಳುತ್ತಿದ್ದೇನೆ.

MR. DEPUTY SPEAKER.—It is better to avoid.

SRI K. RAMBHAT.—Why should I avoid it ? It affects the health of the State. I have got every right to speak and you cannot curtail my right.

ಶ್ರೀ ಕಾಗೋಡು ತಿಮ್ಮಪ್ಪ.—ಗ್ಯಾಲರಿಯಿಂದ ಮುರಿದಾಬಾದ್ ಎಂದು ಹೇಳಿಸುತ್ತಾರೆ, ಅದು ಸರಿಯೇ ?

ಶ್ರೀ ಕೆ. ರಾಮಭಟ್ —ನೀವು ಜಗಳ ಮಾಡಿದ್ದೀರಿ ಎಂದು ಹೇಳಲಿಲ್ಲ. ನೀವು ಆ ಪಕ್ಷದಲ್ಲಿ ಹೊಸಬರಿದ್ದೀರಿ ನಿಮಗೇನೂ ಗೊತ್ತಿಲ್ಲ ಅಲ್ಲಿ, ಏನು ನಡೆಯುತ್ತಿದೆ ಎಂಬುದು.

ಶ್ರೀ ಪಿ. ಕಳ್ಳಿಗುಡ್ಡ.—ಜನತಾ ಪಾರ್ಟಿಯಲ್ಲಿ ಒಳಜಗಳ ಏನು ನಡೆಯುತ್ತಿದೆ ಎಂಬುದು ಇಡೀ ರಾಷ್ಟ್ರಕ್ಕೆ ಗೊತ್ತಿದೆ. ಬೇರೆ ಪಕ್ಷಗಳ ಬಗ್ಗೆ ಏತಕ್ಕೆ ಹೇಳುತ್ತೀರಾ, ನೀವು ಹೇಳುತ್ತಿರುವುದು ಸರಿಯಲ್ಲ ವೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇವತ್ತು ಇಲ್ಲಿಯ ವಿಜಿಟರ್ಸ್ ಗ್ಯಾಲರಿಯಲ್ಲಿ ಬಿ.ಜೆ.ಪಿ.ಯವರು ಏನು ಮಾಡಿದರು ಎಂಬುದು ತಮಗೆ ಗೊತ್ತಿದೆ.

ಶ್ರೀ ಜೆ. ಎಚ್. ಪಟೇಲ್.—ಮಂಗಳೂರಿನಲ್ಲಿರುವ ಸರ್ಕ್ಯೂಟ್ ಹೌಸ್‌ನಲ್ಲಿರುವ ಗ್ಲಾಸ್, ಕುರ್ಚಿಗಳು ಮುರಿದು ಹೋಗಿದ್ದವಲ್ಲಾ ಅದೆಲ್ಲಾ ರಿಪೇರಿ ಆಯಿತೇ ? ಏತಕ್ಕೆಂದರೆ ತಾವು ಬಹಳ ಶಾಂತ ಪ್ರಿಯರು ಅಲ್ಲಿ ಏನು ಗಲಾಟೆ ನಡೆಯಿತು, ಏತಕ್ಕೆ ನಡೆಯಿತು, ಗಲಾಟೆಯಾದ ನಂತರ ಅಲ್ಲಿರುವ ಗ್ಲಾಸ್, ಚೇರ್‌ಗಳನ್ನು ರಿಪೇರಿ ಮಾಡಿಸಲಾಗಿದೆಯೆ ?

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಪತ್ರಿಕೆಯವರು ಏನೋ ಬರೆದು ಬಿಡುತ್ತಾರೆ, ಅಲ್ಲಿ ಗ್ಲಾಸ್, ಕುರ್ಚಿಗಳು ಎಲ್ಲಾ ಸರಿಯಾಗಿಯೇ ಇದೆ...

(ಗಲಾಟೆ...ಗೊಂದಲ)

ಶ್ರೀ ಕೆ. ರಾಮಭಟ್.—ನಾನು ಹೇಳುವಂಥಾದ್ದು ಅವರಿಗೆ ಅಪ್ರಿಯವಾಗಿರುತ್ತದೆ ಏನು ಮಾಡುವುದು ? ನಾನು ಇಲ್ಲಿ ಚುನಾಯಿತ ಸದಸ್ಯನಾಗಿ ಬಂದಿರುವಾಗ ನಾನು ನನ್ನ ಕರ್ತವ್ಯವನ್ನು ಪಾಲನೆ ಮಾಡಬೇಕಾಗುತ್ತದೆ, ಅವರು ಏನಾದರೂ ಈ ರೀತಿ ಬೊಬ್ಬೆ ಹೊಡೆದರೆ ನನ್ನ ಮಾತನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ೧೮ಷಿ ಜನ ಅಲ್ಲಿ ನಿಂತು ಬೊಬ್ಬೆ ಹೊಡೆದರೆ ಒಬ್ಬ ರಾಮಭಟ್ ಏನು ಮಾಡಬೇಕು ಎಂಬುದನ್ನು ತಾವೇ ಹೇಳಿ ? ಆದುದರಿಂದ ಮಧ್ಯದಲ್ಲಿ ೧೦ ಜನ ಎದ್ದು ನಿಂತು ಮಾತನಾಡಿದಾಕ್ಷಣ ಉಪಾಧ್ಯಕ್ಷರೇ ತಾವು ಗಾಬರಿಯಾಗಬೇಕಾದ್ದು ಇಲ್ಲ ಅದು ಸ್ವಾಭಾವಿಕ. ಈಗ ಏನಾಗಿದೆ ಎಂದರೆ ನಮ್ಮ ಊರಿನಲ್ಲಿಯೂ ಎರಡು ಪಾರ್ಟಿ, ಹೀಗಾಗಿ ನಮ್ಮ ಸರ್ಕ್ಯೂಟ್ ಹೌಸ್‌ನಲ್ಲಿ ಗಲಾಟೆಯಾಗಿ ಹೊಡೆದಾಟ ಬಡಿದಾಟವಾಗಿ ಗ್ಲಾಸ್, ಕುರ್ಚಿಗಳೆಲ್ಲಾ ಮುರಿದುಹೋಗಿವೆ...

(ಗೊಂದಲ...)

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ರೀತಿಯಾಗಿ ಮಾತನಾಡತಕ್ಕದ್ದು ಸರಿಯಲ್ಲ, ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಪಕ್ಷಗಳವರು ಏನೇನು ಮಾಡುತ್ತಿದ್ದಾರೆ ಎನ್ನುವುದನ್ನು ಸಹ ಬಯಲಿಗೆ ಎಳೆಯಬೇಕಾಗುತ್ತದೆ.

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಬೊಬ್ಬೆ ಹೊಡೆಯುವ ವಿಚಾರ ಶ್ರೀ ರಾಮಭಟ್‌ರವರ ಪಕ್ಷದವರಿಗೆ ಚೆನ್ನಾಗಿ ಗೊತ್ತು ಇವತ್ತು ಗ್ಯಾಲರಿಯಲ್ಲಿ ಬೊಬ್ಬೆ ಹೊಡೆದಿದ್ದಾರಲ್ಲಾ.

ಶ್ರೀ ಕೆ. ರಾಮಭಟ್.—ಈ ವರ್ಷ ಉತ್ಪಾದನಾ ವರ್ಷ, 'ಶ್ರಮ ಏವ ಜಯತೇ' ಎಂದು ಹೊಸದಾಗಿ ಘೋಷಣೆ ಇತ್ತಿದ್ದಾರೆ. ಹಿಂದಿನ ವರ್ಷ ಏನು ಮಾಡಿದರು ? ಹಿಂದಿನ ವರ್ಷ ಐಡಲ್ ಆಗಿದ್ದರು ಅದಕ್ಕೆ ತಮಗೆ ಉದಾಹರಣೆಗೆ ಕೊಡುತ್ತೇನೆ ೧೯೮೧-೮೨ರಲ್ಲಿ ನಿಮ್ಮ ಪಿ. ಡಬ್ಲ್ಯು. ಡಿ. ಇಲಾಖೆಯವರು ನಿದ್ರೆ ಮಾಡುವ ವರ್ಷವನ್ನು ಆಚರಿಸಿದ್ದಾರೆ ಏತಕ್ಕೆಂದರೆ ಯಾವುದೇ ಪ್ರಗತಿಯಾಗಿಲ್ಲ. ಆದುದರಿಂದ ಹಿಂದಿನ ವರ್ಷವನ್ನು 'ನಿದ್ರೆ ಏವ ಜಯತೆ' ಎಂದು ಕರೆಯಬಹುದು. ಮಾನ್ಯ ಅರ್ಥ ಮಂತ್ರಿಗಳವರು ಹೇಳಲಿ ಯಾವ ಪ್ರಗತಿಯಾಗಿದೆಂದು ? ಎಷ್ಟು ಬ್ರಿಡ್ಜ್‌ಗಳನ್ನು ಕಟ್ಟಿದ್ದಾರೆ ? ಎಷ್ಟು ರಸ್ತೆಗಳನ್ನು ಮಾಡಿದ್ದಾರೆ ಎನ್ನುವ ಬಗ್ಗೆ ಹೇಳಲಿ.

ಶ್ರೀ ಬಿ. ಎ. ಮೊಹಿದ್ದೀನ್.—ಅಲ್ಲಿ ರೋಡ್ಸ್‌ಗಳನ್ನು ಮಾಡಿದ್ದಾರಲ್ಲಾ...

ಶ್ರೀ ಬಿ. ವಿ. ಕಕ್ಕಿಲಾಯ.—ಈಗ ನಮ್ಮ ಸ್ನೇಹಿತರು ಒಂದು ಮಾತನ್ನು ಹೇಳಿದರು, ಅಲ್ಲಿ ಏನಾದರೂ ನೆರೆ ಬಂದರೆ ಓಡಿ ಹೋಗುವುದಕ್ಕೆ ಒಂದು ರಸ್ತೆ ಮಾಡಿದ್ದಾರೆ ಎಂದು. ಫ್ಲಡ್ ಎಸ್ಕೇಪ್ ರೋಡ್‌ಗೋಸ್ಕರವಾಗಿ ೧೪ ಲಕ್ಷ ರೂಪಾಯಿಗಳ ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ ಮಾಡಿ ಅದನ್ನು ೧೮ ತಿಂಗಳೊಳಗೇ ಮಾಡಿ ಮುಗಿಸಬೇಕೆಂದು, ಆದರೆ ಮಾನ್ಯ ಸಚಿವರು ಬರೀ ಸುಮ್ಮನೇ ಭರವಸೆ ಕೊಟ್ಟು ಬಿಟ್ಟರೆ ಆಗುತ್ತದೆಯೆ ? ನೀವು ಏನೋ ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ ಮಾಡಿದ್ದೀರಿ ಆದರೆ ಅಲ್ಲಿ ಕೆಲಸ ಆಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ನನ್ನ ವಿಚಾರವನ್ನು ಪ್ರಸ್ತಾಪ ಮಾಡಿರುವುದರಿಂದ ಒಂದು ಮಾತು ಹೇಳಬೇಕಾಗುತ್ತದೆ. ನಾವು ಏನೋ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಟ್ಟಿದ್ದೇವೆ, ಆದರೂ ಕೂಡ ನೀವು ಆ ಪ್ರದೇಶದ ಪ್ರತಿನಿಧಿಗಳು ಅಲ್ಲಿ ಜಾಗವನ್ನು ಕೊಡಿಸುವ ಬಗ್ಗೆ ನೀವು ನಿಮ್ಮ ಕರ್ತವ್ಯವನ್ನು ಎಷ್ಟರಮಟ್ಟಿಗೆ ನಿರ್ವಹಿಸಿದ್ದೀರಿ ?

ಶ್ರೀ ಬಿ. ವಿ. ಕಕ್ಕಿಲಾಯ.—ಈಗಲೇ ಬನ್ನಿ ಹೋಗೋಣ. ನೀವು ಲ್ಯಾಂಡ್ ಅಕ್ವೈರ್ ಮಾಡಿ ಕೊಂಡವರಿಗೆ ದುಡ್ಡು ಕೊಟ್ಟಿದ್ದೀರಾ ? ನೀವು ಏನೂ ನನ್ನನ್ನು ಲ್ಯಾಂಡ್ ಅಕ್ವಿಜಿಷನ್ ಆಫೀಸರನ್ನಾಗಿ ನೇಮಕ ಮಾಡಿಲ್ಲ...

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಇದರ ಬಗ್ಗೆ ಏನು ಕೆಲಸ ಮಾಡಿದ್ದೀರಿ ಎಂಬುದನ್ನು ಹೇಳಿ, ನೀವು ಅಲ್ಲಿರುವವರಿಗೆ ಹೇಳಿ ಜಮೀನು ಕೊಡಿಸಬಹುದಾಗಿತ್ತಲ್ಲಾ...

ಶ್ರೀ ಬಿ. ವಿ. ಕಕ್ಕಿಲಾಯ.—ಅವತ್ತು ನೀವು ಭರವಸೆ ಕೊಡುವಾಗ ಎಷ್ಟು ವಿಳಂಬವಾಗುತ್ತದೆ ? ಎಷ್ಟು ದುಡ್ಡು ಕೊಡಬೇಕಾಗುತ್ತದೆ ? ಎಂಬುದು ಗೊತ್ತು ಇರಲಿಲ್ಲವೇ ? ಆದುದರಿಂದ ಶ್ರಮ ಏವ ಜಯತೇ ಅಲ್ಲ, ನಿದ್ರೆ ಏವ ಜಯತೆ ಆಗಿದೆ...

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೇ, ಕಲ್ಲನ್ನು ಮಾನ್ಯ ಶ್ರೀ ಜಿ. ಎಚ್. ಗಂಗಾಧರನ್ ರವರು ತಂದು ಇಟ್ಟಿದ್ದರೋ ಕೇಳಿ...

ಶ್ರೀ ಜಿ. ಎಚ್. ಗಂಗಾಧರನ್.—ಇಲ್ಲ ಅಧ್ಯಕ್ಷರೇ...

SRI K. BHASKAR NAIDU.—Have you brought some stones ?

MR. DEPUTY SPEAKER.—It is not a stone.

ಶ್ರೀ ಕೆ. ರಾಮಭಟ್.—೧೯೮೧-೮೨ನೇ ಇಸ್ವಿಯಲ್ಲಿ ನಮ್ಮ ಶಾಸಕರ ಹತ್ತಿರ ನಿಮ್ಮಲ್ಲಿ ಯಾವ ಯಾವ ಕೆಲಸ ಕಾರ್ಯಗಳು ಆಗಬೇಕಾಗಿದೆ ಎನ್ನುವ ಬಗ್ಗೆ ವಿವರ ಕೊಡಿ ಎಂದು ಕೇಳಿದ್ದರು ಅದೇ ರೀತಿಯಾಗಿ ನಾವು ಕೊಟ್ಟಿದ್ದೆವು ಆದರೆ ಯಾವ ಕೆಲಸವೂ ಆಗಿಲ್ಲ. ನಮಗೆ ೬-೬ ಲಕ್ಷ ರೂ.ಗಳ ಕೆಲಸ ಕೊಡುತ್ತೇವೆಂದು ನಮಗೆ ನಂಬಿಸಿದ್ದರು, ಇದರಿಂದ ನಮ್ಮ ಮುಖಕ್ಕೆ ಮಂಗಳಾರತಿ ಆದ ಹಾಗಾಗಿದೆ. ಆ ರೀತಿ ಕೆಲಸ ಮಾಡಲು ಆಗದಿದ್ದ ಮೇಲೆ ಎಂ.ಎಲ್.ಎ. ಗಳಿಗೆ ಯಾವ ಯಾವ ಕೆಲಸಗಳು ಆಗ ಬೇಕಾಗಿದೆ ಎನ್ನುವ ಬಗ್ಗೆ ಏತಕ್ಕೆ ವಿವರಣೆಯನ್ನು ಕೇಳಬೇಕಾಗಿತ್ತು ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಕೊಟ್ಟಿದ್ದಾರಲ್ಲಾ, ರಸ್ತೆ ಕೆಲಸಗಳನ್ನು ಮಾಡಿದ್ದಾರಲ್ಲಾ...

ಶ್ರೀ ಕಾಗೋಡು ತಿಮ್ಮಪ್ಪ.—ಊರಿಗೆ ಹೋಗಿ ನೋಡಿ, ಊರಿಗೇ ಹೋಗಿಲ್ಲ, ಅಂಥಾದ್ದರಲ್ಲಿ ನೀವು ಇಲ್ಲಿ ಕೂತುಕೊಂಡು ಕೆಲಸ ಪ್ರಾರಂಭವಾಗಿಲ್ಲವೆಂದು ಹೇಳಿದರೆ ಹೇಗೆ ?

ಶ್ರೀ ಕೆ. ರಾಮಭಟ್.—ನಾನು ಊರಿನಿಂದ ಬಂದ ಮೇಲೆ ಪ್ರಾರಂಭವಾಗಿರಬಹುದು. ಇನ್ನು ಮಾನ್ಯ ಸಚಿವರು ೪೨ ಸಾವಿರ ಹುದ್ದೆಗಳು ಖಾಲಿ ಇದೆ ಎಂದು ಹೇಳಿದರು, ಅಂದರೆ ಎಷ್ಟು ಪ್ರೊಗ್ರೆಸ್ಸಿವ್ ಆಗಿ ನಿಮ್ಮ ಅಡ್ಮಿನಿಸ್ಟ್ರೇಷನ್ ನಡೆಯುತ್ತಿದೆ ಎಂಬುದನ್ನು ನೀವೇ ನೋಡಿ. ೪೨ ಸಾವಿರ ಖಾಲಿ ಹುದ್ದೆಗಳನ್ನು ಇಟ್ಟುಕೊಂಡು ಇವತ್ತು ಅನೇಕ ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲ, ಪ್ರಿನ್ಸಿಪಾಲರುಗಳು ಇಲ್ಲ ಇದು ನಿಮ್ಮ ಒಳ್ಳೆಯ ಗುಡ್ ಅಡ್ಮಿನಿಸ್ಟ್ರೇಷನ್ ಅಲ್ಲವೇ ಶ್ರೀ ಶಂಕರ್‌ರಾಯರೇ?

ಶ್ರೀ ಜಿ. ಬಿ. ಶಂಕರ್ ರಾವ್.—ಪರ್ಮನೆಂಟ್ ವೇಕೆನ್ಸೀಸ್ ಇರುವ ಕಡೆ ಲೋಕಲ್ ಕ್ಯಾಂಡಿಡೇಟ್ಸ್ ಹಾಕಿ ಫಿಲ್‌ಅಪ್ ಮಾಡಿದ್ದೇವೆ, ಪ್ರಿನ್ಸಿಪಾಲರುಗಳು, ಟೀಚರ್ಸ್, ಲೆಕ್ಚರರ್ಸ್ ಇದ್ದಾರೆ ಇಲ್ಲವೆಂದು ಹೇಳಬೇಡಿ. ನಿಮಗೆ ಬೇಕಾದ ಪ್ರಿನ್ಸಿಪಾಲ್ ಅಲ್ಲಿ ಇರಲಿಕ್ಕೆ ಇಲ್ಲ. ಅಲ್ಲಿ ಉಪನ್ಯಾಸಕರು ಇದ್ದಾರೆ ; ಪಾಠ ನಡೆಯುತ್ತಿದೆ. ನಿಮ್ಮ ಆರ್.ಎಸ್.ಎಸ್. ಕೆಲಸ ಮಾಡುವವರು ಅಲ್ಲಿ ಇಲ್ಲ.

ಶ್ರೀ ಕೆ. ರಾಮಭಟ್.—ಅವರೇನು ನಮಗೆ ಬೇಕಾಗಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—೫ ಜನ ಉಪನ್ಯಾಸಕರು ಇರಬೇಕಾದ ಜಾಗದಲ್ಲಿ ೪ ಜನರೂ ಕೂಡ ಇಲ್ಲದಂತ ಕಾಲೇಜುಗಳನ್ನು ತೋರಿಸಿಕೊಟ್ಟರೆ ರಾಜೀನಾಮೆ ಕೊಡುತ್ತೀರಾ ? ನೀವು ತೋರಿಸಿಕೊಟ್ಟರೆ ನಾನು ರಾಜೀನಾಮೆ ಕೊಡುತ್ತೇನೆ.

ಶ್ರೀ ಜಿ. ಬಿ. ಶಂಕರ್ ರಾವ್.—ನೀವು ಹೇಳಿದ ತಕ್ಷಣ ರಾಜೀನಾಮೆ ಕೊಡುವುದಕ್ಕಾಗುತ್ತದೆಯೆ? ನೀವು ಅಲ್ಲಿ ಹೋಗಿ ಪರೀಕ್ಷಿಸಿ ನೋಡಿ ; ಆಮೇಲೆ ಹೇಳಿ. ಸುಮ್ಮನೆ ನೀವು, ನಮಗೆ ಮಾತನಾಡು ವುದಕ್ಕೆ ಹಕ್ಕಿದೆ ಎಂದು ಬೇಕಾದುದು ಹೇಳಿದರೆ ನಡೆಯುವುದಿಲ್ಲ.

ಶ್ರೀ ಹೆಚ್. ಗಂಗಾಧರನ್.—ಎಷ್ಟೋ ಖಾತೆಗಳಿಗೆ ಮಂತ್ರಿಗಳೇ ಇಲ್ಲ ; ಅದೇ ರೀತಿ ಅಲ್ಲಿಯೂ ಕೂಡ ಇರುವುದಿಲ್ಲ. ನೀವೇ ಎಷ್ಟೋ ಸಾರಿ ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ.

ಶ್ರೀ ಜಿ. ಬಿ. ಶಂಕರ್ ರಾವ್.—ಪೋಸ್ಟ್ ವೇಕೆಂಟ್ ಇದೆ ಎಂದರೆ ಪರ್ಮನೆಂಟ್ ಪೋಸ್ಟಿಗೆ ಟೆಂಪರರಿಯಾಗಿ ನೇಮಕ ಮಾಡಿದ್ದೇವೆ.

ಶ್ರೀ ಕೆ. ರಾಮಭಟ್.—ಮಾನ್ಯ ಶಂಕರ ರಾಯರಿಗೆ ಅಧಿಕೃತವಾಗಿ ಗೊತ್ತಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಲ್ಲಿ ಯಾರೂ ಇಲ್ಲವೆಂದು ಹೇಳಬೇಡಿ ! ಉಪಾಧ್ಯಾಯರ ಬದಲಿಗೆ ಯಾರೋ ಇದ್ದಾರೆ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ರಾಮಭಟ್.—ಹಿರಿಯ ಸದಸ್ಯರಾದ ಶ್ರೀಮಾನ್ ಬಸವಲಿಂಗಪ್ಪನವರು ಮಾತನಾಡುತ್ತಾ ಒಂದು ಹೊಸ ಸಿದ್ಧಾಂತವನ್ನು ಹೇಳಿದ್ದಾರೆ. ಅದೇನೆಂದರೆ, ಇವತ್ತಿನ ದಿವಸ ಇರತಕ್ಕ ಯಾವ ಪಕ್ಷಗಳಿಗೂ ಈ ರಾಜ್ಯದಲ್ಲಾಗಲೀ, ದೇಶದಲ್ಲಾಗಲಿ ಸ್ಥಾನ ಇಲ್ಲ ; ಶ್ರೀಮತಿ ಇಂದಿರಾಗಾಂಧಿಯವ ರೊಬ್ಬರೇ ಪ್ರಪಂಚಕ್ಕೆಲ್ಲ ಏಕೈಕ ನಾಯಕಿ ಎಂದು ಹೇಳಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಹಿರಿಯರು ಅವರ ಬಗ್ಗೆ ನನಗೆ ಗೌರವ ಇದೆ. ಆದರೆ ಅವರು ಈ ರೀತಿ ಹೇಳುವುದು ಸರಿಯಲ್ಲ. ಅವರು ಮೊದಲು ವಿರೋಧ ಪಕ್ಷದಲ್ಲಿದ್ದು ಈಗ ಇಲ್ಲಿಂದ ಅಲ್ಲಿಗೆ ಓಡಿ ಹೋಗಿದ್ದಾರೆ. ಅವರ ಮನಸ್ಸಿನಲ್ಲಿ, ವಿರೋಧ ಪಕ್ಷ ಬೆಳೆಯಬೇಕೆಂದು ಇದೆಯೋ ಅಥವಾ ಸಾಯಬೇಕೆಂದು ಇದೆಯೋ ಗೊತ್ತಿಲ್ಲ. ವಿರೋಧ ಪಕ್ಷ ಬೆಳೆಯಬೇಕೆಂದು ಬೆಳೆಸುವುದಕ್ಕೆ ಪ್ರಯತ್ನ ಮಾಡಲಿ.

ಶ್ರೀ ಜಿ. ಬಿ. ಶಂಕರ ರಾವ್.—ನಿಮ್ಮಲ್ಲಿ ಆ ಯೋಗ್ಯತೆ ಇಲ್ಲದೆ ಹಾಳು ಮಾಡುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಆ ಯೋಗ್ಯತೆಯನ್ನು ಕಳೆದುಕೊಂಡು ಬೆಳೆಯಬೇಕೆಂದರೆ ಹೇಗೆ ? ನಿಮ್ಮ ಜೊತೆಗೆ ಯಾರ್ಯಾರನ್ನೋ ತಂದು ಕೂರಿಸಿಕೊಳ್ಳುತ್ತಿದ್ದೀರಿ.

ಶ್ರೀ ಹೆಚ್. ಗಂಗಾಧರನ್.—ವಿರೋಧ ಪಕ್ಷದಿಂದ ನೀವು ಏತಕ್ಕೆ ಆ ಕಡೆ ಹೋದಿರಿ?

ಶ್ರೀ ಜಿ. ಬಿ. ಶಂಕರ ರಾವ್.—ನಿಮಗೆ ಬುದ್ಧಿ ಕಲಿಸುವುದಕ್ಕೆ. ನಾನು ಯಾರನು ಮೋಸ ಮಾಡಿಲ್ಲ, ನಾನು ಸ್ವತಂತ್ರವಾಗಿ ಆರಿಸಿಬಂದವನು.

ಶ್ರೀ ಹೆಚ್. ಗಂಗಾಧರನ್ —ನಿಮಗೆ ಪಕ್ಷದ ಆಧಾರದ ಮೇಲೆ ಮತ ಕೊಡಲಿಲ್ಲ ಸ್ವತಂತ್ರರಂ ಎಂದು ಕೊಟ್ಟರು. You have betrayed your people. How did you betray them? You come here as independent Member.

MR. DEPUTY SPEAKER.—I am not allowing both the hon. Members to speak simultaneously.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಿಮ್ಮಲ್ಲಿ ಯೋಗ್ಯತೆ ಇದ್ದರೆ ವಿರೋಧ ಪಕ್ಷ ಬೆಳೆ ಯುತ್ತಿತ್ತು ಎಂದರು. 'ಯೋಗ್ಯತೆ' ಎಂಬುದು ಪಾರ್ಲಿಮೆಂಟರಿ ಪದವೆ? 'ಶಕ್ತಿ' ಎಂಬ ಪದವನ್ನು ಉಪಯೋಗಿಸಬಹುದಾಗಿತ್ತು.

ಶ್ರೀ ಕೆ. ರಾಮಭಟ್.—ನಾನು ಆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದಾಗ ಇಬ್ಬರೂ ಪಕ್ಷಾಂತರಿ ಮಂತ್ರಿಗಳು ಎದ್ದು ಮಾತನಾಡುವುದು ಎಂದರೆ ಹೇಗೆ?

ಶ್ರೀ ಜಿ. ಬಿ. ಶಂಕರ ರಾವ್—'ಯೋಗ್ಯತೆ' ಎಂಬುದು ಪಾರ್ಲಿಮೆಂಟರಿ ಪದ, ಅದರಲ್ಲಿ ಏನು ಅಪಾರ್ಥ ಇಲ್ಲ. ಪಾರ್ಲಿಮೆಟರಿ ಪ್ರಾಕ್ಟೀಸ್ ನನಗೂ ಗೊತ್ತಿದೆ ತಮಗೂ ಗೊತ್ತಿದೆ.

ಶ್ರೀ ಜೆ.ಹೆಚ್. ಪಟೇಲ್.—ಆಗಲೇ ಈ ಕಡೆ ಇತ್ತಲ್ಲ ಕಲ್ಲು. ಅದನ್ನು ಸ್ವಲ್ಪ ಈ ಕಡೆ ಕಳುಹಿಸಿ ಕೊಡುತ್ತೀರಾ? ಅದು ಈಗ ನಮಗೆ ಕೆಲಸಕ್ಕೆ ಬರುತ್ತದೆ. ಅದನ್ನು ಬಿಟ್ಟು ಬೇರೆ ಮಾರ್ಗ ಇಲ್ಲ

ಶ್ರೀ ಕೆ. ಹೆಚ್. ಶ್ರೀನಿವಾಸ್.-ಆ ಕಲ್ಲುಗಳು ಕೆಲಸಕ್ಕೆ ಬರುವುದಿಲ್ಲ. ಏಕೆಂದರೆ ಅದಕ್ಕೆ ಎಷ್ಟು. ಲಡ್ಡು ಸಿಮೆಂಟ್‌ನ್ನು ಹಾಕಿದ್ದಾರೆಂಬುದನ್ನು ಆಗಲೇ ತೋರಿಸಿದ್ದಾರೆ.

ಶ್ರೀ ಕೆ. ರಾಮಭಟ್.- ನಾನು ಆ ಮಾತನ್ನು ಹೇಳುವಾಗ ಮಾನ್ಯ ಶಂಕರರಾಯರು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಎದ್ದದ್ದು ಏತಕ್ಕೆ ಶಂಕರ್‌ರಾವು ಅವರು ಸ್ವಾತಂತ್ರರಾಗಿದ್ದವರು ಆ ಕಡೆ ಹೋದರು ಮತ್ತು ಕಾಗೊಡು ತಿಮ್ಮಪ್ಪನವರು ಕೂಡ ಈ ಕಡೆ ಇದ್ದವರು ಅಲ್ಲಿಗೆ ಹೋದರು. ಅವರಿಗೆ ಏತಕ್ಕೆ ಈ ಪ್ರಶ್ನೆ? ವಿರೋಧ ಪಕ್ಷವನ್ನು ಬೆಳಸಬೇಕೆಂಬ ಇಚ್ಛೆ ಇದ್ದರೆ ಈ ರೀತಿ ಎಲ್ಲಾ ಮಾಡ ಬಾರದು. ನಮಗೆ ಬೆಂಬಲಕೊಡಿ ನಾವು ಪಕ್ಷವನ್ನು ಬೆಳೆಸುತ್ತೇವೆ. ಮಾನ್ಯ ಬಸವಲಿಂಗಪ್ಪನವರು ಪಕ್ಷವನ್ನು ಬೆಳಸುವುದಾದರೆ ಅವರ ಹಿಂದೆ ನಾವು ಬರುವುದಕ್ಕೆ ತಯಾರಿದ್ದೇವೆ. ಅದನ್ನು ಬಿಟ್ಟು ಈ ರೀತಿಯಾಗಿ ಹೋಗಿ ಆಳುವ ಪಕ್ಷಕ್ಕೆ ಸೇರಿಕೊಳ್ಳುವುದು ಸರಿಯಲ್ಲ. ಅವರು ಹೊಸ ಸಿದ್ಧಾಂತವನ್ನೇನು ಹೇಳಿದ್ದಾರೆ ಅದನ್ನು ಮೆಚ್ಚುವುದಕ್ಕಾಗಲೀ, ಒಪ್ಪುವುದಕ್ಕಾಗಲೀ ಖಂಡಿತಸಾಧ್ಯವಿಲ್ಲ. ನಮ್ಮ ಶಕ್ತಿಯ ಮೇಲೆ, ಜನತೆಯ ಬೆಂಬಲದ ಮೇಲೆ ನಾವು ಪಕ್ಷವನ್ನು ಕಟ್ಟುತ್ತೇವೆ. ನಾವು ಆಳುವ ಪಕ್ಷಕ್ಕೆ ಹೋಗ ಬೇಕೆಂದು ಇಲ್ಲ. ವಿರೋಧ ಪಕ್ಷಧಲ್ಲಿದ್ದುಕೊಂಡೇ ಸಮರ್ಪಕವಾಗಿ ಕೆಲಸ ಮಾಡುತ್ತೇವೆ. ಆದ್ದರಿಂದ

ಇನ್ನು ಮುಂದೆ ಇಂಥ ಹೊಸ ಸಿದ್ಧಾಂತಗಳನ್ನು ಮಂಡಿಸಬೇಡಿ ಎಂದು ಮತ್ತೊಮ್ಮೆ ಮಾನ್ಯ ಬಸವಲಿಂಗಪ್ಪ ನವರನ್ನು ಕೇಳಿಕೊಂಡು ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಏನು ಹೇಳಿದ್ದೇನೆ ಅದನ್ನು ಹೇಳುವುದಕ್ಕೆ ನನ್ನದೇನು ಅಭ್ಯಂತರವಿಲ್ಲ. ಆದರೆ ಹೇಳುವಾಗ ತಪ್ಪು ಹೇಳಬಾರದು. ಶ್ರೀಮತಿ ಇಂದಿರಾಗಾಂಧಿಯವರು ಈ ಪ್ರಪಂಚಕ್ಕೆಲ್ಲಾ ನಾಯಕರು ಎಂದು ನಾನು ಹೇಳಿದ್ದೆನೆ? ನಾನು ಅವರನ್ನು ಒಪ್ಪಿಕೊಂಡಿದ್ದೇನೆ. ಎಂದು ಹೇಳಿದ್ದೇನೆ ಅವತ್ತೂ ಒಪ್ಪಿದ್ದೆ. ಇವತ್ತೂ ಒಪ್ಪಿದ್ದೇನೆ. ನಾಳೆಯೂ ಒಪ್ಪುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ದಯಮಾಡಿ ತಪ್ಪು ತಿಳಿಯಬಾರದು. ವಿರೋಧ ಪಕ್ಷಗಳು ಒಗ್ಗಟಾಗಬೇಕು ಮತ್ತು ಪ್ರಜಾ ಪ್ರಭುತ್ವದಲ್ಲಿ ವಿರೋಧ ಪಕ್ಷಗಳು ಚುರುಕಾಗಿರಬೇಕೆಂಬುದು ನನ್ನ ಇಚ್ಛೆ. ಆದರೆ ನೀವು ಒಗ್ಗಟ್ಟಾಗುವುದಿಲ್ಲ ಕೆಲಸ ಮಾಡುವುದಿಲ್ಲ ಎಂದು ಹೊರಟಿದ್ದೀರಿ. ವಿರೋಧ ಪಕ್ಷದವರಾದ ನೀವುಗಳೇ ಕೆಲಸ ಮಾಡುವುದಿಲ್ಲವೆಂದರೆ ನಾನು ಏನು ಮಾಡುವುದಕ್ಕಾಗುತ್ತದೆ?

MR. DEPUTY SPEAKER.—Before that, just I would like to clarify for the information of the House that the materials brought by the hon. Member Sri H. Gangadharan are not allowed under the rule.

ಶ್ರೀ ಹೆಚ್. ಗಂಗಾಧರನ್.—ಈಗ ತಂದದ್ದು ಅಲ್ಲ, ನನ್ನ ಹತ್ತಿರ ಕೂಡ ಅದು ಇರಲಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ —ಇಲ್ಲಿ ಇದ್ದುದ್ದನ್ನು ನಾನು ನೋಡಿ ಹೇಳಿದೆ ಅಷ್ಟೆ. ಅದನ್ನು ಯಾರು ತಂದರು ಎಂಬುದು ನನಗೂ ಗೊತ್ತಿಲ್ಲ. ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್—ಅಷ್ಟು ವೀಕ್ ಆದಕ್ಟಿಕಲ್ಲನ್ನು ತರಬಾರದಾಗಿತ್ತು.

ಶ್ರೀ ಬಿ. ಭಾಸ್ಕರ ಶೆಟ್ಟಿ—ಇಂದು ನಿರೀಕ್ಷಕರ ಗ್ಯಾಲರಿಯಲ್ಲಿ ಸುಮಾರು ೩-ಗಂಟೆ ಸಮಯದಲ್ಲಿ ನಡೆದಂತಹ ಒಂದು ದುರ್ಘಟನೆ ತಮ್ಮ ಗಮನಕ್ಕೆ ಬಂದಿದೆ, ಮತ್ತು ಈ ಸಭೆಯ ಗಮನಕ್ಕೂ ಬಂದಿದೆ. ಇದು ದುರ್ದೈವವಶಾತ್ ನಡೆದಿದೆ, ನಡೆಯಬಾರದಾಗಿತ್ತು. ಇದು ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಯನ್ನುಂಟುಮಾಡುವಂಥಾದ್ದು ಮಾತ್ರವಲ್ಲದೆ ದುರುದ್ದೇಶಪೂರ್ವಕವಾಗಿ ಯಾರ ಮೇಲೋ ಕೆಸರನ್ನು ಚೆಲ್ಲಿ ಅವರ ಹೆಸರನ್ನು ಹಾಳು ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಆ ಕೆಲಸ ಮಾಡಿದ್ದಾರೆ. ಅದನ್ನು ಒಂದು ಪಕ್ಷದವರು ಮಾಡಿಸಿದ್ದಾರೆಂದು ನಾನಾದರೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಂಥ ಘಟನೆಗಳು ದಿನನಿತ್ಯ ನಡೆದರೆ ಈ ಸಭೆಯ ಕಾರ್ಯಕಲಾಪಕ್ಕೆ ತೊಂದರೆಯಾಗುವುದಲ್ಲದೆ ಹೊರಗೆ ನೋಡುವವರು ಕೂಡ ನಗೆಯಾಡುತ್ತಾರೆ. ಅಂದ ಮೇಲೆ ಇಂಥ ಘಟನೆಗಳು ಈ ಸಭೆಯಲ್ಲಿ ಇನ್ನು ಮುಂದೆ ನಡೆಯದ ಹಾಗೆ ಮಾಡುವುದು ಮಾತ್ರವಲ್ಲವೆ ಇದನ್ನು ಇನ್ನಿತರರು ಅನುಕರಣೆ ಮಾಡದ ರೀತಿಯಲ್ಲಿ ಮಾಡಬೇಕಾಗುತ್ತದೆ. ಆದ್ದರಿಂದ, ಈ ಸಂದರ್ಭದಲ್ಲಿ ಇಂಥ ಘಟನೆಗಳು ಜರುಗದಂತೆ ಮಾಡುವ ಸಲುವಾಗಿ ಬಹಳ ಕಳಕಳಿಯಿಂದ ಈ ಸಭೆಯ ಮುಂದೆ ಒಂದು ನಿರ್ಣಯವನ್ನು ಮಂಡಿಸಬೇಕೆಂದಿದ್ದೇನೆ. ಅದಕ್ಕೆ ತಾವುಗಳೆಲ್ಲರೂ ಒಪ್ಪಿಗೆ ಕೊಡಬೇಕೆಂದು ಮಾನ್ಯ ಸಭೆಯ ಸದಸ್ಯರೆಲ್ಲರನ್ನೂ ಕೇಳಿಕೊಳ್ಳುತ್ತೇನೆ. ಈ ನಿರ್ಣಯ ಈ ರೀತಿ ಇದೆ.

"That this House resolves...

ಶ್ರೀ ಪಂಪಾಪತಿ.—ಕನ್ನಡದಲ್ಲಿ ಓದಿ. ಇಷ್ಟು ಹೊತ್ತು ಕನ್ನಡದಲ್ಲಿ ಮಾತನಾಡ ಈಗ ಏಕೆ ಇಂಗ್ಲೀಷಿನಲ್ಲಿ ಓದುತ್ತಿದ್ದೀರಿ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಂಗ್ಲೀಷಿನಲ್ಲಿ ಟೈಪ್ ಆಗಿದೆ.

ಶ್ರೀ ಪಂಪಾಪತಿ.—ಕನ್ನಡದಲ್ಲಿ ಮಾಡಿಕೊಡಿ ಎಂದು ಹೇಳಿ ಅಷ್ಟು ಹೇಳುವುದಕ್ಕಾಗುವುದಿಲ್ಲವೆ?

6–00 P.M.

SRI S. R. BOMMAI.—Sir, I raise a point of order. ಈಗ ೬ ಗಂಟೆಯಾಗಿದೆ ಸಭೆಯನ್ನು ಮುಗಿಸಬೇಕು. ಮಾನ್ಯ ಭಾಸ್ಕರನಾಯಿಡು ಅವರೂ ಇದಕ್ಕೆ ಬೆಂಬಲ ಕೊಡುತ್ತಾರೆಂದು ಅಂದುಕೊಂಡಿದ್ದೇನೆ.

Motion for Contempt of the House Passed

SRI B. BHASKAR SHETTY—.Sir,

"That this House resolves that the person calling themselves

1. Sri D.H. Keerthi Kumar s/o S.V. Hanumantha Seetty,
   B.J.P. Youth Wing Secretary Age.. 25 years,
   No. 130, 4th cross, Gandhinagar, Bangolore.
2. Sri S. Kailas, s/oS. Srjkantan, Labour Wing B.J.P,
   130, 4th Cross, Gandhinagar, Bangalore–560009.
3. Sri M. Kumar, s/o M. Muniswamaiah,
   130, 4th Cross, Gandhinagar, Bangalore, age 31 years,
   President., of N.E.S.U, S.A.K.S.,G.AE.4
4. Sri R. Purushotham,
   554, II Cross, Hanumanthanagar, Bangalore–560019
5. Sri V. Seetharam s/o late Venkatappa,
   age 23 years (Social Worker & B.J.P.
   Youva Morcha Member, No. 130, 4th Cross,
   Gandhinagar, Bangalore–560 009.
6. Sri N. H. Ramamurthy, s/o Hanumanthappa,
   Age 31 years, Srinagar, Baharatheeya Janatha party,
   Sthaneeya Secretary, Srinagar, Bangalore–560009.
7. Sri Jagadeesh s/o Seshadri,
   No. 130, 4th cross, Gandhinagar, B.J.P Office, P.U.C.
   Age 27 years.
8. Sri Balakrishna, T.R. s/o Rama Shesha Sastry,
   Malleswaram, Bangalore–560003,
   S.S.L.C. 25 years.
9. Sri Velu s/o Narayan, No. 122, Ramachandrapuram,
   2nd. Main Road, Bangalore–21.

who shouted slogans against Shri Kagodu Thimmappa (Minister for public Works) at about 3–20 p.m. today and whom the watch and ward staff took into custody immediately have committed a grave offence and are guilty of contempt of the House.

This House further resolves that they be sentenced to simple imprisonment till the adjournment of the current sittings of the House and be sent to Central Jail Bangalore.